
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಗೌರಿ

06 ಏಪ್ರಿಲ್ 2016 ಪುಟ 20 ರೂ. 15/-

ಭಾರತ್ ಮಾತಾ ಕಿ ಜೈ.... ಅಂದರೆ?





ವೀರ ನೀಚ



ವಿಚ್ಛೇದನಕ್ಕೆ 40 ಕೋಟಿ?

ಮಂಡ್ಯ

ಇನ್ಫಿ ಹುಡುಗನ 'ಡೌರಿ'ದಾಹಕ್ಕೆ ಹುಡುಗಿ ಬಲಿ

ಮೈಸೂರು

ಲ್ಯಾನ್ಸರ್ ರಾಜೇಂದ್ರ ಮುಂಡಾಯಿಸಿದ್ದು 50 ಕೋಟಿ

ಕರಾವಳಿ

ಹಾದಿ ತಪ್ಪಿದ ಹೆಂಡತಿಯೇ ಗುಂಡಿಕ್ಕಿದಳಾ?


ಬ್ಯಾಂಕ್‌ಗಳ ಎನ್‌ಪಿಎ ಎಂಬ ಹಗಲುದರೋಡ

ಇತ್ತೀಚಿನ ದಿನಗಳಲ್ಲಿ ಬ್ಯಾಂಕಗಳ ಎನ್‌ಪಿಎ - ಅಂದರೆ ಅನುತ್ಪಾದಕ ಆಸ್ತಿಗಳ - ಬಗ್ಗೆ ಬಹಳ ಚರ್ಚೆ ಪ್ರಾರಂಭ ವಾಗಿದೆ. ಅದರಲ್ಲೂ ಉದ್ಯಮಿ ವಿಜಯ ಮಲ್ಯ ಮಾಲೀಕತ್ವದ ಕಿಂಗ್‌ಫಿಶರ್ ಏರಲೈನ್ಸ್ ಸಂಸ್ಥೆ ಮುಚ್ಚಿದ ನಂತರ ಬಹಳ ಸುದ್ದಿಯಾಗುತ್ತಿದೆ. ಮಲ್ಯಗೆ ಮೇಲಿಂದ ಮೇಲೆ ಸಾಲ ನೀಡಿದ ಬ್ಯಾಂಕುಗಳ ಸಮೂಹ ಸಾಲ ವಸೂಲಿಗಾಗಿ ನ್ಯಾಯಾಲಯದ ಮೆಟ್ಟಿಲೇರಿವೆ. ವಿಮಾನಯಾನ ಉದ್ದಿಮೆ ನಷ್ಟ ಅನುಭವಿಸಿದ ಕಾರಣ ಬ್ಯಾಂಕುಗಳು ನೀಡಿದ ಸಾಲ ಅನುತ್ಪಾದಕ ಆಸ್ತಿ ಅಥವಾ ಎನ್‌ಪಿಎ ಆಗಿದೆ.

ಬ್ಯಾಂಕುಗಳ ಎನ್‌ಪಿಎಗಳ ಬಗ್ಗೆ ತಿಳಿಯಲು ಸ್ವಾತಂತ್ರ್ಯಾ ನಂತರದ ಘಟನೆಗಳ ಅವಲೋಕನ ಅವಶ್ಯಕ. ದೇಶ ಸ್ವತಂತ್ರಗೊಂಡ ನಂತರ ಅಭಿವೃದ್ಧಿಗಾಗಿ ಯೋಜನೆಗಳನ್ನು ಪ್ರಾರಂಭಿಸಿತು. ಅದರಂತೆ 1951 ರಿಂದ ಪಂಚವಾರ್ಷಿಕ ಯೋಜನೆಗಳು ಪ್ರಾರಂಭಗೊಂಡವು. ಆರ್ಥಿಕ ಚಿಂತನೆಯ ಮೂಲ ಉತ್ಪಾದನೆಯ ಮೂಲಗಳು ಸಮಾಜದ ಮಾಲೀಕತ್ವದ ಉದ್ದೇಶವಾಗಿತ್ತು, ಆದರೆ ವಾಣಿಜ್ಯ ಬ್ಯಾಂಕ್‌ಗಳು ಖಾಸಗಿಯವರ ಕೈಯಲ್ಲಿದ್ದವು. ವ್ಯಾಪಾರಿ ಕಾರ್ಪೊರೇಟ್‌ಗಳ ನಿಯಂತ್ರಣದಲ್ಲಿದ್ದವು. 1951ರಲ್ಲಿ 430 ವಾಣಿಜ್ಯ ಬ್ಯಾಂಕ್‌ಗಳಿದ್ದವು.

"ಈ ಬ್ಯಾಂಕ್‌ಗಳು ದೇಶದ ಉದ್ದೇಶಿತ ಸಾಮಾಜಿಕ ಗುರಿಗಳ ಅನುಷ್ಠಾನಕ್ಕೆ ಸಹಕರಿಸಲಿಲ್ಲ, ಬಡವರಿಗೆ, ಗುಡಿ ಕೈಗಾರಿಕೆಗಳಿಗೆ, ರೈತರಿಗೆ, ಕುಶಲಕರ್ಮಿಗಳಿಗೆ ಸಾಲ ನೀಡುತ್ತಿರಲಿಲ್ಲ, ಇವರೆಲ್ಲರೂ ಅಧಿಕ ಬಡ್ಡಿ ತೆತ್ತು ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆಯಬೇಕಿತ್ತು. ಇದನ್ನು ನಿಯಂತ್ರಿಸಲು 1951ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ರಾಷ್ಟ್ರೀಕರಣ ಮಾಡಲಾಯಿತು. 1969ರಲ್ಲಿ ರೂ.50 ಕೋಟಿ ಠೇವಣಿ ಹೊಂದಿದ್ದ 14 ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಪುನಃ 1980ರ ಏಪ್ರಿಲ್‌ನಲ್ಲಿ 6 ಬ್ಯಾಂಕ್‌ಗಳು ರಾಷ್ಟ್ರೀಕರಣಗೊಂಡವು.

ಒಟ್ಟಾರೆ ಉದ್ದೇಶ, ಸಮಾಜದ ಕೆಳಸ್ತರದವರಿಗೆ



ಅನಿಲ್ ಅಂಬಾನಿ

ಸಾಲಸೌಲಭ್ಯದ ವಿಸ್ತರಣೆ; ಗ್ರಾಮಾಂತರ ಪ್ರದೇಶಕ್ಕೂ ಬ್ಯಾಂಕಿನ ಸೌಲಭ್ಯ ಕಲ್ಪಿಸುವುದು; ಪ್ರಾದೇಶಿಕ ಅಸಮತೋಲನ ಹೋಗಲಾಡಿಸುವುದು; ಕೃಷಿ ಪ್ರಧಾನ ದೇಶದಲ್ಲಿ ಆದ್ಯತಾ ಕ್ಷೇತ್ರವಾದ ಕೃಷಿಗೆ ಬಂಡವಾಳ ಕೊರತೆ ನಿವಾರಿಸುವುದು ಆಗಿತ್ತು.

ಹೀಗೆ ಹಲವು ನಿರೀಕ್ಷೆಗಳೊಂದಿಗೆ ರಾಷ್ಟ್ರೀಕರಣಗೊಂಡ ಬ್ಯಾಂಕುಗಳು ಸಾಧಿಸಿದ್ದಾದರೂ ಏನು? ಉದ್ದೇಶಿತ ಕೃಷಿ ವಲಯಕ್ಕೆ ಅನುಕೂಲವಾಗಿದೆಯೇ? ಗುಡಿ ಕೈಗಾರಿಕೆಗಳಿಗೆ ಉತ್ತೇಜನ ಸಿಕ್ಕಿದೆಯೇ? ಎಂದು ನೋಡಿದರೆ ನಿರೀಕ್ಷೆ ತಲೆಕೆಳಗಾಗಿ ನಿಲ್ಲುತ್ತದೆ. ಖಾಸಗಿ ಕಾರ್ಪೊರೇಟ್ ಒಡೆತನದ ಬ್ಯಾಂಕ್‌ಗಳಿಗಿಂತ ರಾಷ್ಟ್ರೀಕರಣಗೊಂಡ ಬ್ಯಾಂಕ್‌ಗಳು ಖಾಸಗಿ ಉದ್ದಿಮೆದಾರರ ಏಳಿಗೆಗೆ ಟೊಂಕ ಕಟ್ಟಿ ನಿಂತಿವೆ. ಖಾಸಗಿ ಬ್ಯಾಂಕ್‌ಗಳು ನಿರ್ವಹಣೆಯಲ್ಲಿ ಮೇಲುಗೈ ಸಾಧಿಸಿವೆ. ನಷ್ಟದ ಪ್ರಮಾಣ ಕಡಿಮೆ ಇದೆ. ಹೂಡಿಕೆದಾರರಿಗೆ ಡಿವಿಡೆಂಟ್, ಬಡ್ಡಿ ನೀಡುತ್ತಿವೆ. ಆದರೆ ರಾಷ್ಟ್ರೀಕರಣಗೊಂಡ ಬ್ಯಾಂಕ್‌ಗಳು ಖಾಸಗಿ ವಲಯದ ಉದ್ದಿಮೆದಾರರ, ಕಾರ್ಪೊರೇಟ್ ಕಂಪನಿಗಳ ಮತ್ತು ಶ್ರೀಮಂತರ ಕೈಗೊಂಬೆಯಾಗಿರುವುದು ದೇಶದ ದುರ್ದೈವ.

ಬೇಕಾದವರಿಗೆ ಅರ್ಹತೆ ಮತ್ತು ಅವಶ್ಯಕತೆ ಇಲ್ಲದಿದ್ದರೂ ಸಾಲ ಮಂಜೂರಾತಿ ಯೋಜನೆ ಪರಿಶೀಲನೆಯಲ್ಲಿ ನ್ಯೂನತೆ, ವ್ಯಾಪಕ ಭ್ರಷ್ಟಾಚಾರ, ಸಾರ್ವಜನಿಕ ಹಿತಾಸಕ್ತಿ ಕಡೆಗಣನೆ, ಸ್ವಹಿತಾಸಕ್ತಿಗೆ ಆದ್ಯತೆ, ಮನಸೋ ಇಚ್ಛೆ ಸಾಲ ಮಂಜೂರಾತಿಯಿಂದಾಗಿ ಬ್ಯಾಂಕ್‌ಗಳ ಎನ್‌ಪಿಎ (Banks NPA- Non Performing Assets) ರಾಶಿ ಮುಗಿಲು ಮುಟ್ಟಿದೆ. ಎನ್‌ಪಿಎ ಎಂಬ ಅನುತ್ಪಾದಕ ಆಸ್ತಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಷೇರು ಮಾರುಕಟ್ಟೆಯಲ್ಲಿನ ಮೌಲ್ಯದ ಪ್ರತಿಶತ ನೂರೈವತ್ತರಷ್ಟು ಆಗಿದೆ. ಅಂದರೆ ಯಾರಾದರೂ ಒಂದು ಎಸ್‌ಬಿಐ ಷೇರು ಕೊಂಡರೆ, ಮಾರುಕಟ್ಟೆ ಮೌಲ್ಯ ಪ್ರತಿ ಷೇರಿಗೆ 180ರ ಆಸುಪಾಸಿನಲ್ಲಿದೆ. ರೂ.270 ಸಾಲ ನಮ್ಮ ಮೇಲೆ ಎಳೆದುಕೊಂಡಂತೆ.

ಎನ್‌ಪಿಎ ಎಂಬ ಮಾರಿ ಒಂದೇ ದಿನ ಉದ್ಭವಿಸಿದ್ದಲ್ಲ,


ಪ್ರಶಾಂತ್ ಭೂಷಣ್

ಬ್ಯಾಂಕಿನ ಆಡಳಿತಶಾಹಿ ಹಲವಾರು ವರ್ಷಗಳಿಂದ ನೀರುಣಿಸಿ ಪೋಷಿಸಿ ಬೆಳೆಸಿದ ಹೆಮ್ಮರ. ಇಂದು ಬೃಹದಾಕಾರವಾಗಿ ಬೆಳೆದು ನಿಂತಿದೆ ಅಷ್ಟೇ. ಬೆಳೆ ಸಾಲ ಪಡೆದ ರೈತ ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಕೊರಳು ಕೊಟ್ಟ, ವಿಷ ಕುಡಿದ. ಆದರೆ ಸಾಲದ ಕಾರಣಕ್ಕೆ ಒಬ್ಬನೇ ಒಬ್ಬ ಖಾಸಗಿ ಉದ್ಯಮಿಯೂ ಸತ್ತಿಲ್ಲ, ಬಹುಶಃ ಸಾಯು ವುದಿಲ್ಲ ಕೂಡ. ಮತ್ತೊಬ್ಬರ ಸಾವನ್ನು ನಿರೀಕ್ಷಿಸುವ ವಿಕೃತ ಮನಸ್ಸು ಕೂಡ ಬೇಡ. ಖಾಸಗಿ ಕಾರ್ಪೊರೇಟ್ ಕುಳಗಳಿಗೆ ನಾಜೂಕು ಇದೆ. ಕಾನೂನಿನ ತಿರುಳಿನ ಅರಿವಿದೆ. ಪಾಪ ರೈತ ಅಸಹಾಯಕ ಅಷ್ಟೇ. ಉದ್ಯಮಿಗಳು ಕಂಪನಿಯ ನಿರ್ದೇಶಕರಾಗಿ ವೈಯಕ್ತಿಕ ಹೊಣೆಗಾರಿಕೆಯಿಂದ ನುಣುಚಿ ಕೊಳ್ಳುವುದರಿಂದ ಎನ್‌ಪಿಎ ಹೆಮ್ಮರವಾಗಿ ಬೆಳೆದುನಿಂತಿದೆ.

ರಘುರಾಂ ರಾಜನ್ ಆರ್‌ಬಿಐ ಗೌರ್ನರ್ ಆದಮೇಲೆ ಬ್ಯಾಂಕಿಂಗ್ ಕ್ಷೇತ್ರದ ಶುದ್ಧೀಕರಣಕ್ಕೆ ಪ್ರಯತ್ನಿಸಿದಂತಿದೆ. ಮಾರ್ಚ್ 2017ರೊಳಗೆ ಬ್ಯಾಂಕ್‌ಗಳು ತಮ್ಮ ಬ್ಯಾಲೆನ್ಸ್‌ಶೀಟ್(ಲೆಕ್ಕಪತ್ರ)ಗಳ ಶುದ್ಧೀಕರಣಕ್ಕೆ ಗಡುವು ನೀಡಲಾಗಿದೆ. ಹೆಸರೆ ಸೂಚಿಸುವಂತೆ ಕೊಳಕನ್ನು ತೊಳೆಯುವುದು. ಇದು ಸತ್ಯಂ ಕಂಪ್ಯೂಟರ್ಸ್‌ನ ರಾಮಲಿಂಗರಾಜು ಕಂಪನಿಯ ಲೆಕ್ಕಪತ್ರಗಳಲ್ಲಿ ಆಡಿಟರ್‌ಗಳ ಸಹಾಯದಿಂದ ತಿದ್ದಿ ಹೆಚ್ಚಿಗೆ ತೋರಿಸಿದಂತೆ. ಸತ್ಯಂ ಕಂಪ್ಯೂಟರ್‌ನ ರಾಮಲಿಂಗರಾಜ 2003 ರಿಂದ 2008 ರವರೆಗೆ ಕಂಪನಿಯ ಆದಾಯದ ಬಗ್ಗೆ ಅತೀ ರಂಜಕ, ಅತಿಶಯದೊಂದಿಗೆ ಸುಳ್ಳು ಲೆಕ್ಕಪತ್ರ ತೋರಿಸಿದ. ಸುಳ್ಳು ಗ್ರಾಹಕರ ಹೆಸರಿನಲ್ಲಿ ಆದಾಯ, ನಕಲಿ ಬ್ಯಾಂಕ್ ಲೆಕ್ಕಪತ್ರ ಮತ್ತು ನಿಶ್ಚಿತ ಠೇವಣಿಯ ಪತ್ರಗಳನ್ನು ಕಲರ್ ಜೆರಾಕ್ಸ್‌ನಿಂದ ಸಿದ್ಧಪಡಿಸಿದ್ದ. ಸೆಪ್ಟೆಂಬರ್-2008ರ ತ್ರೈಮಾಸಿಕದಲ್ಲಿ ಕಂಪನಿಯ ಲೆಕ್ಕಪತ್ರದಂತೆ ರೂ. 5,313 ಕೋಟಿ ಹಣ ಇರುವುದಾಗಿ ತೋರಿಸಿದ್ದ.

ಆದರೆ ವಾಸ್ತವವಾಗಿ ಇದ್ದ ಹಣ ಕೇವಲ ರೂ.273 ಕೋಟಿ ಮಾತ್ರ. ದಿನಾಂಕ 7-1-2009 ರಂದು ಕಂಪನಿಯ ನಿರ್ದೇಶಕರಿಗೆ ಪತ್ರ ಬರೆದು ಕಂಪನಿಯ ಲೆಕ್ಕಪತ್ರ ಆದಾಯಗಳನ್ನು ಅತಿಶಯಗೊಳಿಸಿರುವುದಾಗಿ ಬಹಿರಂಗಗೊಳಿಸಿದ. ರಾಮಲಿಂಗರಾಜು ಮಾಡಿದ ಕೃತ್ಯ ಕ್ರಿಮಿನಲ್ ಸ್ವರೂಪದ್ದು, ನ್ಯಾಯಾಲಯವು ಶಿಕ್ಷೆ ನೀಡಿತು. ಸದ್ಯ ಕಬ್ಬಿಣದ ಕಂಬಿಗಳ ನಡುವೆ ದಿನ ನೂಕುತ್ತಿದ್ದಾನೆ. ಸುಳ್ಳು ಲೆಕ್ಕಪತ್ರ ತೋರಿಸಿರುವ ಬ್ಯಾಂಕಿನ ಆಡಳಿತಶಾಹಿ ಇನ್ನೂ ಹವಾನಿಯಂತ್ರಿತ ಕೊಠಡಿಗಳಲ್ಲಿ ನೆಮ್ಮದಿಯ ಬದುಕು ಸಾಗಿಸುತ್ತಿದೆ. 2008ರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಎನ್‌ಪಿಎ ರೂ. 53,917 ಕೋಟಿ ಇತ್ತು, ಸೆಪ್ಟೆಂಬರ್ 2015ರ ಹೊತ್ತಿಗೆ ರೂ. 3,41,641 ಕೋಟಿಗೆ ಏರಿತು. ವಿಶೇಷವೆಂದರೆ 2008ರಲ್ಲಿ ಖಾಸಗಿ ಬ್ಯಾಂಕ್‌ಗಳ ಎನ್‌ಪಿಎ ಅಧಿಕವಾಗಿತ್ತು, ಮೊದಲನೆಯದಾಗಿ ಐಸಿಐಸಿಐ ಬ್ಯಾಂಕ್, ನಂತರದ ಸ್ಥಾನಗಳಲ್ಲಿ ಕರ್ನಾಟಕ ಬ್ಯಾಂಕ್, ಲಕ್ಷ್ಮೀ ವಿಲಾಸ್ ಬ್ಯಾಂಕ್, ಮಹೀಂದ್ರ ಮತ್ತು ಇಂಡಸ್ ಇಂಡ್ ಬ್ಯಾಂಕ್‌ಗಳಿದ್ದವು. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಸೆಂಟ್ರಲ್ ಬ್ಯಾಂಕ್, ಯುಕೋ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳಿದ್ದವು. ಮಾರ್ಚ್ 2009ರ ನಂತರ ಚಿತ್ರಣ ಬದಲಾಯಿತು. ಇದೀಗ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಎನ್‌ಪಿಎ ಅಧಿಕವಾಗಿದ್ದು, ಎಸ್‌ಬಿಐ ಮತ್ತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗಳು ಮುಂಚೂಣಿಯಲ್ಲಿವೆ. ಮಾರ್ಚ್ 2014ರ ನಂತರ ವಿಷಮ ಪರಿಸ್ಥಿತಿ ಪ್ರಾರಂಭವಾಯಿತು. ನರೇಂದ್ರ ಮೋದಿಯವರ 20 ತಿಂಗಳ ಆಡಳಿತಾವಧಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ದಿವಾಳಿಯತ್ತ ಮುಖ ಮಾಡಿವೆ ಎಂದರೆ ಅತಿಶಯೋಕ್ತಿಯಲ್ಲ, ತೊಂದರೆಯಲ್ಲಿರುವ 10 ಬ್ಯಾಂಕ್‌ಗಳ ಪೈಕಿ 9 ಸರ್ಕಾರಿ ಸ್ವಾಮ್ಯದ್ದು.

2013-2015ರ ಆರ್ಥಿಕ ವರ್ಷಗಳಲ್ಲಿ ಮನ್ನಾ ಮಾಡಿರುವ ಎನ್‌ಪಿಎ ಮತ್ತು ಅನುತ್ಪಾದಕ ಆಸ್ತಿ ಅಥವಾ ಕೆಟ್ಟ ಸಾಲದ ಮೊತ್ತ ರೂ. 1.14 ಲಕ್ಷ ಕೋಟಿ. ಆರ್‌ಬಿಐನ ಮಾಹಿತಿಯಂತೆ, ಮಾರ್ಚ್ 2012ರಲ್ಲಿ ರೂ. 15,551 ಕೋಟಿ ಇದ್ದ ಎನ್‌ಪಿಎ ಮಾರ್ಚ್ 2015ರ ಅಂತ್ಯಕ್ಕೆ ರೂ.52,542 ಕೋಟಿಗೆ ಏರಿತು. ಅಂಕಿ ಅಂಶಗಳ ಮಾಹಿತಿಯಂತೆ ಏರಿಕೆ ವಾರ್ಷಿಕ 40.5% ಹೆಚ್ಚಳ. ವಿಂಡೋ ಡ್ರೆಸ್ಸಿಂಗ್ ಮತ್ತು ಕೊಳಕು ಲೆಕ್ಕಪತ್ರ ಹೊರತುಪಡಿಸಿ 2004 ರಿಂದ ಮತ್ತು 2015 ರವರೆಗೆ


ರಘುರಾಂ ರಾಜನ್

ಮನ್ನಾ ಮಾಡಿದ ಎನ್‌ಪಿಎ ಮೊತ್ತ ರೂ. 2.11 ಲಕ್ಷ ಕೋಟಿ.

ದಿನಾಂಕ 8-3-2016 ರಂದು ರಾಜ್ಯ ಸಭೆಯಲ್ಲಿ ಅರ್ಥ ಸಚಿವ ಶ್ರೀ ಅರುಣ್ ಜೇಟ್ಲಿರವರು ಲಿಖಿತ ಹೇಳಿಕೆ ನೀಡಿದ್ದಾರೆ. ಮಾರ್ಚ್ 2015 ರಿಂದ ಡಿಸೆಂಬರ್ 2015ರ 10 ತಿಂಗಳ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಎನ್‌ಪಿಎ ಮೊತ್ತ ರೂ. 2,67,065 ರಿಂದ ರೂ. 3,61,731 ಗೆ ಏರಿಕೆಯಾಗಿದೆ. ಅಂದರೆ ರೂ. 94,666 ಕೋಟಿ ಹೆಚ್ಚಳ. Gross Non performing Assets ಮೊತ್ತ ಮಾರ್ಚ್ 2015 ರಲ್ಲಿ 5.43% ಇದಿದ್ದು, ಡಿಸೆಂಬರ್ 2015ರಲ್ಲಿ 7.30%ಕ್ಕೆ ಏರಿಕೆಯಾಗಿದೆ.

ಎನ್‌ಪಿಎ ಮನ್ನಾ ಮಾಡುವಲ್ಲಿ ಬ್ಯಾಂಕ್‌ಗಳ ಧಾರಾಳತನದ ನಿದರ್ಶನವನ್ನು ಕೆಳಗಿನ ಕೋಷ್ಟಕದಲ್ಲಿ ನೋಡಬಹುದಾಗಿದೆ.

2015 ರಲ್ಲಿ ಸಾಲ ಮನ್ನಾ ಮಾಡಿದ 10 ಧಾರಾಳ ಬ್ಯಾಂಕ್‌ಗಳ ಮೊತ್ತ, (ರೂ. ಕೋಟಿಗಳಲ್ಲಿ)

1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ -21,313
2. ಪಂಜಾಬ್ ನ್ಯಾಷನಲ್ ಬ್ಯಾಂಕ್ -6,587
3. ಇಂಡಿಯನ್ ಓವರ್‌ಸೀಸ್ ಬ್ಯಾಂಕ್- 3,131
4 ಅಲಹಾಬಾದ್ ಬ್ಯಾಂಕ್ -2,109
5. ಐಡಿಬಿಐ -1,609
6. ಬ್ಯಾಂಕ್ ಆಫ್ ಬರೋಡಾ- 1,564
7. ಸಿಂಡಿಕೇಟ್ ಬ್ಯಾಂಕ್ -1,527
8. ಕೆನರಾ ಬ್ಯಾಂಕ್- 1,472
9. ಯುಕೋ ಬ್ಯಾಂಕ್ -1,401
10. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ-1,386

ಕಳೆದ ಮೂರು ವರ್ಷಗಳಲ್ಲಿ ಹೆಚ್ಚಿನ ಸಾಲ ಮನ್ನಾ ಮಾಡಿದ 10 ಧಾರಾಳ ಬ್ಯಾಂಕ್‌ಗಳು (ಕೋಟಿ ರೂಗಳಲ್ಲಿ)

1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ- 40,084
2. ಪಂಜಾಬ್ ನ್ಯಾಷನಲ್ ಬ್ಯಾಂಕ್- 9,531
3 ಇಂಡಿಯನ್ ಓವರ್‌ಸೀಸ್ ಬ್ಯಾಂಕ್- 6,247
4. ಇಂಡಿಯನ್ ಬ್ಯಾಂಕ್ -4,983
5. ಬ್ಯಾಂಕ್ ಆಫ್ ಬರೋಡಾ -4,884
6. ಕೆನರಾ ಬ್ಯಾಂಕ್ -4,598
7. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ -4,442
8. ಅಲಹಾಬಾದ್ ಬ್ಯಾಂಕ್ -4,243
9. ಸಿಂಡಿಕೇಟ್ ಬ್ಯಾಂಕ್ -3,849
10. ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ -3,593

ಒಟ್ಟಾರೆ ಎನ್‌ಪಿಎಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಪಾಲು 85%. ಖಾಸಗಿ ಬ್ಯಾಂಕ್‌ಗಳದ್ದು ಕೇವಲ 15% ಮಾತ್ರ. ಮಾರ್ಚ್ 2015ರ ಅಂತ್ಯಕ್ಕೆ ನಾಲ್ಕು ಪ್ರಮುಖ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ರೂ. 5,000 ಕೋಟಿಗಿಂತ ಹೆಚ್ಚು ಸಾಲ ಪಡೆದ 44 ಸಾಲಗಾರರ ವಿವರ ಇಂತಿವೆ.

ಬ್ಯಾಂಕ್ ಸಾಲಗಾರರ ಸಂಖ್ಯೆ ಸಾಲದ ಮೊತ್ತ ರೂ.ಕೋಟಿಗಳಲ್ಲಿ

ಬ್ಯಾಂಕ್ ಆಫ್ ಬರೋಡಾ - 1 5642
ಬ್ಯಾಂಕ್ ಆಫ್ ಇಂಡಿಯ - 1 10034
ಕೆನರಾಬ್ಯಾಂಕ್ - 2 22604
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ - 39 442267
ಒಟ್ಟು - 44 487522


ಎನ್‌ಪಿಎಗೂ ಒಟ್ಟು ನೀಡಲಾದ ಸಾಲದ ಮೇಲಿನ ರೇಷಿಯೋ ಆಧಾರದ ಮೇಲೆ ಬ್ಯಾಂಕ್‌ಗಳ ರೇಟಿಂಗ್ ಮಾಡಲಾಗುತ್ತದೆ. ರೇಷಿಯೋ ಕಡಿಮೆಯಿದ್ದಷ್ಟು ಬ್ಯಾಂಕ್‌ಗಳು ಸದೃಢ ಮತ್ತು ಆರೋಗ್ಯಕರ. ಎನ್‌ಪಿಎ ಪ್ರಮಾಣ ಹೆಚ್ಚಾದಂತೆ ಬ್ಯಾಂಕ್‌ನ ನಿರ್ವಹಣೆಯಲ್ಲಿ ದೋಷ, ವಸೂಲಾಗದ ಸಾಲದ ಪ್ರಮಾಣ ಹೆಚ್ಚು ಎಂದರ್ಥ.

ಕೆಳಗಿನ ಕೋಷ್ಟಕದಲ್ಲಿನ ಗ್ರಾಫ್‌ನಲ್ಲಿ 2014ರ ಪ್ರಥಮ ತ್ರೈಮಾಸಿಕದಿಂದ 2015ರ ಮೊದಲ ತ್ರೈಮಾಸಿಕದವರೆಗಿನ ವಿವರ ಗಮನಿಸಬಹುದಾಗಿದೆ. ಅದರಂತೆ ಯೆಸ್ ಬ್ಯಾಂಕ್, ನಂತರದಲ್ಲಿ ಹೆಚ್‌ಡಿಎಫ್‌ಸಿ, ಇಂಡಸ್ ಇಂಡ್ ಮತ್ತು ಸೌತ್ ಇಂಡಿಯನ್ ಬ್ಯಾಂಕ್‌ಗಳ ಎನ್‌ಪಿಎ ರೇಷಿ… ಕಡಿಮೆ ಇದೆ. ಆಕ್ಸಿಸ್ ಬ್ಯಾಂಕ್‌ನ ಎನ್‌ಪಿಎ ಪ್ರಮಾ… ತ್ರೈಮಾಸಿಕದ ಅಂತರದಲ್ಲಿ 1.22% ರಿಂದ 1.… ಗೆ ಹೆಚ್ಚಳವಾಗಿದೆ. ಇದಕ್ಕೆ ವಿರುದ್ಧವಾಗಿ ಸರ್ಕಾರಿ ಸ್ವಾ… ಬ್ಯಾಂಕ್‌ಗಳು ಬಹಳ ಕಳಾಹೀನವಾಗಿದೆ. ಯುನೈ… ಬ್ಯಾಂಕ್ ಆಫ್ ಇಂಡಿಯ ಎನ್‌ಪಿಎ ಪ್ರಮಾಣ 20… ಮೊದಲ ತ್ರೈಮಾಸಿಕದಲ್ಲಿ 5.59% ಇದ್ದು, … ತ್ರೈಮಾಸಿಕದಲ್ಲಿ 7.52%, ಮೂರನೇ ತ್ರೈಮಾಸಿ… 10.82% ಇವೆ. 2015ರ ಮೊದಲ ತ್ರೈಮಾಸಿ… 10.49% ಇದೆ. ಇದರಂತೆ ಬಹುಪಾಲು ಎಲ್ಲಾ ಸ… ಸ್ವಾಮ್ಯದ ಬ್ಯಾಂಕ್‌ಗಳ ಎನ್‌ಪಿಎ ಪ್ರಮಾ… ಆತಂಕಕಾರಿಯಾಗಿದೆ. ಕಳೆದ 2 ತಿಂಗಳಲ್ಲಿ ಶೇರು ಮಾರ… ಕಳಾಹೀನವಾಗಿದ್ದರೂ, ಕೆಟ್ಟ ಸಾಲ ಕಡಿಮೆ ಇರುವುದ… ಯಸ್ ಬ್ಯಾಂಕ್ ಶೇರು ಗೂಳಿಯಂತೆ ಮುನ್ನುಗ್ಗ… ಸದ್ಯ ಪ್ರತಿ ಶೇರು ರೂ.900 ರ ಆಸುಪಾಸಿನಲ್ಲಿದೆ.

2014ರ ಮೊದಲ ತ್ರೈಮಾಸಿಕದಿಂದ 20… ಮೊದಲ ತ್ರೈಮಾಸಿಕದಲ್ಲಿ ಒಟ್ಟಾರೆ ಎನ್‌ಪಿಎ… ಹೆಚ್ಚಳವನ್ನು ಕೆಳಗಿನ ಗ್ರಾಫ್‌ನಲ್ಲಿ ನೋಡಬಹುದಾಗಿ…

ಈ ರೀತಿ ಬ್ಯಾಂಕ್‌ಗಳ ಎನ್‌ಪಿಎನಲ್ಲಿ ಹೆಚ್ಚಳವಾ… ಕಾರಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾ…

1. ಉದ್ದೇಶಪೂರ್ವಕ ಸುಸ್ತಿದಾರರು
2. ಸಾಲ ಪಡೆಯುವಲ್ಲಿ ಮೋಸದ ಉದ್ದೇಶ
3. ಬ್ಯಾಂಕ್‌ಗಳ ಅಸಮರ್ಪಕ ನಿರ್ವಹಣೆ
4. ಸಂಪನ್ಮೂಲಗಳ ದುರುದ್ದೇಶದಿಂದ ಸಾಲ ವಿತ…
5. ಕೆಟ್ಟದಾಗಿ ಸಾಲಗಾರರ ಆಯ್ಕೆ
6. ಯೋಜನೆಗೆ ಅಗತ್ಯಕ್ಕಿಂತ ಕಡಿಮೆ ಮತ್ತು … ಸಾಲ ವಿತರಣೆ
7. ಸಕಾಲದಲ್ಲಿ ಸಾಲ ವಿತರಣೆಯಾಗದಿರುವುದು
8. ಯೋಜನೆಯನ್ನು ಸಕಾಲದಲ್ಲಿ ಮುಗಿಸದಿರುವು…
9. ಸಾಲದ ಅವಶ್ಯಕತೆಯ ಮೌಲ್ಯಮಾಪನದಲ್ಲಿ ದೋ…
10. ಸಾಲ ಪಡೆದ ಕಂಪನಿಗಳ ಮೇಲ್ವಿಚಾ… ಇಲ್ಲದಿರುವುದು


ಗೌತಮ್ ಅದಾನಿ

11. ಸಾಲ ಪಡೆದವರ ಅನುಪಾಲನೆ ಇಲ್ಲದಿರುವುದ…
12. ಕೆಟ್ಟ ಸಾಲಗಳ ಮಂಜೂರಾತಿ.
13. ಬ್ಯಾಂಕುಗಳ ನಡುವೆ ಸಾಲ ನೀಡಲು ಸ್ಪರ್ಧೆ.
14. ಕಂಪನಿಗಳು ಸುಳ್ಳು ಲೆಕ್ಕಪತ್ರ ತೋರಿಸಿ … ಪಡೆಯುವುದು. ಇದು ಸತ್ಯಂ ಕಂಪ್ಯೂಟರ್… ರಾಮಲಿಂಗರಾಜು ಕಂಪನಿಯ ಲೆಕ್ಕಪತ್ರಗ… ಆಡಿಟರ್‌ಗಳ ಸಹಾಯದಿಂದ ತಿದ್ದಿ ಹೆ… ತೋರಿಸಿದಂತೆ
15. ವಿಂಡೋ ಡ್ರೆಸ್ಸಿಂಗ್-ಬ್ಯಾಂಕುಗಳ ಮತ್ತು ಸಾಲಗಾ… ನಡುವೆ ಒಳ ಒಪ್ಪಂದದಿಂದ ಸಾಲದ ಕಂತ… ಪಾವತಿಸುವ ಬದಲು ಹೆಚ್ಚು ಸಾಲ ಬಿಡುಗಡೆ ಮ… ಸಾಲದ ಕಂತನ್ನು ಪಾವತಿಸಿದ್ದಾರೆ ಎಂದು … ಪುಸ್ತಕಗಳಲ್ಲಿ ಹೊಂದಾಣಿಕೆ. ಸೆಪ್ಟೆಂಬರ್ 20… ತ್ರೈಮಾಸಿಕದ ಅಂತ್ಯಕ್ಕೆ ICRA ವರದಿಯಂತೆ CI… (Corporate Debt restructurin… ರನ್ವಯ ಒಟ್ಟು 3.62 ಟ್ರೀಲಿಯನ್ ಸಾಲದಲ್ಲಿ … 2.72 ಟ್ರಿಲಿಯನ್ ಮರು ಹೊಂದಾಣಿಕೆಯಾ… ಅಂದರೆ ಸಾಲ ಮರುಪಾವತಿ ಬದಲು, ಸಾ… ಜೊತೆಗೆ ಇನ್ನಷ್ಟು ಸಾಲ ಮಂಜೂರು ಮಾಡಿ, ಬ… ಸರಿದೂಗಿಸಿ, ಸಾಲದ ಕಂತುಗಳ ಮರುಪಾವತಿಯೆಂ… ಬ್ಯಾಂಕ್‌ಗಳ ಘೋಷಣೆ. ಇದನ್ನು (Wind… Dressing) ವಿಂಡೋ ಡ್ರೆಸ್ಸಿಂಗ್ ಎನ್ನುತ್ತಾ… ಮನೆಯ ಹುಳುಕು ಕೊಳಕು ಹೊರಗೆ ಕಾಣದ… ಕಿಟಕಿಗೆ ಶುಭ್ರ ಬಟ್ಟೆಗಳನ್ನು ಹಾಕಿ ಫರ್ನಿಶಿಂ… ಮಾಡಿದಂತೆ.
16. ಏಕ ಮಾಲಿಕತ್ವದ ಮತ್ತು ಪಾಲುದಾರಿಕೆ… ಸಂಸ್ಥೆಯವರು ಬ್ಯಾಂಕ್‌ಗಳಿಂದ ಸಾಲ ಪಡೆದಲ್ಲಿ ಸಾ… ವೈಯಕ್ತಿಕ ಹೊಣೆಗಾರರಾಗಿರುತ್ತಾರೆ. ಆದರೆ ಪ್ರೈವೇ… ಲಿಮಿಟೆಡ್ ಮತ್ತು ಪಬ್ಲಿಕ್ ಲಿಮಿಟೆಡ್ ಕಂಪನಿ… ಸಾಲ ಪಡೆದಲ್ಲಿ ಸಾಲಕ್ಕೆ ಕಂಪನಿಯ ನಿರ್ದೇಶ…

⇨ 1…

ಈಗ ಪುಣೆಯಲ್ಲೂ ಶುರುವಾಗಿದೆ ಯುವಜನತೆಯ ವಿರೋಧ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

"ಇವತ್ತು ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದಲ್ಲಿ ಪೊಲೀಸ್ ರಾಜ್ ತಾಂಡವವಾಡುತ್ತಿದೆ. ಅಲ್ಲಿನ ವಿದ್ಯಾರ್ಥಿಗಳು ನೀರಿಲ್ಲದೆ, ಆಹಾರ ಇಲ್ಲದೆ ಕಂಗಾಲಾಗಿದ್ದಾರೆ. ಆದರೆ ಮಾಧ್ಯಮಗಳು ಈ ಕುರಿತು ವರದಿ ಮಾಡುತ್ತಿಲ್ಲವಾದ್ದರಿಂದ ಹಲವು ವಿದ್ಯಾರ್ಥಿಗಳು ತಮಗೆ ಗೊತ್ತಿರುವವರಿಗೆಲ್ಲ ಫೋನ್ ಮಾಡಿ ತಮ್ಮ ವಿಶ್ವವಿದ್ಯಾಲಯದಲ್ಲಿನ ಪರಿಸ್ಥಿತಿಯ ಬಗ್ಗೆ ವಿವರಗಳನ್ನು ನೀಡುತ್ತಿದ್ದಾರೆ.

ಹಾಗೆಯೇ ನಿನ್ನೆ ರೋಹಿತ್ ವೇಮುಲನ ಮಿತ್ರ ಮತ್ತು ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯ ನಾಯಕರಾದ ಉಮಾಮಹೇಶ್ವರ್ ನನಗೆ ಫೋನ್ ಮಾಡಿದ್ದರು. "ಮೇಡಂ ಇವತ್ತಿನ ಸುದ್ದಿಗಳು ನಿಮಗೆ ಗೊತ್ತಾದವಾ?" ಎಂದು ಕೇಳಿದರು. ನಾನು ಪತ್ರಿಕೆಯ ಕೆಲಸದಲ್ಲಿ ಮುಳುಗಿದ್ದರಿಂದ "ಸ್ವಲ್ಪ ಗೊತ್ತಾಗಿದೆ. ಫೇಸ್‌ಬುಕ್‌ನಲ್ಲಿ ಹಲವರು ಪೋಸ್ಟ್ ಮಾಡಿರುವುದನ್ನು ಓದಿದೆ"



ಎಂದೆ. ಏನಾಗಿತ್ತೆಂದರೆ, ರೋಹಿತ್ ವೇಮುಲನನ್ನು ಸಾವಿಗೆ ದೂಡಿದ ಉಪಕುಲಪತಿ ಮತ್ತು ದಲಿತ ದ್ರೋಹಿ ಅಪ್ಪಾರಾವ್ ಎಂಬಾತ ಕಿಂಚಿತ್ತೂ ಲಜ್ಜೆ ಇಲ್ಲದೆ ಎರಡು ತಿಂಗಳ ರಜೆಯಿಂದ ವಾಪಾಸ್ಸಾಗಿದ್ದ. ಮಾತ್ರವಲ್ಲ ತನ್ನನ್ನು "ಸಂತೋಷದಿಂದ ಆಹ್ವಾನಿಸಲು" ಎಬಿವಿಪಿಯ ಸದಸ್ಯರಿಗೂ ಮತ್ತು ಹಲವು ದಲಿತ ದ್ರೋಹಿ ಪ್ರಾಧ್ಯಾಪಕರಿಗೂ ಸೂಚಿಸಿದ್ದ. ಜೊತೆಗೆ ಹೆಚ್ಚು ಜನರಿಗೆ ಗೊತ್ತಾಗದಂತೆ ವಿವಿಯ ಆವರಣದಲ್ಲಿರುವ ತನ್ನ ನಿವಾಸವನ್ನು ಹೊಕ್ಕಿದ್ದ. ಈ ಕುರಿತ ಸುದ್ದಿ ವಿವಿ ಒಳಗೆ ಹರಿದಾಡಿದಂತೆ ದಲಿತ ಮತ್ತು ಪ್ರಗತಿಪರ ವಿದ್ಯಾರ್ಥಿಗಳು ರೊಚ್ಚಿಗೆದ್ದರು. ಅವರೆಲ್ಲ ಜೊತೆಗೂಡಿ ಆತನ ನಿವಾಸದ ಮೇಲೆ ದಾಳಿ ಮಾಡಿದರು. ಆದರೆ ಇವರು ದಾಳಿ ಮಾಡಿದ್ದಕ್ಕಿಂತ ಹೆಚ್ಚು ದಾಳಿ ಮಾಡಿದ್ದು ಎಬಿವಿಪಿ ವಿದ್ಯಾರ್ಥಿಗಳು. ಯಾಕೆಂದರೆ ಅದನ್ನೆಲ್ಲ ರೋಹಿತ್ ವೇಮುಲನ ಬೆಂಬಲಿಗರ ಮೇಲೆ ಹೊರಿಸುವ ಕುತಂತ್ರ ಅವರದ್ದಾಗಿತ್ತು.

ಇಷ್ಟಾಗುತ್ತಿದ್ದಂತೆ ಉಪಕುಲಪತಿ ಪೊಲೀಸರನ್ನು ವಿವಿಗೆ ಕರೆಸಿಕೊಂಡ. ಇಂತಹ ಆಹ್ವಾನಕ್ಕಾಗಿ ಕಾದು ಕೂತಿದ್ದ ಪೊಲೀಸರು ದೊಡ್ಡ ಸಂಖ್ಯೆಯಲ್ಲಿ ಜಮೆಯಾದರು. ಉಪಕುಲಪತಿಯ ಮನೆ ಮುಂದೆ ಧರಣಿ ಕೂತಿದ್ದ ವಿದ್ಯಾರ್ಥಿಗಳನ್ನು ಬಡಿಯಲಾರಂಭಿಸಿದರು. ಹೆಣ್ಣುಮಕ್ಕಳು, ಗಂಡು ಮಕ್ಕಳು ಎಂದು ನೋಡದೆ ಎಲ್ಲರನ್ನು ಚಚ್ಚಲಾರಂಭಿಸಿದರು. "ಬಹಳಷ್ಟು ಜನಕ್ಕೆ ಗಾಯಗಳಾಗಿವೆ. ಕನಿಷ್ಠ ಇಪ್ಪತ್ತು ವಿದ್ಯಾರ್ಥಿಗಳು ಆಸ್ಪತ್ರೆ ಸೇರಿದ್ದಾರೆ. ಒಬ್ಬರಿಗೆ ಶಸ್ತ್ರಚಿಕಿತ್ಸೆ ಆಗಿದೆ" ಎಂದು ಉಮಾಮಹೇಶ್ವರ ಹೇಳಿದರು.

"ನಮ್ಮ ಮೇಲೆ ದಾಳಿ ಮಾಡಿದ್ದಲ್ಲದೆ ಈಗ ಇನ್ನೂ ಹೆಚ್ಚು ಕಷ್ಟ ಕೊಡಲಾರಂಭಿಸಿದ್ದಾರೆ. ನಮ್ಮ ಹಾಸ್ಟಲ್‌ಗಳಿಗೆ ನೀರು ಮತ್ತು ವಿದ್ಯುತ್ ಸರಬರಾಜನ್ನು ಕತ್ತರಿಸಿದ್ದಾರೆ. ಇಲ್ಲಾಗುತ್ತಿರುವುದು ಹೊರ ಜಗತ್ತಿಗೆ ಗೊತ್ತಾಗಬಾರದೆಂದು ಇಂಟರ್‌ನೆಟ್ ಕನೆಕ್ಷನ್ ಕೂಡ ಕಟ್ ಮಾಡಿದ್ದಾರೆ. ಆದರೆ ಇಲ್ಲಿನ ಮಾಧ್ಯಮಗಳು ಇದ್ಯಾವುದರ ಬಗ್ಗೆಯೂ ವರದಿ ಮಾಡುತ್ತಿಲ್ಲ. ನೀವಾದರೂ ನಿಮ್ಮ ಪತ್ರಿಕೆಯಲ್ಲಿ ಇದರ ಬಗ್ಗೆ ಬರೆದು ಜನರಿಗೆ ತಿಳಿಸಿರಿ ಪ್ಲೀಸ್" ಎಂದು ಉಮಾಮಹೇಶ್ವರ ಮನವಿ ಮಾಡಿಕೊಂಡರು. ನಿನ್ನೆ ರಾತ್ರಿ ಹೈದರಾಬಾದ್ ವಿದ್ಯಾರ್ಥಿಗಳು ಅದು ಹೇಗೋ ಕಷ್ಟಪಟ್ಟು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ಪೊಲೀಸ್ ಕ್ರೌರ್ಯದ ವೀಡಿಯೋ ನೋಡಿದಾಗ ತತ್ತರಿಸಿ ಹೋದೆ. ಪೊಲೀಸರಿಗೆ ಮಣಿಯದ ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ಹಿಡಿದುಕೊಂಡು ಕೂತಿದ್ದರೆ ಪೊಲೀಸರು ಮುಲಾಜಿಲ್ಲದೆ ಅವರನ್ನೆಲ್ಲ ಜಗ್ಗಾಡುತ್ತಿದ್ದರು. ಆಮೇಲೆ ಬಡಿಯುತ್ತಾ ಪೊಲೀಸ್ ವ್ಯಾನ್‌ಗೆ ತುಂಬುತ್ತಿದ್ದರು. ಕೆಲವರನ್ನು ಅಟ್ಟಿಸಿಕೊಂಡು ಓಡಿಸುತ್ತಿದ್ದರು. ಆ ವಿದ್ಯಾರ್ಥಿಗಳು ಅಪ್ಪಾ ರಾವ್ ಎಂಬ ಕ್ರಿಮಿನಲ್‌ನನ್ನು ವಿರೋಧಿಸಿದ್ದಕ್ಕೆ ಇಂತಹ ಶಿಕ್ಷೆಯೇ? ಇದೆಂತಹ ನ್ಯಾಯ? ಅನ್ನಿಸಿತು.

ಇವತ್ತು ಮಧ್ಯಾಹ್ನ ಶ್ರೀಕಾಂತ್ ಎಂಬ ಕರ್ನಾಟಕ ಮೂಲದ ಮತ್ತೊಬ್ಬ ವಿದ್ಯಾರ್ಥಿ ಫೋನ್ ಮಾಡಿದ್ದ "ನಿನ್ನೆ ರಾತ್ರಿ ಸುಮಾರು 70 ವಿದ್ಯಾರ್ಥಿಗಳನ್ನು ಮತ್ತು ಹಲವು ಪ್ರಾಧ್ಯಾಪಕರನ್ನು ಪೊಲೀಸರು ಹೊತ್ತೊಯ್ದಿದ್ದಾರೆ. ಅವರೆಲ್ಲ ಎಲ್ಲಿದ್ದಾರೆ, ಹೇಗಿದ್ದಾರೆ ಎಂಬ ಮಾಹಿತಿಯೂ ನಮಗಿಲ್ಲ. ಜೊತೆಗೆ ಬೆಳಗ್ಗೆಯಿಂದ ಇಲ್ಲಿ ಕುಡಿಯಲು ಒಂದು ಹನಿ ನೀರೂ ಸಿಗುತ್ತಿಲ್ಲ. ಇಲ್ಲಿರುವ ಕ್ಯಾಂಟೀನ್ ಮತ್ತು ಇತರೆ ಚಿಕ್ಕಪುಟ್ಟ ಹೋಟೇಲ್‌ಗಳನ್ನೆಲ್ಲ ಬಂದ್ ಮಾಡಲಾಗಿದೆ. ನೀರು, ಊಟ ಎಂದು ಹೊರಗೆ ಹೋದರೆ ಪೊಲೀಸರು ಬಂಧಿಸುವ ಅಪಾಯ ಇದೆ. ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ನಮ್ಮ ಮೊಬೈಲ್‌ಗಳ ಬ್ಯಾಟರಿಗಳು ಡೌನ್ ಆಗುತ್ತಿವೆ. ನಾಳೆಯಿಂದ ನಾವು ಯಾರಿಗೂ ಫೋನ್ ಕೂಡ ಮಾಡಲೂ ಸಾಧ್ಯವಿಲ್ಲವೇನೋ" ಎಂದ ಶ್ರೀಕಾಂತ್. ಇವತ್ತು ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷ ಕನ್ಹಯ್ಯ ಹೈದರಾಬಾದ್ ವಿವಿಗೆ ಭೇಟಿ ಕೊಟ್ಟರೆ ಆತ ಪ್ರವೇಶಿಸದಂತೆ ತಡೆಯಲಾಗಿದೆ.

ದಲಿತ ಯುವಕರನ್ನು ಆತ್ಮಹತ್ಯೆಗೆ ದೂಡುವ, ವಿಭಿನ್ನ ಚಿಂತನಾಧಾರೆಯ ಪ್ರತಿಭಾವಂತರನ್ನು 'ದೇಶದ್ರೋಹಿ'ಗಳೆಂದು ಜೈಲಿಗೆ ದೂಡುವ, ಪ್ರತಿಭಟಿಸುವ ವಿದ್ಯಾರ್ಥಿಗಳನ್ನು ಥಳಿಸುವ ಮೋದಿ ಸರ್ಕಾರ ಅತಿ ನೀಚ ಸರ್ಕಾರ ಎನ್ನದೆ ವಿಧಿ ಇಲ್ಲ.

ಇವತ್ತು ಇನ್ನೊಂದು ಬೆಳವಣಿಗೆ ನಡೆದಿದೆ. ದೇಶದಾದ್ಯಂತ ಚಡ್ಡಿಗಳ ವಿರುದ್ಧ ಯುವಜನತೆ ತಿರುಗಿ ಬಿದ್ದಿರುವುದರಿಂದ ಎಬಿವಿಪಿ ಸದಸ್ಯರು 'ಜೆಎನ್‌ಯು ಕುರಿತ ಸತ್ಯ' ಎಂಬ ಅಪಪ್ರಚಾರದ ಆಂದೋಲನವನ್ನು ಶುರು ಹಚ್ಚಿಕೊಂಡಿದ್ದಾರೆ. ಅಂತಹ ಒಂದು ಸಭೆಯನ್ನು ನಿನ್ನೆ ಪುಣೆಯ ಫರ್ಗೂಸನ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಆದರೆ ಅದನ್ನು ದಲಿತ ಮತ್ತು ಎಡಪಂಥೀಯ ವಿದ್ಯಾರ್ಥಿಗಳು ವಿರೋಧಿಸಿದರು. ಆಗ ಯಥಾಪ್ರಕಾರ ಎಬಿವಿಪಿಗಳು ಕಾಲೇಜಿನ ಮುಖ್ಯಸ್ಥರಿಗೆ ದೂರು ಸಲ್ಲಿಸಿದರು. ಆಗಲೂ ಯಥಾಪ್ರಕಾರ ಕಾಲೇಜಿನ ಮುಖ್ಯಸ್ಥ ಎರಡು ಪುಟಗಳ ವರದಿಯನ್ನು ತಯಾರಿಸಿ ತನ್ನ ಕಾಲೇಜಿನಲ್ಲಿ ದಲಿತ ಮತ್ತು ಎಡಪಂಥೀಯ ವಿದ್ಯಾರ್ಥಿಗಳು 'ದೇಶದ್ರೋಹ' ಕೆಲಸಗಳಲ್ಲಿ ನಿರತರಾಗಿದ್ದಾರೆ ಎಂದ. ಆದರೆ ಈಗಾಗಲೇ ಹೈದರಾಬಾದ್ ಮತ್ತು ಜವಾಹರಲಾಲ್ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಎಡವಟ್ಟು ನಿರ್ಧಾರಗಳನ್ನು ತೆಗೆದುಕೊಂಡು ಎಲ್ಲರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿರುವ ಕೇಂದ್ರ ಸರ್ಕಾರವೇ ಮಧ್ಯ ಪ್ರವೇಶಿಸಿ ಫರ್ಗೂಸನ್ ಕಾಲೇಜಿನ ಮುಖ್ಯಸ್ಥನಿಗೆ ತನ್ನ ವರದಿಯನ್ನು ಹಿಂದೆ ಪಡೆಯುವಂತೆ ಸೂಚಿಸಿತು. ಆಗ ಮುಖ್ಯಸ್ಥನು "ನಾನು ಕೊಟ್ಟ ವರದಿಯಲ್ಲಿ ಕೆಲವು ಟೈಪಿಂಗ್ ತಪ್ಪುಗಳಿದ್ದವು, ಆದ್ದರಿಂದ ಅದನ್ನು ಹಿಂದೆ ಪಡೆಯುತ್ತಿದ್ದೇನೆ" ಎಂಬ ಸಬೂಬು ಕೊಟ್ಟ.

ಅಸಲಿ ವಿಚಾರ ಏನೆಂದರೆ, ಫರ್ಗೂಸನ್ ಕಾಲೇಜಿನಲ್ಲಿ ಎಬಿವಿಪಿ ಸದಸ್ಯರ ವಿರುದ್ಧ ಪ್ರತಿಭಟಿಸಿದ, ಆಮೇಲೆ ಕಾಲೇಜು ಮುಖ್ಯಸ್ಥನಿಂದ 'ದೇಶದ್ರೋಹಿ' ಎಂದು ಬಣ್ಣಿಸಿಕೊಂಡವರಲ್ಲಿ ಸುಜತ್ ಎಂಬ ವಿದ್ಯಾರ್ಥಿಯೂ ಇದ್ದ. ಈತನ ಪೂರ್ತಿ ಹೆಸರು ಸುಜತ್ ಅಂಬೇಡ್ಕರ್. ಈತ ಬೇರೆ ಯಾರೂ ಅಲ್ಲ, ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮರಿಮೊಮ್ಮಗ!

ಅತ್ತ ಹೈದರಾಬಾದಿನಲ್ಲಿ ದಲಿತರನ್ನು ತಡವಿಕೊಂಡಿದ್ದಾಯಿತು, ಇತ್ತ ದೆಹಲಿಯಲ್ಲಿ ಎಡಪಂಥೀಯರನ್ನು ಮೈಮೇಲೆ ಎಳೆದುಕೊಂಡಿದ್ದಾಯಿತು, ಈಗ ಸ್ವತಃ ಅಂಬೇಡ್ಕರ್ ಅವರ ಮರಿಮೊಮ್ಮಗನನ್ನೇ 'ದೇಶದ್ರೋಹಿ' ಎಂದು ಕರೆದರೆ ಆಗುವ ಅನಾಹುತವಾದರೂ ಚಡ್ಡಿ ಸರ್ಕಾರಕ್ಕೆ ಅರ್ಥವಾಗಿದೆಯಲ್ಲ. ಕೆಟ್ಟ ಮೇಲೆ ಬುದ್ಧಿ ಬಂತು ಅಂತಾರಲ್ಲ ಚಡ್ಡಿಗಳನ್ನು ನೋಡಿಯೇ ಹಾಗೆ ಹೇಳುತ್ತಾರೆ ಅನ್ನಿಸುತ್ತೆ ■

ದನ-ಕರು ವ್ಯಾಪಾರಿಗಳ ಹತ್ಯೆ: ಅದೆಷ್ಟು ನ್ಯಾಯಸಮ್ಮತ?

ಜಾತ್ರೆಯೊಂದಕ್ಕೆ ವ್ಯಾಪಾರ ಮಾಡಲು ಕೋಣಗಳನ್ನು ಒಯ್ಯುತ್ತಿದ್ದ ಆರೋಪದ ಮೇಲೆ ಇಬ್ಬರು ವ್ಯಾಪಾರಿಗಳ ಹತ್ಯೆಯಾಗಿರುವ ಸುದ್ದಿ ದೂರದ ಝಾರ್ಖಂಡ್ ರಾಜ್ಯದ ಲಾತೇಹಾರ್ ಜಿಲ್ಲೆಯ ಗ್ರಾಮವೊಂದರಿಂದ ವರದಿಯಾಗಿದೆ. ಘಟನೆಯ ವರದಿಯಂತೆ, ದಾಳಿಕೋರರಿಂದ ತೀವ್ರವಾಗಿ ಹಲ್ಲೆಗೊಳಗಾದ ಇಬ್ಬರು ಜಾನುವಾರು ವ್ಯಾಪಾರಿಗಳ ಶವ ಮರವೊಂದರಲ್ಲಿ ನೇತಾಡುವ ಸ್ಥಿತಿಯಲ್ಲಿ ಪತ್ತೆಯಾಗಿರುವುದನ್ನು ನೋಡಿದರೆ ಘಟನೆಯ ಭೀಕರತೆ ಎಂಥವರಿಗಾದರೂ ಅರ್ಥವಾಗುತ್ತದೆ. ಈ ಘಟನೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಅಂತೆಯೇ ಮುಂದುವರಿದ ಅಸಹಿಷ್ಣುತೆ, ಆತಂಕ, ದೌರ್ಜನ್ಯದ ಕಥನಗಳನ್ನೂ ಇದು ಮತ್ತೊಮ್ಮೆ ಎತ್ತಿಹಿಡಿದಿದೆ.



ಹಾಗೆ ಮೂಡಿಬರುವ ಮೊದಲ ಪ್ರಶ್ನೆ ಎಂದರೆ ಜಾನುವಾರುಗಳನ್ನು (ದನ-ಕರು, ಎಮ್ಮೆ-ಕೋಣ) ಸದರಿ ಹತ್ಯೆಗೊಳಗಾದ ವ್ಯಕ್ತಿಗಳು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ತಪ್ಪು ತೆಗೆದುಕೊಂಡು ಹೋಗುತ್ತಿದ್ದ ಆ ಇಬ್ಬರು ವ್ಯಾಪಾರಿಗಳದು ಮಾತ್ರವೇ? ಎಂಬುದು. ಈ ನಿಟ್ಟಿನಲ್ಲಿ ಸದರಿ ವ್ಯಾಪಾರಿಗಳಿಗೆ ದನಕರುಗಳನ್ನು ಮಾರಾಟ ಮಾಡಿದ ರೈತರೂ ಕೂಡ ಈ ತಪ್ಪಿನಲ್ಲಿ ಪಾಲುದಾರರಲ್ಲವೆ? ಎಮ್ಮೆ ಅಥವಾ ಕೋಣ, ದನ ಅಥವಾ ಕರು ಬಡಕಲಾದ ತಕ್ಷಣ ಹಾಲುಕೊಡುವುದನ್ನು ನಿಲ್ಲಿಸಿದಾಕ್ಷಣ ಅದರಿಂದ ಉಪಯೋಗ ಕಡಿಮೆಯಾದಾಕ್ಷಣ ಅವುಗಳನ್ನು ಸಾಕಲು ಯಾವುದೇ ರೈತ ಮುಂದೆ ಬರುವುದಿಲ್ಲ. ಅವುಗಳನ್ನು ಸಾಕುವುದು ಆತನಿಗೆ ಲಾಭದಾಯಕ ಕೂಡ ಅಲ್ಲ, ಯಾಕೆಂದರೆ ಹೈನುಗಾರಿಕೆ ರೈತನಿಗೆ ಲಾಭ ತಂದುಕೊಡುವ ಉಪಕಸುಬೇ ಹೊರತು ಅದು ಆತನ ಧರ್ಮಛತ್ರ ನಡೆಸುವ ಕಸುಬಲ್ಲ ಅಥವಾ ನಿರ್ದಿಷ್ಟ ಧರ್ಮದ ಸಂಕೇತವಾಗಿಯೂ ಕೂಡ ಆತ ಅವುಗಳನ್ನು ಸಾಕುವುದಿಲ್ಲ. ಅಕ್ಷರಶಃ ಹೇಳುವುದಾದರೆ ಆತ ಗೋಶಾಲೆಯನ್ನೇನು ನಡೆಸುವುದಿಲ್ಲ. ಈ ನಿಟ್ಟಿನಲ್ಲಿ ಅವುಗಳನ್ನು, ಅಂದರೆ ನಿರುಪಯುಕ್ತ ಜಾನುವಾರುಗಳನ್ನು ಸದರಿ ರೈತ ಏನು ಮಾಡಬೇಕು? ತನ್ನ ಬದುಕಿಗಾಗಿ ಆತ ಅವುಗಳನ್ನು ಮಾರಲೇಬೇಕಲ್ಲವೇ? ಆಶ್ಚರ್ಯವೆಂದರೆ ಇಲ್ಲಿ ಜಾನುವಾರುಗಳನ್ನು ಖರೀದಿಸಿ ಮಾರುಕಟ್ಟೆಗೆ ಒಯ್ಯುವ ನಿರ್ದಿಷ್ಟ ಸಮುದಾಯದ ವ್ಯಾಪಾರಿಗಳನ್ನಷ್ಟೆ ಮಾತ್ರ ಗುರಿಯಾಗಿಸಿಕೊಳ್ಳಲಾಗುತ್ತದೆ. ಆದರೆ ಅದೇ ವ್ಯಾಪಾರಿಗೆ ಜಾನುವಾರು ಮಾರುವ ರೈತ ಮತ್ತು ಆತನ ಆರ್ಥಿಕ ಸಮಸ್ಯೆ ಇಲ್ಲಿ ಲೆಕ್ಕಕ್ಕೇ ಬರುವುದಿಲ್ಲ.

ಇನ್ನು ಎರಡನೆಯ ಪ್ರಶ್ನೆ ದನಕರುಗಳನ್ನು ಮಾರಾಟ ಮಾಡುವುದು ಬೇಡ. ಇರಲಿ, ಆ ರೈತ ನಷ್ಟ ಅನುಭವಿಸಲು ತಯಾರಾಗುತ್ತಾನೆ ಎಂದಿಟ್ಟುಕೊಳ್ಳೋಣ. ಪ್ರಶ್ನೆಯೇನೆಂದರೆ ಈ ಹಂತದಲ್ಲಿ ಸಾವಿಗೀಡಾಗುವ ದನ-ಕರುಗಳ ಸಮಾಧಿ ಮಾಡಲು ಸ್ಥಳ ಎಲ್ಲಿದೆ? ಮನುಷ್ಯರನ್ನು ಹೂಳಲು ಸ್ಮಶಾನ ಭೂಮಿಗಳಿಲ್ಲ, ಇದ್ದಬದ್ದ ಸ್ಮಶಾನಗಳೆಲ್ಲ ರಿಯಲ್ ಎಸ್ಟೇಟ್‌ನವರ ಹೊಡೆತಕ್ಕೆ ಸಿಲುಕಿ ನಿವೇಶನಗಳಾಗಿ ಪರಿವರ್ತಿತವಾಗುತ್ತಿವೆ. ಹೀಗಿರುವಾಗ ಸತ್ತ ದನಕರುಗಳನ್ನು ಹೂಳಲು ಸ್ಥಳ? ಒಟ್ಟಾರೆ ಗೋಹತ್ಯೆ ಬೇಡ. ಒಪ್ಪೋಣ. ಆದರೆ ಹಾಗೆ ಹೇಳುವವರು ಅದರ ಉಪಯೋಗ ಕಡಿಮೆಯಾದಾಕ್ಷಣ, ಹಾಲು ಕೊಡುವುದನ್ನು ನಿಲ್ಲಿಸಿದಾಕ್ಷಣ ಸದರಿ ನಿರುಪಯೋಗಿ ಜಾನುವಾರುಗಳಿಗಾಗಿ, ಅವುಗಳು ಬದುಕುವುದಕ್ಕಾಗಿ, ರೈತನಿಗೆ ಲಾಭ ನೀಡುವುದಕ್ಕಾಗಿಯೂ ಸಹಿತ, ಆತನಿಗೆ ಸೂಕ್ತ ಲಾಭದಾಯಕ ಬೆಲೆ ತೆತ್ತು ಅವುಗಳನ್ನು ಸಾಕುವ ವ್ಯವಸ್ಥೆ ನಿರ್ಮಿಸುವುದು ಬೇಡವೇ? ಎಂಬುದು. ಹಾಗೆಯೇ ಸೂಕ್ತ ಆ ವ್ಯವಸ್ಥೆಯಲ್ಲಿ ನಿರುಪಯುಕ್ತ ಅಥವಾ ರೋಗಗ್ರಸ್ತ ಆ ದನಕರುಗಳಿಗಾಗಿ ಸೂಕ್ತ ಆರೋಗ್ಯ ರಕ್ಷಣಾ ವ್ಯವಸ್ಥೆ ಸೂಕ್ತ ಗೋ-ಸ್ಮಶಾನದ ವ್ಯವಸ್ಥೆ ಕೂಡ ಇರಬೇಕು ಮತ್ತು ಅದಕ್ಕೊಂದು ಸಕ್ರಿಯ ತಂಡ ಹಗಲು ಇರುಳು ಎನ್ನದೆ ಕಾರ್ಯನಿರ್ವಹಿಸಬೇಕು. ವಾಸ್ತವವೆಂದರೆ ಅಂತಹ ಕಾರ್ಯನಿರ್ವಹಣೆ, ನಿರುಪಯುಕ್ತ ದನಗಳನ್ನು-ಎಮ್ಮೆ-ಕೋಣಗಳನ್ನು ಸಾಕುವ ವ್ಯವಸ್ಥೆ ಪ್ರಸ್ತುತ ಹಳ್ಳಿಗಳಲ್ಲಿ ಎಲ್ಲಿದೆ? ವ್ಯತಿರಿಕ್ತವಾಗಿ ರೈತನಿಗೆ ಲಾಭ ನೀಡಿ ಅವುಗಳನ್ನು ಮಾರುಕಟ್ಟೆಗೆ ಒಯ್ಯುವವರನ್ನು ಹತ್ಯೆಗೈಯ್ಯುವ ವ್ಯವಸ್ಥೆ ಅವ್ಯಾಹತವಾಗಿದೆ.

ಮೂರನೆಯ ಪ್ರಶ್ನೆಯೊಂದನ್ನು ಇಲ್ಲಿ ಎತ್ತುವುದಾದರೆ, ದನ-ಕರು ಮಾಂಸವನ್ನು ನಿರ್ದಿಷ್ಟ ಜನಸಮುದಾಯ ಆಹಾರವಾಗಿ ಬಳಸುತ್ತದೆ. ಅಂದಹಾಗೆ ಹಾಗೆ ತಿನ್ನುವವರು ಯಾರೂ ಕೂಡ ಅದನ್ನು ಅದು ಇನ್ನೊಂದು ಧರ್ಮದ ಪೂಜ್ಯನೀಯ ಸಂಗತಿ, ಅವರ ಧರ್ಮದ ನಂಬಿಕೆಗೆ ಭಂಗ ತರಬೇಕು, ಆ ಕಾರಣಕ್ಕಾಗಿ ತಿನ್ನಬೇಕು ಎಂದು ತಿನ್ನುವುದಿಲ್ಲ, ಬದಲಿಗೆ ಅದು ಅವರ ಆಹಾರ ಅಭ್ಯಾಸವಷ್ಟೆ. ಮತ್ತೂ ಒಂದು ವಾಸ್ತವವೆಂದರೆ ಮಾರುಕಟ್ಟೆಯಲ್ಲಿ ಕುರಿ ಅಥವ ಆಡಿನ ಮಾಂಸ ತುಟ್ಟಿ. ಕುರಿ, ಆಡಿನ ಮಾಂಸ 400ರಿಂದ 450 ರೂ. ಬೆಲೆ ಇದ್ದರೆ ದನದ ಮಾಂಸ 100ರಿಂದ 150 ರೂ.ಗೆ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಕುರಿ ಮತ್ತು ಆಡಿನ ಮಾಂಸದ ಬೆಲೆ ಜಾಸ್ತಿಯಾದ್ದರಿಂದ ಜನ ಅದಕ್ಕೆ ಪರ್ಯಾಯವಾಗಿ ದನ ಮತ್ತು ಎಮ್ಮೆಯ ಮಾಂಸ ಬಳಸುತ್ತಾರೆ. (ಕೋಳಿಮಾಂಸ ಕುರಿಮಾಂಸಕ್ಕೆ ಪರ್ಯಾಯವಾಗುವುದಿಲ್ಲ) ಈ ಹಿನ್ನೆಲೆಯಲ್ಲಿ ಕುರಿ ಮತ್ತು ಆಡಿನ ಮಾಂಸಕ್ಕೆ ಪರ್ಯಾಯವಾಗಿ ದನ ಮತ್ತು ಎಮ್ಮೆಯ ಮಾಂಸ ಬಳಕೆ ನಿಲ್ಲಿಸಲು ಹಾಗೆ ಹಲ್ಲೆ ಮಾಡುವವರು, ಹತ್ಯೆ ಮಾಡುವವರು ಮತ್ತು ಅಂತಹ ಮನಸ್ಥಿತಿಯವರು ಗೋಸಂತತಿಯ ರಕ್ಷಣೆಯ ದೂರದೃಷ್ಟಿಯಿಂದ ಕುರಿ ಮತ್ತು ಆಡಿನ ಮಾಂಸವನ್ನು ಅಗ್ಗದ ಬೆಲೆಗೆ (100ರಿಂದ 150 ರೂ. ಬೆಲೆಗೆ) ಪೂರೈಸಲು ಕ್ರಮಕೈಗೊಳ್ಳುವುದಿಲ್ಲವೇಕೆ? ಎಂಬುದು.


ಈ ನಿಟ್ಟಿನಲ್ಲಿ ಇನ್ನೊಬ್ಬರ ಆಹಾರ ಪದ್ಧತಿ ಗೌರವಿಸದಿದ್ದರೂ ಪರವಾಗಿಲ್ಲ, ಗೋಸಂತತಿ ಉಳಿಸಲು ಹಾಗೆ ಗೋರಕ್ಷಣೆ ಮಾಡುವವರು ಅದರ ನೈಜ ರಕ್ಷಣೆಗೆ ಮುಂದಾಗಬೇಕು. ಗೋಮಾಂಸ ಸಾಗಿಸುವವರ ಮೇಲೆ, ದನಕರುಗಳ ವ್ಯಾಪಾರಿಗಳ ಮೇಲೆ, ಗೋಮಾಂಸ ಇಟ್ಟುಕೊಳ್ಳುವವರ ಮೇಲೆ ಹಲ್ಲೆ ನಡೆಸುವ ಬದಲು, ಹತ್ಯೆ ನಡೆಸುವ ಬದಲು ಗೋವನ್ನು ರಕ್ಷಿಸುವ ಪರ್ಯಾಯ ವಿಧಾನಗಳ ಬಗ್ಗೆ ಮೇಲೆ ಹೇಳಿದ ರೀತಿ ಆಲೋಚಿಸಬೇಕು. ಮುಖ್ಯವಾಗಿ ಗೋವನ್ನು ಸಾಕುವ ರೈತರ ಮಾಹಿತಿ ಸಂಗ್ರಹಣೆ, ಅವರಿಂದ ನಿರುಪಯುಕ್ತ ಗೋವುಗಳ ಸಂಗ್ರಹಣೆ, ಅವುಗಳಿಗಾಗಿ ಸೂಕ್ತ ವಾಸಸ್ಥಳ, ಸ್ಮಶಾನ, ಅವು ಸಾಯುವವರೆಗೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸುವುದು, ಅವುಗಳ ಹಾರೈಕೆ, ವೈದ್ಯೋಪಚಾರ... ಎಲ್ಲವೂ ನಡೆಯಬೇಕು. ಹಾಗೆ ದನ ಮತ್ತು ಕೋಣ ತಿನ್ನುವವರಿಗೆ ಅಗ್ಗದ ದರದಲ್ಲಿ ಕುರಿ ಮಾಂಸ ಪೂರೈಕೆಯೂ ನಡೆಯಬೇಕು. ಈ ನಿಟ್ಟಿನಲ್ಲಿ ಗೋರಕ್ಷಣೆ ಎಂದರೆ ಅದು ಈ ಮಾರ್ಗದಲ್ಲಿ ನಡೆಯಬೇಕು. ಆಗ ಅದು ಕಾಳಜಿಪೂರ್ಣ ನಡೆಯಾಗುತ್ತದೆ. ಅದು ಬಿಟ್ಟು ಗೊಮಾಂಸ ಇಟ್ಟುಕೊಳ್ಳುವವರನ್ನು ಹತ್ಯೆಗೈಯುವುದು, ಅದನ್ನು ಸಾಗಿಸುವವರನ್ನು ಹತ್ಯೆಗೈಯ್ಯುವುದು, ಅದನ್ನು ಮಾರಾಟ ಮಾಡುವವರ ಮೇಲೆ ಹಲ್ಲೆ ಮಾಡುವುದು, ಇದು ಯಾವ ಸೀಮೆ ರಕ್ಷಣೆ ಅಂಥ? ಖಂಡಿತ ಅದು ಗೋವಿನ ರಕ್ಷಣೆಗಿಂತ ಗೋವನ್ನು ತಿನ್ನುವ ನಿರ್ದಿಷ್ಟ ಜನಸಮುದಾಯದ ಮೇಲಿನ ದ್ವೇಷದಂತೆ ಭಾಸವಾಗುತ್ತದೆ.

ಖಂಡಿತ, ಇಂತಹ ದ್ವೇಷ ಹತ್ಯೆ ಅದು ಪ್ರಜಾಪ್ರಭುತ್ವದ ಸೂಕ್ತ ಲಕ್ಷಣವಾಗುವುದಿಲ್ಲ ಹಾಗೆಯೇ ಮಾನವೀಯ ಮೌಲ್ಯದ್ದೂ ಕೂಡ ಅದು ಆಗುವುದಿಲ್ಲ. ದೇಶದ ಸಾಮರಸ್ಯ-ಐಕ್ಯತೆಯ ದೃಷ್ಟಿಯಿಂದಲೂ ಕೂಡ ಅದು ಸಹಮತದ್ದಾಗುವುದಿಲ್ಲ. ಯಾಕೆಂದರೆ ಭಾರತದ ಸಂವಿಧಾನ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯ-ಸಮಾನತೆ-ಸಹೋದರತೆಯಿಂದ ಬದುಕುವುದನ್ನು ಹೇಳುತ್ತದೆ. ತಪ್ಪು ಮಾಡಿದರೆ ಅದಕ್ಕೆ ದಂಡನೆಯ ಅವಕಾಶವನ್ನು ಕೂಡ ಸಂವಿಧಾನ ನೀಡುತ್ತದೆ. ಹಲ್ಲೆ ಮಾಡಿ, ಹತ್ಯೆ ಮಾಡಿ ಎಂದು ಅದು ಹೇಳುವುದಿಲ್ಲ. ಪರಸ್ಪರ ಐಕ್ಯಮತ್ಯ, ಪರಸ್ಪರ ನಂಬಿಕೆಗಳನ್ನು ಗೌರವಿಸುವುದು ಸಂವಿಧಾನದ ಆಶಯ. ಸಮಸ್ಯೆಗಳಿದ್ದರೆ ಅದಕ್ಕೆ ಪರಿಹಾರ ಕೂಡ ಈ ದೇಶದ ಆಡಳಿತ ವ್ಯವಸ್ಥೆಯಲ್ಲಿದೆ. ಹೀಗಿರುವಾಗ ದನ-ಕರು ಮಾರಾಟ, ಸಾಗಾಟದ ಹಿನ್ನೆಲೆಯಲ್ಲಿ ಹತ್ಯೆ ನಡೆಯುವುದು?

ನಿಜಕ್ಕೂ ನಿರ್ದಿಷ್ಟ ಜನಸಮುದಾಯದ ಮೇಲೆ ನಡೆಯುವ ಇಂತಹ ಹಲ್ಲೆ ಸರ್ವತ್ರ ಖಂಡನೀಯ. ಅಸ್ಪೃಶ್ಯರ ಮೇಲೆ ಹೇಗೆ ಜಾತಿಯ ಕಾರಣಕ್ಕಾಗಿ ಹಲ್ಲೆ ನಡೆಯುತ್ತದೆಯೋ, ಹತ್ಯೆಯಾಗುತ್ತದೆಯೋ ಹಾಗೆ ಇದೂ ಕೂಡ ಎಂಬುದು ಇಲ್ಲಿ ಉಲ್ಲೇಖಾರ್ಹ. ಈ ನಿಟ್ಟಿನಲ್ಲಿ ಅಸ್ಪೃಶ್ಯರಿಗಾಗಿ ಇರುವ ದೌರ್ಜನ್ಯ ತಡೆ ಕಾಯಿದೆ ಮಾದರಿ ಕಾಯಿದೆಯನ್ನು ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯದ ಪರವಾಗಿಯೂ ಏಕೆ ಜಾರಿಮಾಡಬಾರದು ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ. ಈ ದೇಶ, ಈ ನಾಡು, ಈ ಭೂಮಿ ಯಾರ ವೈಯಕ್ತಿಕ ಆಸ್ತಿಯೂ ಅಲ್ಲ, ಸಕಲ ಮಾನವರಿಗೂ ಸೇರಿದ್ದು ಇದು. ಈ ಹಿನ್ನೆಲೆಯಲ್ಲಿ ಎಲ್ಲರೂ ಇಲ್ಲಿ ಗೌರವಯುತವಾಗಿ ಬದುಕುವಂತಾಗಬೇಕು. ಅಂತಹ ವಾತಾವರಣ ವ್ಯವಸ್ಥೆಯೊಳಗೆ ನಿರ್ಮಾಣವಾಗಬೇಕು. ಗೋರಕ್ಷಣೆಯ ಹೆಸರಿನಲ್ಲಿ ಇನ್ನು ಮುಂದಾದರೂ ಹಲ್ಲೆ ಹತ್ಯೆಗಳಂತಹ ಕೃತ್ಯಗಳು ನಿಲ್ಲಬೇಕು. ಸಕಲರೂ ಸಹೋದರತೆಯಿಂದ ಬಾಳುವಂತಾಗಬೇಕು ಎಂಬುದೇ ಸದ್ಯದ ಕಳಕಳಿ.

■ ರಘೋತ್ತಮ ಹೊ.ಬ

ಕರಾವಳಿ: ಹಾದಿ ತಪ್ಪಿದ ಹೆಂಡತಿಯೇ ಫೈನಾನ್ಸಿಯರ್ ಮೊಂತೇರೋಗೆ ಗುಂಡಿಕ್ಕಿದಳಾ?


ಸಂತೋಷ್

ಉಡುಪಿಯ ಅಷ್ಟಮಠದ ಸಂತರ ಅನಿಷ್ಟ ಅಪಲಾಪ, ಭಜರಂಗಿ ಭೂತಗಳ ಭಂಡಾಟ, ಮತ್ತದೇ ಮಣಿಪಾಲ ಪೈಗಳ ಮಸಲತ್ತಿನ ಏಕತಾನದ ಬದುಕು ಬೆಚ್ಚಿ ಬೀಳಿಸುವಂಥ ಥ್ರಿಲ್ಲರ್ ಕ್ರೈಮ್ ಕತೆಯೊಂದು ಮಗ್ಗಲು ಬದಲಿಸಿದೆ! ಬರೋಬ್ಬರಿ 34 ತಿಂಗಳ ಹಿಂದೆ ಸ್ವಂತ ಮನೆಯಲ್ಲೇ ಹಠಾತ್ ಹೆಣವಾಗಿ ಬಿದ್ದಿದ್ದ ಭರ್ಜರಿ ಹಣವಂತ ಸಂತೋಷ್ ಮೊಂತೇರೊನದು ಆತ್ಮಹತ್ಯೆಯಲ್ಲ, ಅದೊಂದು ಕಟ್ಟಿಕೊಂಡ ಹೆಂಡತಿಯೇ ಮಾಡಿದ ಅಥವಾ ಮಾಡಿಸಿದ ಕರಾರುವಾಕ್ ಕೊಲೆಯೆಂಬ ಕಾನೂನುಬದ್ಧ ತರ್ಕಗಳೀಗ ಭುಗಿಲೆದ್ದು ಬಿಟ್ಟಿವೆ. ಅವಿಭಜಿತ ದಕ್ಷಿಣ ಕನ್ನಡದ ಕಡಲುದ್ದಕ್ಕೂ ಸದ್ದಿಕ್ಕಿದ್ದು ಸೆನ್‌ಸೇಷನಲ್ ಸುದ್ದಿ....

ಫ್ಲಾಶ್‌ಬ್ಯಾಕ್

ಅದು ಉಡುಪಿಯ ಬನ್ನಂಜೆ ಏರಿಯಾದ ಬಹುತೇಕ ಸಿರಿವಂತರೇ ವಾಸವಾಗಿರುವ ಶಿರಿಬೀಡು ಟವರ್. ಈ ಅಪಾರ್ಟ್‌ಮೆಂಟಿನ ಫ್ಲಾಟ್ ನಂಬರ್ 506ರಲ್ಲಿ ಮಂಗಳೂರಿನ ಬಜ್ಪೆ ಮೂಲದ ಫೈನಾನ್ಸ್ ಕುಳ-ರಿಯಲ್ ಎಸ್ಟೇಟ್ ದಂಧೆದಾರ ಸಂತೋಷ್ ಮೊಂತೇರೊ ತನ್ನ ಹೆಂಡತಿ ರೇಖಾ ಮತ್ತಿಬ್ಬರು ಮಕ್ಕಳೊಂದಿಗೆ ಸಂಸಾರ ಹೂಡಿದ್ದ. ಸಿರಿಯ ಗರ ಬಡಿದ ಈ ಕುಟುಂಬದಲ್ಲಿ ಗಂಡ-ಹೆಂಡತಿ ನಡುವೆ ಮೋಜು-ಮಸ್ತಿಯ ಚಪಲವೇ ಸಂಘರ್ಷ ತಂದಿಟ್ಟಿತು. ಈ ಪತಿ-ಪತ್ನಿ ಇಬ್ಬರೂ ಹಳಿ ತಪ್ಪಿದ್ದು ಎಲ್ಲರಿಗೂ ಗೊತ್ತಿತ್ತು, ಆದರೆ 28.5.2013ರ ರಾತ್ರಿ ಅದೇನಾಯ್ತೋ? ದೈತ್ಯದೇಹಿಯಂತಿದ್ದ ಆಜಾನುಬಾಹು ಸಂತೋಷ್ ಮೊಂತೇರೋ ಫ್ಲಾಟ್‌ನ ರೂಮೊಂದರಲ್ಲಿ ಗುಂಡು ತಿಂದು ಸತ್ತ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದ. ಆ ಹೆಣ ಮೊದಲು ಕಂಡವಳು ರೇಖಾ.

ಸಂತೋಷ್ ಅದೆಷ್ಟು ಹೊತ್ತಿಗೆ ಸತ್ತಿದ್ದನೋ, ಅದು ರೇಖಾಳಿಗಷ್ಟೇ ಗೊತ್ತು, ಆದರೆ ಆಕೆ ಪತಿಯ ಗಂಡನ ಕಡೆಯವರಿಗೆ ಅನಾಹುತ ನಡೆದದ್ದು ಹೇಳಿದ್ದು ರಾತ್ರಿ 11.30ರ ಹೊತ್ತಿಗೆ. ಸಂತೋಷ್‌ನ ಹೆತ್ತವರು, ಒಡಹುಟ್ಟಿದವರು, ಬಂಧು-ಬಳಗ ಬಂದುನೋಡುವ ಹೊತ್ತಿಗೆ ಒಬ್ಬ ಪೇದೆಯ ಕಾವಲಿನಲ್ಲಿ ಸಂತೋಷನ ಶವ ಅನಾಥವಾಗಿ ಬಿದ್ದುಕೊಂಡಿತ್ತು. ಸಂತೋಷನ ದುರಂತ ಸಾವು ಕಂಡಿದ್ದೇ ತಡ, ಅಂದಿನ ಉಡುಪಿ ಪಿಎಸ್ಐ ಲಿಂಗರಾಜುಗೆ ದಿವ್ಯಜ್ಞಾನವೊಂದು ಹೊಳೆದು ಹೋಗುತ್ತದೆ. ಇದು ಆತ್ಮಹತ್ಯೆ ಎಂಬ ತೀರ್ಮಾನಕ್ಕಾತ ನಿಂತ ನಿಲುವಿನಲ್ಲೇ ಬಂದುಬಿಡುತ್ತಾನೆ!!


ಬೆಕ್ಕಣ್ಣು ರೇಖಾ ಕಟ್ಟಿದ ಕತೆ

ಬೆಕ್ಕಿನ ಕಣ್ಣಿನ ಹೆಣ್ಣು ರೇಖಾ ಗಂಡ ಸಂತೋಷನ ಸಾವಿನ ಘಟನೆಗಳನ್ನು ಯದ್ವಾ-ತದ್ವಾ ಪೋಣಿಸಿ ಹೇಳುವ ಪರಿಗೆ ಎಂಥ ಪೆದ್ದನಿಗೂ ಸಂಶಯ ಬರುತ್ತದೆ. ಆದರೆ ಟೌನ್ ಠಾಣೆಯ ಎಸ್ಐ ಲಿಂಗರಾಜು, ಅಡಿಷನಲ್ ಎಸ್ಪಿ ಸಂತೋಷ್‌ಕುಮಾರ್ ಮತ್ತು ಅಂದು ಡಿವೈಎಸ್ಪಿಯಾಗಿದ್ದ ಪ್ರಭುದೇವ ಮಾನೆಗೆ ಮಾತ್ರ ರೇಖಾಳ ಮಾತೇ ಸತ್ಯ ಅನ್ನಿಸಿದೆ. 28.5.2013ರಂದು ಸಂಜೆ 6.30ರ ಹೊತ್ತಿಗೇ ಸಂತೋಷ ಸುರಾಪಾನಕ್ಕೆ ಬಿದ್ದಿದ್ದನಂತೆ. 9.30ಕ್ಕೆ ಜೋರು ನಿಶೆಗೆ ಜಾರಿದ್ದನಂತೆ. "ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಹೇಳಿದವನೇ ಕಪಾಟಿನಲ್ಲಿದ್ದ ಇಟಾಲಿಯನ್ ರಿವಾಲ್ವರ್ ತೆಗೆದು ತಲೆಗೊತ್ತಿಕೊಂಡು ಟ್ರಿಗರ್ ಒತ್ತಿಯೇ ಬಿಟ್ಟನಂತೆ.... ಎಂದು ರೇಖಾ ಪೊಲೀಸರಿಗೆ ಅಡಗೂಲಜ್ಜಿ ಕತೆ ಹೇಳಿದ್ದಾಳೆ.

ಇದನ್ನು ಪೊಲೀಸ್ ಪಡೆ ನಂಬುತ್ತದೆ. ಅಷ್ಟೇ ಅಲ್ಲ, ರೇಖಾಳ ಬಚಾಯಿಸುವ ನಿರ್ಧಾರಕ್ಕೆ ಬಂದಿದ್ದ ಎಎಸ್ಪಿ ಡಿವೈಎಸ್ಪಿ, ಎಸ್ಐಗಳ ಗ್ಯಾಂಗ್ ಮುಂದಿನ ಕತೆ ರೇಖಾಳಿಗೆ ಹೇಳಿಕೊಟ್ಟಿದ್ದಾರೆ. "ಸಂತೋಷ್ ಆತ್ಮಹತ್ಯೆ ಮಾಡಿಕೊಂಡು ನೆಲಕ್ಕುರುಳುವಾಗ ನಾನು ಮಕ್ಕಳೊಂದಿಗೆ ಪಕ್ಕದ ರೂಮಿನಲ್ಲಿದ್ದೆ..." ಎಂದು ಆಕೆಯ ಸ್ಟೇಟ್‌ಮೆಂಟಿಗೆ ಸೇರಿಸಲಾಗಿದೆ. ಇಲ್ಲೇ ಇರೋದು ಪೊಲೀಸರ ಪೊಕ್ಕು ಟ್ರಿಕ್ಕು, ತಲೆಗೆ ಪಿಸ್ತೂಲು ಒತ್ತಿಕೊಂಡು ಟ್ರಿಗರ್ ಅದುಮಿದ್ದು ಕಂಡಿದ್ದೇನೆ ಎನ್ನುವ ರೇಖಾ ಮುಂದುವರಿದು ಹೆಣವಾಗಿ ಬಿದ್ದಾಗ ತಾನು ಆಚೆ ಕೋಣೆಯಲ್ಲಿ ಮಕ್ಕಳ ಜತೆಗಿದ್ದೆ ಎಂದಿದ್ದಾಳೆ. ಈ ವಿರೋಧಾಭಾಸದ ಹೇಳಿಕೆಯೇ ಸಂತೋಷ್ ಮೊಂತೇರೋ ಆತ್ಮಹತ್ಯೆ ಮಾಡಿಕೊಂಡಿದ್ದು ನಿಜವಾ ಎಂಬ ಅನುಮಾನ ಮೂಡಿಸುತ್ತದೆ, ಅಲ್ಲವಾ?

ಅಣ್ಣ ಫೊರೆನ್ಸಿಕ್ ಡಾಕ್ಟರ್

ಹೈ-ಪೈ ಬದುಕಿನ ರೇಖಾಳಿಗೆ ಗಂಡ ಗತಿಸಿದ ಬಗ್ಗೆ ಅಂಥ ನೋವು-ದುಃಖವೇನೂ ಇರಲಿಲ್ಲ, ಆಕೆಯ ವರ್ತನೆ



ಸಂತೋಷ್‌ನ ತಂದೆ ಸಾಲ್ವದೋರ್ ಮೊಂತೇರೊ ಹಾಗು ಫೊರೆನ್ಸಿಕ್ ವೈದ್ಯನಾದ ಅಣ್ಣ ಫ್ರಾನ್ಸಿಸ್‌ಗೆ ಸಂಶಯ ಮೂಡಿಸುತ್ತದೆ. ಆಕೆ ಆಡುವ ಮಾತುಗಳಿಗೆ- ನಡೆಗೆ ಒಂದಕ್ಕೊಂದು ತಾಳೆಯೇ ಆಗುತ್ತಿರಲಿಲ್ಲ. ಪೊಲೀಸರು ಕೂಡ ಮಹಜರು ಮಾಡುವಾಗ ಸ್ಥಳೀಯರನ್ನು ಬಳಸಿಕೊಳ್ಳದೆ ರೇಖಾಳ ತವರೂರಿನ ಮಂದಿಯನ್ನು ಕರೆಸಿದ್ದರು. ಸುಮಾರು 30 ಕಿ.ಮೀ ದೂರದಿಂದ ಸಾಕ್ಷಿ-ಪಂಚರ ಕರೆಸಿದ ಪೊಲೀಸರ 'ಆಟ' ಮತ್ತು ರೇಖಾಳ ತಾಳ-ಮೇಳವಿಲ್ಲದ ಹೇಳಿಕೆ ಸಂತೋಷ್‌ನ ಸಾವು ಕೊಲೆಯೇ ಹೊರತು ಆತ್ಮಹತ್ಯೆಯಾಗಲು ಸಾಧ್ಯವೇ ಇಲ್ಲವೆಂಬುದನ್ನು ಡಾ. ಫ್ರಾನ್ಸಿಸ್ ಮೊಂತೇರೊಗೆ ಖಾತ್ರಿಪಡಿಸಿಬಿಟ್ಟವೆ.

ವ್ಯಕ್ತಿಯೊಬ್ಬನ ಸಾವು ಸಂಭವಿಸಿರುವುದು ಕೊಲೆಯಿಂದಲೋ? ಆತ್ಮಹತ್ಯೆಯಿಂದಲೋ ಅಥವಾ ಅಪಘಾತದಿಂದಲೋ ಎಂಬುದನ್ನು ಪತ್ತೆ ಹಚ್ಚುವುದೇ



ರೇಖಾ

ಫೊರೆನ್ಸಿಕ್ ವೈದ್ಯರು. ಇಂಥ ಫೊರೆನ್ಸಿಕ್ ವಿಜ್ಞಾ... ಕ್ರಿಮಿನಾಲಜಿಯಲ್ಲಿ ಪರಿಣತರು ಡಾ. ಫ್ರಾನ್ಸಿಸ್. ಇಂ... ಭಾವನ ಎದುರೇ ರೇಖಾ ಮತ್ತಾಕೆಯ ಹಿತೈಷಿ ಪೊಲೀಸ... ದಗಲುಬಾಜಿ ಕತೆ ಹೆಣೆದಿದ್ದರು! ಉಡುಪಿ ಟೌನ್ ಠಾಣೆಯ... ಪಿಎಸ್ಐ ಲಿಂಗರಾಜು ನಿಷ್ಪ-ಪ್ರಾಮಾಣಿಕತೆಯಿಂದ ಕೇಸ... ನಡೆಸಿಲ್ಲ ಎಂದು ಸಂತೋಷ್ ತಂದೆ ಸಾಲ್ವದೋರ... ಕೋರ್ಟ್‌ಗೆ ಮೊರೆ ಹೋಗುತ್ತಾರೆ. ಖಾಸಗಿ ಕಂಪ್ಲೇಂಟ... ದಾಖಲಿಸುತ್ತಾರೆ. ಆಗ ತನಿಖೆ ನಡೆಸುವ ಎಎ... ಸಂತೋಷ್‌ಕುಮಾರ್ ಮತ್ತು ಡಿವೈಎಸ್‌ಪಿ ಪ್ರಭುದೇ... ಮಾನೆ ತಮ್ಮ ಶಿಷ್ಯ ಎಸ್ಐ ಲಿಂಗರಾಜುನ ತನಿಖ... ವರದಿಯೇ ಸರಿ ಎಂದು ಶರಾ ಬರೆದು ಬಿಸಾಕುತ್ತಾರೆ.

ವಕೀಲ ರವಿಕಿರಣ್ ಮುರ್ಡೇಶ್ವರ್


ಉಡುಪಿ ಪೊಲೀಸರು ರೇಖಾಳ ಬೆಕ್ಕಿನ ಕಣ್ಣಿ... ನೋಟದ ಮಾಟಕ್ಕೆ, ಹಣದ ಮೋಹಕ್ಕೆ ಬಿದ್ದು ಸಂತೋಷ... ಸಾವಿನ ಕೇಸ್ ಹಳ್ಳ ಹಿಡಿಸಿದ್ದಾರೆಂಬ ಗುಲ್ಲು ಎಲ್ಲೆ... ಹಬ್ಬಿತ್ತು. ಆದರೆ ರೇಖಾ ಮಾತ್ರ ತಾನು ಸೇಫ್ ಎಂದು ಭಾವಿಸಿ ಹಾಯಾಗಿ ಹಾರಾಡತೊಡಗಿದ್ದಳು. ಇತ್ತ ಸಂತೋಷ... ಅಣ್ಣ ಡಾ. ಫ್ರಾನ್ಸಿಸ್ ರೇಖಾಳನ್ನು ಜೈಲಿಗೆ ಕಳಿಸಲು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದ್ದರು. ಆತ ರವಿಕಿರಣ... ಮುರ್ಡೇಶ್ವರ್ ಎಂಬ ವೃತ್ತಿಬದ್ಧತೆ-ಬುದ್ಧಿವಂತಿಕೆಯ... ವಕೀಲರನ್ನು ಸಂಧಿಸಿದ್ದರು. ಉಡುಪಿ ಪೊಲೀಸರ...

⇨06


ರವಿಕಿರಣ್ ಮುರ್ಡೇಶ್ವರ್

ಪ್ರೇಮಪಾಶ

ಮಂಗಳೂರಿನ ಬಜ್ಪೆಯ ಮೊಂತೇರೊ ಖಾನ್‌ದಾನ್‌ನ ಕೊನೆಯ ಕುಡಿ ಸಂತೋಷ್‌ಗೆ ಪ್ರೇಮ ವಿವಾಹವೇ ಪಾಶವಾಯ್ತಾ? ಆತನ ಅನುಮಾನಾಸ್ಪದ ಸಾವು ಕಂಡರೆ ಇಂಥದೊಂದು ಅನುಮಾನ ಬರುತ್ತದೆ. ಬಜ್ಪೆಯ ಸಾಲ್ವದೋರ್ ಮೊಂತೇರೊ ಎಂಬ ಸಿರಿವಂತ ಕ್ರಿಶ್ಚಿಯನ್ ಜಂಟಲ್‌ಮನ್‌ನ ಮೂರನೇ ಮಗ ಈ ಸಂತೋಷ. ಆ ಕುಟುಂಬ ಹಣದಲ್ಲಷ್ಟೇ ಅಲ್ಲ, ವಿದ್ಯೆ ಸಂಸ್ಕಾರದಲ್ಲೂ ಶ್ರೀಮಂತವೇ. ನೋಡಲು ಸುರಸುಂದರಾಂಗನಂತಿದ್ದ


ಸಂತೋಷ್ ರೇಖಾ

ಸಂತೋಷ್ ಕತಾರ್‌ನಲ್ಲಿ ಆಕೌಂಟೆಂಟ್ ಆಗಿದ್ದ, ಕೈತುಂಬ ಸಂಪಾದಿಸುತ್ತಿದ್ದ.

ಕೊಲ್ಲಿಯಲ್ಲಿರುವಾಗ ಆಗಾಗ ಬಾರ್ ಒಂದಕ್ಕೆ ಹೋಗುತ್ತಿದ್ದ. ಅದು ಉಡುಪಿಯ ಮೂಡುಬೆಳ್ಳೆಯ ಸುಂದರಿ ರೇಖಾಳ ಮಾವನ ಬಾರ್. ಬ್ಯೂಟಿಷಿಯನ್ ಆಗಿದ್ದ ರೇಖಾ ಬಾರ್‌ಗೆ ಬಂದು-ಹೋಗುತ್ತಿದ್ದಳು. ಅಲ್ಲಿ ಸಂತೋಷ್-ರೇಖಾ ನಡುವೆ ಪ್ರಣಯವಾಗುತ್ತದೆ. ಚಿಕ್ಕಸ ಕಂಗಳ ಚೆಲುವೆ ರೇಖಾ ಅದೆಷ್ಟು ಮಾರಕವೋ ಅಷ್ಟೇ ಆಕರ್ಷಕ ಸಂತೋಷ್ ಮೊಂತೇರೊ. ಇವರ ಪ್ರಣಯ ಪರಿಣಯಕ್ಕೆ ಬಂದು ಸಿಲುಕ್ಕಿದ್ದ. ರೇಖಾ ಲಂಗು-ಲಗಾಮಿಲ್ಲದ ಹಾರಾಟ ಹೆಣ್ಣೆಂಬುದು ಮೊಂತೇರೊ ಕುಟುಂಬಕ್ಕೆ ಗೊತ್ತಿತ್ತು, ಹಾಗಾಗಿ ಸಂತೋಷ್‌ಗೆ ಈ ಸಂಬಂಧ ಬೇಡವೆಂದು ಆತನ ತಾಯ್ತಂದೆ ಎಚ್ಚರಿಸುತ್ತಾರೆ. ಹೆತ್ತವರನ್ನು ಧಿಕ್ಕರಿಸಿ ರೇಖಾಳನ್ನು ಹೆಂಡತಿ ಮಾಡಿಕೊಳ್ಳುತ್ತಾನೆ. ಅಂತೂ ಸಂಸಾರ ಸಾಗುತ್ತದೆ. ಎರಡು ಮಕ್ಕಳೂ ಆಗುತ್ತಾರೆ.

ಆದರೆ ರೇಖಾಗೆ ತಾನು ಎರಡು ಮಕ್ಕಳ ತಾಯಿ ಎಂಬ ಪ್ರಜ್ಞೆಯೇ ಇರುವುದಿಲ್ಲ, ಚೆಲ್ಲು-ಚೆಲ್ಲು ಸ್ವಭಾವ; ಜೂಜು-ಮೋಜು-ಮಸ್ತಿ ಆಕೆಯ ನಿತ್ಯಕರ್ಮ. ಗಂಡ ದಂಡಿಯಾಗಿ ಕಳಿಸುತ್ತಿದ್ದ ಹಣ ಲಕ್ಷಗಳ ಲೆಕ್ಕದಲ್ಲೇ ಖರ್ಚು ಮಾಡುತ್ತಿದ್ದಳು. ಕತಾರಿಗೆ ಹೋದರೂ ಅಲ್ಲೂ ದುಂದುವೆಚ್ಚ ಹೆಂಡತಿಯ ಹದ್ದು ಮೀರಿದ ಬದುಕು ಕಂಡು ಸಂತೋಷ್ ಹೌಹಾರಿ ಹೋಗಿದ್ದ. ತಾನು ಗಲ್ಫ್‌ಲ್ಲೇ ಉಳಿದರೆ ಹೆಂಡತಿ ಹಾದಿ ತಪ್ಪುತ್ತಾಳೆಂದು ಆತ ಊರಿಗೆ ಬಂದು ಸೆಟ್ಲ್ ಆಗುವ ಯೋಚನೆಗೆ ಬರ್‍ತಾನೆ. ಗಂಡ ಜತೆಯಲ್ಲೇ ಇದ್ದರೆ ಸ್ವೇಚ್ಛೆಗೆ ಕಡಿವಾಣ ಬೀಳುವ ಭಯ ರೇಖಾಗೆ ಶುರುವಾಗುತ್ತದೆ. ಊರಿಗೆ ಬರದಂತೆ ವಿರೋಧ ಒಡ್ಡುತ್ತಾಳೆ ಗಂಡನಿಗೆ.

ಹಠಕ್ಕೆ ಬಿದ್ದು ಕತಾರ್ ಬಿಟ್ಟುಬರುತ್ತಾನೆ ಸಂತೋಷ್. ಉಡುಪಿಯ ಬನ್ನಂಜೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ಸಂಸಾರ ಹೂಡುತ್ತಾನೆ. ಆಗ ಶುರುವಾಗುತ್ತದೆ ಗಂಡ-ಹೆಂಡತಿ ಜಗಳ. ಗಂಡನ ಸಾಮೀಪ್ಯವೇ ಸ್ವೇಚ್ಛೆಯ ಹಕ್ಕಿ ರೇಖಾಗೆ ಬಂಗಾರದ ಪಂಜರವಾಗುತ್ತದೆ. ಐಷಾರಾಮಿ ಜೀವನ ಇದ್ದರೂ ನೆಮ್ಮದಿ ಇಲ್ಲದಾಗುತ್ತದೆ. ಇತ್ತ ಹೆಂಡತಿ ಹಳಿ ತಪ್ಪಿದರೆ ಅತ್ತ ಗಂಡ ಹಗ್ಗ ಕಡಿವ ಚಾಳಿಗೆ ಬೀಳುತ್ತಾನೆ. ಒಳಗೊಳಗೇ ಏನೇನಾಗಿತ್ತೋ ಗೊತ್ತಿಲ್ಲ, ಸಂತೋಷ್ ಸಂಶಯಾಸ್ಪದವಾಗಿ ಸಾವಿಗೀಡಾಗಿದ್ದಾನೆ. ಗಂಡ ಗತಿಸಿದ ನಂತರ ಲಂಡನ್‌ನಲ್ಲಿ ನೆಲೆಯಾಗುವ ಕನಸು ಕಾಣುತ್ತಿದ್ದ ರೇಖಾ ಈಗ ಜೈಲು ಪಾಲಾಗುವ ಆತಂಕದಲ್ಲಿದ್ದಾಳೆ. ಮೊಂತೇರೋ ಕುಟುಂಬಕ್ಕೆ ನ್ಯಾಯ ಸಿಕ್ಕೀತಾ?

ಬ್ಲ್ಯಾಕ್‌ಮೇಲ್!!

ಮಂಗಳೂರಿನ ಮೊಂತೇರೋ ಕುಟುಂಬಕ್ಕೆ ಸೊಸೆ ರೇಖಾ ಎಂಬ ಖಯಾಲಿ ಹೆಂಗಸಿನ ಮೇಲೆಯೇ ಸಂಶಯ. ರೇಖಾಳ ಬಳಿ ವಿದೇಶಿ ನಿರ್ಮಿತ ರಿವಾಲ್ವರ್ ಇದೆ. ಇದನ್ನು ಬಳಸಿ ರೇಖಾ ಗಂಡ ಸಂತೋಷ್‌ನನ್ನು ಮುಗಿಸಿದಳಾ? ಅಥವಾ ಯಾರಿಗಾದರೂ ಸುಪಾರಿ ಕೊಟ್ಟಿದ್ದಳಾ? ಸಂತೋಷ್‌ನ ಗೆಳೆಯನಾಗಿದ್ದ ಬಜ್ಪೆಯ ಹರುಷ ಶೆಟ್ಟಿಯನ್ನೇನಾದರೂ ಬಳಸಿಕೊಂಡು ಹತ್ಯೆ ಸ್ಕೆಚ್ ಹಾಕಿದ್ದಾಳಾ?

ಹರುಷ ಶೆಟ್ಟಿ- ಸಂತೋಷ್ ಆತ್ಮೀಯ ಮಿತ್ರರಾಗಿದ್ದರು. ಹಣವಂತ ಸಂತೋಷ್ ಗೆಳೆಯನಿಗೊಂದು ಬೈಕ್ ಕೊಡಿಸಿದ್ದ. ಹಣ ಬೇಕೆಂದಾಗ ಕೊಡುತ್ತಿದ್ದ. ಆತನ ಮೂಲಕವೇ ಹೆಣ್ಣುಗಳ ಬೇಟೆಗೆ ಇಳಿಯುತ್ತಿದ್ದ. ಸಂತೋಷನ ದೌರ್ಬಲ್ಯ ಗೊತ್ತಿದ್ದ ಹರುಷನೂ ಸಹಕರಿಸಿ ಹಣ ಮಾಡುತ್ತಿದ್ದ. ಒಮ್ಮೆ ಸಂತೋಷ್ ಇಬ್ಬರು ಹುಡುಗಿಯರ ಜತೆ ರಾಸಲೀಲೆ ನಡೆಸುತ್ತಿದ್ದಾಗ ಈ ಹರಾಮಿ ಹರುಷ ಶೂಟ್ ಮಾಡಿಕೊಂಡಿದ್ದ. ಅದನ್ನು ತೋರಿಸಿ ಬ್ಲ್ಯಾಕ್‌ಮೇಲ್ ಮಾಡಲು ಹವಣಿಸಿದ್ದ. ಗೆಳೆಯ ಜೋಕ್ ಮಾಡುತ್ತಾನೆಂದು ಸಂತೋಷ್ ತಲೆ ಕೆಡಿಸಿಕೊಳ್ಳಲಿಲ್ಲ.

ಆಗ ಹರುಷ ಶೆಟ್ಟಿ ಜಿಲ್ಲಾ ಅಪರಾಧ ನಿಗ್ರಹದಳ (ಡಿಸಿಆರ್‌ಬಿ) ಯಲ್ಲಿದ್ದ ಚಾಲಾಕಿ ಪೇದೆ ಕಿಶೋರ್‌ಗೆ ತನ್ನಲ್ಲಿದ್ದ ನೀಲಿಚಿತ್ರ ಕೊಟ್ಟಿದ್ದಾನೆ. ಇಬ್ಬರೂ ಸೇರಿ ಹಣವಂತ ಸಂತೋಷ್‌ನ ಬೆದರಿಸಿ ಸುಲಿಗೆ ಮಾಡೋಣ ಎಂದಿದ್ದಾನೆ. ಪೊಲೀಸ್ ದರ್ಪ ಬಳಸಿ ಕಿಶೋರ್ ಬ್ಲ್ಯಾಕ್‌ಮೇಲ್‌ಗೆ ಇಳಿದಿದ್ದಾನೆ. ಅನಾಮತ್ತು 50 ಲಕ್ಷದ ಬೇಡಿಕೆ ಇಟ್ಟಿದ್ದಾನೆ. ಇಲ್ಲದಿದ್ದರೆ ರಾಸಲೀಲೆ ಚಿತ್ರ ನೆಪದಲ್ಲಿ ಬಂಧಿಸುವುದಾಗಿ ಕಾಡಿದ್ದಾನೆ. ಕಂಗಾಲಾದ ಸಂತೋಷ್ 25 ಲಕ್ಷಕ್ಕೆ ಒಪ್ಪಿದ್ದಾನೆ.

ಕಿಶೋರ್-ಹರುಷ ಈ ಹಣ ಹಂಚಿಕೊಂಡಿದ್ದಾರೆ. ಆದರೂ ಆಗಾಗ ಒಂದು ಲಕ್ಷ ಕೊಡು... ಎರಡು ಲಕ್ಷ ಕೊಡು ಎಂದು ಬೆದರಿಸುತ್ತಲೇ ಇದ್ದಾರೆ. ಆಗ ಸಂತೋಷ್ ಕಂಪ್ಲೇಂಟು ಕೊಟ್ಟಿದ್ದಾನೆ. ಪೇದೆ ಕಿಶೋರ್ ಸಸ್ಪೆಂಡ್ ಆಗಿದ್ದಾನೆ. ಹರುಷ ಅಂದರ್ ಆಗಿದ್ದಾನೆ. ಈ ಸಿಟ್ಟಿಂದ ಕಿಶೋರ್-ಹರುಷ ಕೆರಳಿ ಕೆಂಡವಾಗಿದ್ದರು. ಇವರಿಬ್ಬರನ್ನು ರೇಖಾ ಗಂಡನಿಗೆ ಗತಿ ಕಾಣಿಸಲು ಬಳಸಿಕೊಂಡಳಾ?


ಮೈಸೂರು: ಲ್ಯಾನ್ಸರ್ ರಾಜೇಂದ್ರ ಮುಂಡಾಯಿಸಿದ್ದು 50 ಕೋಟಿ!

ಮೊನ್ನೆಮೊನ್ನೆಯಷ್ಟೆ ದೇಶದ ನಂಬರ್ ಒನ್ ಸ್ವಚ್ಛ ನಗರಿ ಅಂತ ಕರೆಸಿಕೊಂಡ ಮೈಸೂರಿನ ಗ್ರಹಗತಿ ಅದ್ಯಾಕೊ ನಿಧಾನಕ್ಕೆ ಹಳ್ಳ ಹಿಡಿಯುತ್ತಿರುವಂತಿದೆ. ಎರಡು ಸಂಚಿಕೆಯ ಹಿಂದಷ್ಟೇ ಅವ್ವಾ ಮಾದೇಶನೆಂಬ ರೌಡಿ ಕಾರ್ಪೋರೇಟರ್‌ನನ್ನು ಜೈಲಿಗೆ ತಳ್ಳಿದ ಕಾರಣಕ್ಕೆ ಪತ್ರಿಕೆಯಲ್ಲಿ ಜಾಗ ಗಿಟ್ಟಿಸಿದ್ದ ಮೈಸೂರು ಕಳೆದ ಬಾರಿ ಕೋಮುಗಲಭೆಯ ಕರಾಳ ಕಾರಣಕ್ಕೆ ಸುದ್ದಿಯಾಗಿತ್ತು. ನೋ ಡೌಟ್, ಕಿತಾಪತಿ ಚೆಡ್ಡಿಗಳು (ಇನ್ಮುಂದೆ ಇವರನ್ನು 'ಪ್ಯಾಂಟಿ'ಗಳು ಅಂತ ಕರೆಯಬೇಕಾಗಬಹುದು!) ರಾಜು ಎಂಬ ರೌಡಿಶೀಟರ್ ಒಬ್ಬನ ಹೆಣ ಮುಂದಿಟ್ಟುಕೊಂಡು ಮಾಡಿದ ಗಲಾಟೆ ಮೈಸೂರಿನ ಸಾಂಸ್ಕೃತಿಕ ಹಿರಿಮೆಗೆ ಮಸಿ ಬಳಿಯುವಂತದ್ದು. ಬಿಜೆಪಿಗಳ ಕ್ಷುಲ್ಲಕ ರಾಜಕಾರಣಕ್ಕೆ ಹತ್ತಾರು ಒಳಸುಳಿಗಳಿವೆ. ಅಂದ ಹಾಗೆ ಅವ್ವಾ ಮಾದೇಶ ಹಾಗೂ ಬಿಜೆಪಿ ಗಲಾಟೆ ಗದ್ದಲದ ನಡುವೆ ಮೈಸೂರಿನ ಮತ್ತೊಂದು ವಿದ್ಯಮಾನ ಹೆಚ್ಚು ಪ್ರಾಮುಖ್ಯತೆಯನ್ನೇ ಪಡೆದುಕೊಳ್ಳಲಿಲ್ಲ. ಅದು ಬರೋಬ್ಬರಿ ಐವತ್ತು ಕೋಟಿ ಉಂಡೆನಾಮ ತೀಡಿದ ವಂಚನೆ ಪ್ರಕರಣ. ಕೇವಲ ಅಮೌಂಟಿನ ಗಾತ್ರದ ಕಾರಣಕ್ಕೆ ಮಾತ್ರವಲ್ಲ, ಮತ್ತೊಂದು ಕಾರಣಕ್ಕೂ ಈ ಪ್ರಕರಣ ಗಮನ ಸೆಳೆಯುವಂತದ್ದು. ಏನಪಾ ಅಂದ್ರೆ, ಈ ಪಾಟಿ ಹೋಲ್‌ಸೇಲ್ ಪಂಗನಾಮ ತೀಡಿದ್ದು ಲ್ಯಾನ್ಸರ್ ರಾಜೇಂದ್ರ; ಇಷ್ಟೇಳಿದ ಮೇಲೂ ಈ ಪಾತ್ರದ ಪೂರ್ಣ ಪರಿಚಯ ಓದುಗರ ಕಣ್ಮುಂದೆ ಕಟ್ಟುವುದಿಲ್ಲ ಅನ್ನೋದು ಗೊತ್ತು, ಆದ್ರೆ ಈತ ಜೆಡಿಎಸ್ ಪ್ರಭಾವಿ ಮುಖಂಡ, ಕಂ ಚಿಕ್ಕಮಗಳೂರು ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷನಾಗಿದ್ದವನು. ಜೊತೆಗೆ 2013ರ ಎಂಎಲ್‌ಎ ಎಲೆಕ್ಷನ್‌ನಲ್ಲಿ ಶೃಂಗೇರಿಯಿಂದ ಬಿಜೆಪಿಯ ಜೀವರಾಜ್ ಎದುರು ಸ್ಪರ್ಧಿಸಿದ್ದ ಪೊಲಿಟಿಕಲ್ ಪಟು ಅಂದ ಮೇಲಾದರು ಅವನ ಪ್ರಭಾವದ ಅಂದಾಜುಗಳು ನಿಮಗೆ ದಕ್ಕಬಹುದು. ಅಲ್ಲದೇ, ಇಡೀ ವಂಚನೆಯ ಹಿಂದಿರುವ ಪೊಲಿಟಿಕಲ್ ಆಯಾಮಗಳ ಸುಳಿವೂ ಸಿಕ್ಕಬಹುದು!

ಅವನು ಲ್ಯಾನ್ಸರ್ ರಾಜೇಂದ್ರ

ಪ್ರಜ್ಞಾವಂತರ ಊರು ಅಂತ ಕರೆಸಿಕೊಳ್ಳುವ ಮೈಸೂರಿನಲ್ಲೇ ಗ್ರೀನ್ ಬಡ್ಸ್, ಗ್ರೀನ್ ಲೀವ್ಸ್‌ನಂತಹ ವಂಚಕ ಬ್ಲೇಡ್ ಕಂಪನಿಗಳು ನೆಲೆ ಕಂಡುಕೊಳ್ಳುತ್ತಾ ಬಂದಿರೋದು ವಿಪರ್ಯಾಸವೋ, ವಿಪರೀತವೋ ಗೊತ್ತಿಲ್ಲ. ಆದರೆ ಆ ಪಟ್ಟಿಗೆ ಹೊಸ ಸೇರ್ಪಡೆಯೇ ಈ ಲ್ಯಾನ್ಸರ್ ಫೈನಾನ್ಸ್, ಲ್ಯಾನ್ಸರ್ ಚಿಟ್ಸ್, ಲ್ಯಾನ್ಸರ್ ಲ್ಯಾಂಡ್ ಡೆವಲಪರ್ಸ್ ಎಂಬ ಮಲ್ಟಿ ಮಗ್ಗುಲಿನ ಚೊಂಬು ಕಂಪನಿ. ಇದರ ಹಿಂದಿರುವ ಮೆಗಾ ವಂಚಕನ ಹೆಸರೇ ಟಿ.ಸಿ.ರಾಜೇಂದ್ರ ಅಲಿಯಾಸ್ ಲ್ಯಾನ್ಸರ್ ರಾಜೇಂದ್ರ. ತನ್ನ ಹೆಂಡತಿ ಅನಿತಾ, ಗೆಳೆಯ ರವೀಂದ್ರ ಬೋರೆ, ಅವನ ಹೆಂಡತಿ ರೀಟಾಳ ಜೊತೆ ಸೇರಿಕೊಂಡು ರೊಕ್ಕಸ್ಥರನ್ನೇ ಹುಡುಕಿಹುಡುಕಿ ಈತ ಮಾಡಿರುವ ವಂಚನೆಯ ಗಾತ್ರ ಐವತ್ತು ಕೋಟಿಗೂ ಮೀರಿದ್ದು.

ಮೂಲತಃ ಚಿಕ್ಕಮಗಳೂರಿನ ಶೃಂಗೇರಿ ತಾಲೂಕು ಕೊಪ್ಪ ಬಳಿಯ ತಲಕಾನೆ ಎಂಬ ಊರಿನ ಟಿ.ಸಿ.ರಾಜೇಂದ್ರ 1995ರಲ್ಲಿ ಮೆಡಿಕಲ್ ರೆಪ್ರಜಂಟೇಟಿವ್ ಆಗಿ ಮೈಸೂರಿಗೆ ಒಕ್ಕರಿಸಿದ. ಅನಿತಾ ಎಂಬ ಕ್ರಿಶ್ಚಿಯನ್ ಹುಡುಗಿಯನ್ನು ಪ್ರೇಮಿಸಿ ಮದುವೆಯಾದ ರಾಜೇಂದ್ರ ರೆಪ್ ವೃತ್ತಿಗೆ ಎಳ್ಳುನೀರು ಬಿಟ್ಟು ಮೈಸೂರಿನ ಯಾದವಗಿರಿಯಲ್ಲಿ ಲ್ಯಾನ್ಸರ್ ಫೈನಾನ್ಸ್ ಅಂಗಡಿ ತೆರೆದು ಕೂತ. ಫಿಕ್ಸೆಡ್ ಡಿಪಾಜಿಟ್ ಮೇಲೆ ವಾರ್ಷಿಕ 24% ಬಡ್ಡಿ ನೀಡುತ್ತೇನೆಂದು ರಾಜೇಂದ್ರ ಬಿಟ್ಟ ಬುರುಡೆಯನ್ನು ನಂಬಿದ ಕೆಲ ರೊಕ್ಕಸ್ಥರು ಮಿನಿಮಮ್ ಕಾಮನ್‌ಸೆನ್ಸ್ ಕೂಡಾ ಇಲ್ಲದೆ ದೊಡ್ಡ ಗಂಟನ್ನು ತಂದು ಹೂಡಿಕೆ ಮಾಡಿದರು. ಆ ಹಣದಿಂದ ಹೊಂಡಾ ಸಿಟಿ, ಸಿಆರ್‌ವಿ, ಫೋರ್ಡ್ ಐಕಾನ್ ಮೊದಲಾದ ಐಷಾರಾಮಿ ಕಾರುಗಳನ್ನು ಖರೀದಿಸಿದ ರಾಜೇಂದ್ರ ಅವುಗಳ ಬಡಾಯಿ ಮರೆಯಲ್ಲೇ ರೋಟರಿ ಕ್ಲಬ್ ಸದಸ್ಯನಾದದ್ದಲ್ಲದೆ ಯಾದವಗಿರಿ ನಿವಾಸಿಗಳ ಸಂಘದ ಅಧ್ಯಕ್ಷನೂ ಆದ.



ರೀಟಾ ಮತ್ತು ರಾಜೇಂದ್ರ

ಲೇಡೀಸ್ ಕ್ಲಬ್, ಬ್ಯೂಟಿ ಕ್ಲಬ್ ಮುಂತಾದೆಡೆ ಅಲೆದಾಡಿ ನಿವೃತ್ತ ಅಧಿಕಾರಿಗಳು, ವಿಶ್ರಾಂತ ಅಧ್ಯಾಪಕರ ಸ್ನೇಹ ಸಂಪಾದಿಸಿ ಠೇವಣಿ ಹೂಡುವಂತೆ ಮನವೊಲಿಸುವುದೇ ಅವನ ಹೆಂಡತಿ ಅನಿತಾಳ ಪ್ರಧಾನ ಕಸುಬಾಯಿತು. ಇವರ ಬೆಣ್ಣೆಯ ಮಾತುಗಳಿಗೆ ಜನರ ದುರಾಸೆಯ ಮನಸ್ಸು ಕರಗಲು ಬಹಳ ಸಮಯ ಬೇಕಾಗಲಿಲ್ಲ. ಲ್ಯಾನ್ಸರ್ ಫೈನಾನ್ಸ್ ನೋಡನೋಡುತ್ತಿದ್ದಂತೆ ಬೃಹತ್ತಾಗಿ ಬೆಳೆದುನಿಂತಿತು. ಆಫೀಸ್-ಮನೆಯ ತುಂಬೆಲ್ಲ ಅಬ್ದುಲ್ ಕಲಾಂ, ಶೃಂಗೇರಿ ಶ್ರೀಗಳು ಮತ್ತು ರಾಜಕೀಯ ವ್ಯಕ್ತಿಗಳ ಜತೆ ತೆಗೆಸಿಕೊಂಡ ಫೋಟೋ ತೂಗುಹಾಕಿದ ಅವನ ಗತ್ತನ್ನು ಅನುಮಾನಿಸುವುದಕ್ಕೇ ಸಾಧ್ಯವಿಲ್ಲದಂತಹ ಬಿಲ್ಡಪ್ ಸೃಷ್ಟಿಸಿಕೊಂಡ ರಾಜೇಂದ್ರ 2004ರ ವೇಳೆಗೆ ದೇವರಾಜ ಅರಸು ರೋಡ್‌ನಲ್ಲಿ ಲ್ಯಾನ್ಸರ್ ಫೈನಾನ್ಸ್, ಲ್ಯಾನ್ಸರ್ ಚಿಟ್ ಫಂಡ್, ಲ್ಯಾನ್ಸರ್ ಡೆವಲಪರ್ಸ್ ಎಂಬ ಭರ್ಜರಿ ಅಡ್ಡೆಗಳನ್ನು ತೆರೆದು ಕೂತ.

ದಾಖಲೆಗಳೇ ನಾಪತ್ತೆ

ಮೊದಮೊದಲು ಜನರನ್ನು ನಂಬಿಸುವುದಕ್ಕಾಗಿ ಸಂಗ್ರಹಿಸಿದ ಹಣಕ್ಕೆ ರಸೀದಿ, ಬಾಂಡ್ ನೀಡುತ್ತಿದ್ದ ಲ್ಯಾನ್ಸರ್ ವಹಿವಾಟನ್ನು ನಂಬಿದ ಮೈಸೂರಿನ ಜನ ಹೋಲ್‌ಸೇಲಾಗಿ ಪಿಗ್ಗಿ ಬೀಳತೊಡಗಿದರು. ಅದೇ ಹಣದಿಂದ ಶೃಂಗೇರಿಯಲ್ಲಿ 5 ಕೋಟಿ ಬೆಳೆಬಾಳುವ ಲ್ಯಾನ್ಸರ್ ಲಾಡ್ಜ್ ಹೋಟೆಲ್ ಖರೀದಿಸಿ ತನ್ನ ಪರಿಚಯಸ್ಥರೊಬ್ಬರ ಮೂಲಕ ಉಸ್ತುವಾರಿಗೆ ಬಿಟ್ಟಿದ್ದಾನೆ. ಅವರ ಕಣ್ಣಿಗೆ ಅದನ್ನು ಹೂಡಿಕೆಯಂತೆ ತೋರಿಸಿದ್ದಾನಾದರು ಆ ಹೋಟೆಲ್ ಮೇಲೆ ಶೇ.90 ಲೋನ್ ಎತ್ತಿದ್ದು ಜನಕ್ಕೆ ಗೊತ್ತಾಗಲೇ ಇಲ್ಲ. ಆರ್.ಬಿ.ಐ. ಪರವಾನಗಿಯನ್ನೇ ಪಡೆಯದೆ ನಡೆಸಿದ ಇವನ ಅಕ್ರಮ ವಹಿವಾಟಿನ ಮೇಲೆ 2008 ರಲ್ಲಿ ಇನ್‌ಕಮ್ ಟ್ಯಾಕ್ಸ್‌ನವರ ಕಣ್ಣು ಬಿದ್ದು ರೇಡ್ ಕೂಡಾ ಆಗಿತ್ತು. ಆದರೆ ತನಗಿದ್ದ ರಾಜಕೀಯ ಹಾಗೂ ಹಣ ಬಲದಿಂದ ರೇಡ್‌ನಿಂದ ಪಾರಾದ ರಾಜೇಂದ್ರನ ಕೈಚಳಕಕ್ಕೆ ಅವನ ಕಂಪನಿಯಲ್ಲಿದ್ದ ಕಂಪ್ಯೂಟರ್ ಹಾಗೂ ಬಹುಮುಖ್ಯ ದಾಖಲೆಗಳೇ ನಾಪತ್ತೆಯಾಗಿದ್ದವು. ಇವತ್ತಿಗೂ ಅವು ಪತ್ತೆಯಾಗಿಲ್ಲ.

2012-2013ರಲ್ಲಿ ಅದ್ದಡ್ಡ ಎಂಬಲ್ಲಿ 4.5 ಎಕರೆ ಜಮೀನು, ನಂಜನಗೂಡು ಹೇಚಗನಹಳ್ಳಿಯಲ್ಲಿ 15 ಎಕರೆ ಜಮೀನು ಖರೀದಿಸಿ ಹೂಡಿಕೆದಾರರಿಗೆ ವಿಶ್ವಾಸ ಬರುವಂತೆ ನಡೆದುಕೊಳ್ಳುತ್ತಲೇ ಮೈಸೂರಿನಲ್ಲಿ ತನ್ನ ಸ್ವಂತ ವಾಸಕ್ಕೆಂದು ಹೊಸ ಬಂಗಲೆ ಖರೀದಿಸುವಷ್ಟು ಕಮಾಯಿ ಮಾಡಿಕೊಂಡಿದ್ದ. ಈತ ಎಂತಹ ಚಾಣಾಕ್ಷ ಎಂದರೆ ತಾನು ಖರೀದಿಸಿದ ಎಲ್ಲಾ ಆಸ್ತಿಗಳ ಮೇಲೆ ಶೇ 90ರಷ್ಟು ಸಾಲ ಎತ್ತಿದ್ದ. ಹಾಗೊಮ್ಮೆ ಹೂಡಿಕೆದಾರರು, ಹಣ ವಾಪಾಸ್ ಕೊಡಲಿಲ್ಲ ಅಂತ ಈ ಜಮೀನುಗಳನ್ನು ನ್ಯಾಯಾಲಯದ ಮೂಲಕ ಆಕ್ರಮಿಸಿಕೊಂಡರೂ ಅವರಿಗೆ ಸಾಲದ ಹೊರೆ ಜೋತುಬೀಳುವಂತೆ ಚಾಣಾಕ್ಷತೆ ಮೆರೆದಿದ್ದ. ಶೃಂಗೇರಿ ಶ್ರೀಗಳ ಸಹೋದರರ ಜೊತೆಗೆ ಹೊಂದಿದ್ದ ಸ್ನೇಹವೇ ಇವನ ಸಾಲದ ಬಂಡವಾಳವಾಯಿತು. ಬೆಂಗಳೂರಿನ ವಿ.ವಿ. ಕಾರ್ಪೋರೇಟೀವ್ ಬ್ಯಾಂಕ್, ಶೃಂಗೇರಿ ಮತ್ತು ಮೈಸೂರಿನ ಎಸ್.ಬಿ.ಎಂ, ರೆಪ್ಕೋ, ವಿಜಯಾ ಬ್ಯಾಂಕ್, ಹೆಚ್‌ಡಿಎಫ್‌ಸಿ ಬ್ಯಾಂಕ್, ಆಕ್ಸಿಸ್ ಬ್ಯಾಂಕ್‌ಗಳು ಈತನಿಗೆ ಅಕೌಂಟ್ ಓಪನ್ ಮಾಡಿಕೊಟ್ಟು ಧಾರಾಳ ಧನಸಹಾಯ ಮಾಡಿದವು. ಆ ಮೂಲಕ ರಾಜೇಂದ್ರ ಬಿಗ್ ಫೈನಾನ್ಸಿಯರ್ ಎಂಬ ಹವಾ ಕ್ರಿಯೇಟ್ ಮಾಡುವಲ್ಲಿ ಈ ಬ್ಯಾಂಕ್‌ಗಳು ತಮ್ಮ ಪಾತ್ರ ನಿಭಾಯಿಸಿದ್ದವು.


ಶೃಂಗೇರಿ ಶ್ರೀ ಸಹೋದರರ ಸಂಬಂಧಿ

ಬುಕ್‌ಸ್ಟಾಲ್ ರವೀಂದ್ರ

ರಾಜೇಂದ್ರನ ಸಕಲಷ್ಟೂ ದಂಧೆಗಳಿಗೆ ಬೆನ್ನೆಲುಬಾಗಿ ನಿಂತದ್ದು ಮಲೆನಾಡು ಮೂಲದ ಪ್ರಖ್ಯಾತ ಪತ್ರಿಕೆಯೊಂದರ ಮಾಜಿ ಪ್ರಸರಣ ಅಧಿಕಾರಿ, ಪ್ರಸ್ತುತ ಯಾದವಗಿರಿಯಲ್ಲಿ ಬುಕ್‌ಸ್ಟಾಲ್ ಹೊಂದಿರುವ ರವೀಂದ್ರ ಬೋರೆ ಎಂಬಾತ. ಇವನ ಮಡದಿ ರೀಟಾಳಂತೂ ರಾಜೇಶನ ಎತ್ತುವಳಿಗೆ ಗಿರಾಕಿ ಹುಡುಕುವ ಪ್ರಧಾನ ಅಸ್ತ್ರವಾಗಿ ಕೆಲಸ ಮಾಡಿದಳು. ಮಾಡೆಲಿಂಗ್ ಹುಡುಗಿಯರು, ಸಿನಿಮಾ ನಟಿಯರ ಪರಿಚಯವಿದ್ದುದಲ್ಲದೇ ಹಲವಾರು ಬ್ಯೂಟಿ ಕಾಂಟೆಸ್ಟ್‌ಗಳಿಗೆ ಈಕೆ ಜಡ್ಜ್ ಆಗಿಹೋಗುತ್ತಿದ್ದಳು. ಅಲ್ಲಿನ ಖಯಾಲಿ ಶ್ರೀಮಂತರ ಪರಿಚಯದಿಂದ ದಂಪತಿಗಳ ಸಮೇತ ಪಿಗ್ಗಿ ಬೀಳಿಸುತ್ತಿದ್ದಳು. ರಾಜೇಂದ್ರನ ಸಕಲ ವ್ಯವಹಾರಗಳಿಗೂ ಈಕೆಯೇ ಪ್ರಮುಖ ಸೂತ್ರಧಾರಿ.


ಹೀಗೆ ಸಾಗುತ್ತಿದ್ದ ಇವನ ವಂಚನೆ ಪುರಾಣ ಕ್ರಮೇಣ ವಿಶ್ವಾಸ ಕಳೆದುಕೊಳ್ಳಲಾರಂಭಿಸಿತು. ಹೂಡಿಕೆದಾರರಿಗೆ ಬಡ್ಡಿ ನೀಡುವ ಬದಲು ಸೈಟ್‌ಗಳನ್ನು ನೀಡುವುದಾಗಿ ಹೇಚಗನಹಳ್ಳಿಯಲ್ಲಿ 30x40, 60x40 ಸೈಟ್‌ಗಳನ್ನು ತೋರಿಸಿ ರೀಲ್ ಬಿಡತೊಡಗಿದ. ಆಮೇಲೆ ಬಡ್ಡಿ ಹಣಕ್ಕಾಗಿ ಬೋಗಸ್ ಡಿಪಾಜಿಟ್ (ಸುಳ್ಳು ರಸೀದಿ) ಇಡತೊಡಗಿದ. ಈತನ ಬೋಗಸ್ ವ್ಯವಹಾರ ಬಯಲಾಗುತ್ತಿದ್ದಂತೆಯೇ ನೌಕರರು ಒಬ್ಬೊಬ್ಬರಾಗಿ ಕೆಲಸ ಖಾಲಿ ಮಾಡತೊಡಗಿದರು. ಠೇವಣಿದಾರರು ಬಡ್ಡಿ ಹಣಕ್ಕಾಗಿ ಒತ್ತಾಯ ಮಾಡತೊಡಗಿದರು.

ಆಗ ಅವನ ಬೆಂಬಲಕ್ಕೆ ನಿಂತದ್ದು ವಿ.ವಿ.ಪುರಂ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ರವಿ. ಮನೆಯ ಮುಂದೆ ಠೇವಣಿದಾರರು ಗಲಾಟೆ ಮಾಡಿದರೆ ಗರುಡ ಜೀಪ್ ರಕ್ಷಣೆಗೆ ಬಂದು ನಿಲ್ಲುತ್ತಿತ್ತು. ಅಲ್ಲದೇ, ಪ್ರಸ್ತುತ ಜೈಲು ಕಂಬಿ ಎಣಿಸುತ್ತಿರುವ ಅವ್ವ ಮಾದೇಶ ಮುಂತಾದವರ ಪಡೆ ಇವನ ಬೆಂಬಲಕ್ಕಿದ್ದವು. ಖುದ್ದು ಹಾಲಿ ಶಾಸಕರೊಬ್ಬರು ಈತನನ್ನು ನೋಡಲು ಜೈಲ್‌ಗೆ ಎಂಟ್ರಿ ಹಾಕಿದ್ದರು ಎಂದರೆ ಈತನ ಹಿಂದಿನ ಬೆಂಬಲ ಅರಿವಾಗುತ್ತದೆ.

ಪೊಲಿಟಿಕಲ್ ಎಂಟ್ರಿ

ಹಣಕಾಸು ನಿಯಂತ್ರಣಾಧಿಕಾರಿಗಳು ಮತ್ತು ಸ್ಥಳೀಯ ಪೊಲೀಸರನ್ನು ಅಡ್ಜೆಸ್ಟ್ ಮಾಡಿಕೊಂಡಿರುವ ಲ್ಯಾನ್ಸರ್ ರಾಜೇಂದ್ರ ತನ್ನ ಅಷ್ಟೂ ಅಕ್ರಮವನ್ನು ಅಡಗಿಸಿಟ್ಟುಕೊಳ್ಳಲು ರಾಜಕಾರಣದ ಹಾದಿ ತುಳಿದ. ಅದೇಗೋ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಸ್ನೇಹ ಸಂಪಾದಿಸಿದ ಈತ ನಿಧಾನಕ್ಕೆ ಚಿಕ್ಕಮಗಳೂರಿನ ಜೆಡಿಎಸ್ ಉಪಾಧ್ಯಕ್ಷನೂ ಆದ. ನಂತರ 2013 ರಲ್ಲಿ ಶೃಂಗೇರಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಬಿಜೆಪಿ ಶಾಸಕ ಜೀವರಾಜ್ ವಿರುದ್ಧ ವಿಧಾನಸಭೆ ಚುನಾವಣಾ ಕಣಕ್ಕಿಳಿದ. ಮಜಾ ಎಂದರೆ ತನ್ನ ಪರ ಪ್ರಚಾರಕ್ಕೆಂದು ಈತ ಕರೆದೊಯ್ದದ್ದು ತನ್ನ ಚಿಟ್ ಕಂಪನಿಯಲ್ಲೇ ಹಣ ಹೂಡಿದ್ದವರನ್ನು. ಶೃಂಗೇರಿಯಲ್ಲಿ ತಾನು ಖರೀದಿಸಿದ್ದ ಹೋಟೆಲ್‌ನಲ್ಲೇ ಅವರನ್ನೆಲ್ಲಾ ತಂಗಿಸಿ ಚುನಾವಣಾ ಪ್ರಚಾರಕ್ಕೆಂದು ಕೋಟ್ಯಂತರ ರೂಪಾಯಿ ಸುರಿದ. ಅದೆಲ್ಲವೂ ಚಿಟ್ ಕಂಪನಿಯಲ್ಲಿ ಜನ ಹೂಡಿದ ದುಡ್ಡಾಗಿತ್ತು. ಆದರೆ ಪ್ರಚಾರಕ್ಕೆಂದು ಹೋದವರು 'ಓಹ್ ಎಲೆಕ್ಷನ್‌ಗೆ ಈ ಪಾಟಿ ಖರ್ಚು ಮಾಡುತ್ತಾನೆಂದರೆ, ಭಾರೀ ರೊಕ್ಕಸ್ಥನೇ ಇದ್ದಾನೆ; ನಮ್ಮ ಹಣಕ್ಕಂತೂ ಮೋಸವಿಲ್ಲ' ಅಂತ ಭ್ರಮಿಸಿದರು. ಅಷ್ಟೇ ಅಲ್ಲ, ಅಲ್ಲಿಂದ ವಾಪಾಸ್

⇨06


ಶೃಂಗೇರಿ ಹೋಟೆಲ್




ರಾ ಲ್ಯಾನ್ಸರ್ ಚಿಟ್ (ಪ್ರೈ) ಲಿ

ಫೈನಾನ್ಸಿಯರ್ ಮಾಂತೇರೋಗೆ ಗುಂಡಿಕ್ಕಿದಳಾ?

04⇦

ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಸುಳ್ಳು ವರದಿ ತಯಾರಿಸಿ ಎರಡೆರಡು ಬಾರಿ ಕೋರ್ಟಿಗೆ ಬಿ-ರಿಪೋರ್ಟ್ ಸಲ್ಲಿಸಿದಾಗ ರವಿಕಿರಣ್ ಮುರ್ಡೇಶ್ವರ್ ಅದನ್ನು ಪ್ರಶ್ನಿಸಿ ದಾವೆ ಹೂಡುತ್ತಾರೆ.


ಫ್ರಾನ್ಸಿಸ್


ರವಿಕಿರಣ್ ಮುರ್ಡೇಶ್ವರ್ ಉಡುಪಿ ಜಿಲ್ಲೆಯ ಸುಪ್ರಸಿದ್ಧ ಕ್ರಿಮಿನಲ್ ಲಾಯರ್. ಅಕ್ಕಪಕ್ಕದ ಜಿಲ್ಲೆಗಳಿಗೂ ಆತನ ಕೀರ್ತಿ ಹಬ್ಬಿದೆ. ಇಂಥ ವೃತ್ತಿನಿಷ್ಠ-ನ್ಯಾಯನಿಷ್ಠ ವಕೀಲ ಕೇಸನ್ನು ಶ್ರದ್ಧೆಯಿಂದ ನಡೆಸುತ್ತಾರೆ. ಅದಕ್ಕೆ ಬೇಕಾದ ಹೋಮ್ ವರ್ಕ್‌ಗೆ ಕಠಿಣ ಪರಿಶ್ರಮ ಹಾಕುತ್ತಾರೆ. ಇಂಥ ರವಿಕಿರಣ್ ಉಡುಪಿಯ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಸಂತೋಷ್ ಸಾವು ಆತ್ಮಹತ್ಯೆಯಲ್ಲ; ಬದಲಿಗೆ ಇದೊಂದು ವ್ಯವಸ್ಥಿತ ಕೊಲೆ ಎಂದು ವಾದ ಮಂಡಿಸುತ್ತಾರೆ. ನ್ಯಾಯಾಧೀಶರು ಸೆಕ್ಷನ್ 302 (ಕೊಲೆ), 182 (ಸುಳ್ಳು ಮಾಹಿತಿ) ಮತ್ತು 201 (ಸಾಕ್ಷ್ಯ ನಾಶ) ಪ್ರಕಾರ ರೇಖಾ ಮೊಂತೇರೋಗೆ ಸಮನ್ಸ್ ಜಾರಿಗೊಳಿಸುತ್ತಾರೆ. ಲಂಡನ್‌ಗೆ ಹೋಗಿ ಅಲ್ಲೇ ನೆಲೆ ನಿಲ್ಲುವ ಕನಸು ಕಾಣುತ್ತಿದ್ದ ರೇಖಾಳಿಗೆ ಈಗ ಜೈಲೂಟದ ದುಃಸ್ವಪ್ನ ಬೀಳುತ್ತಿದೆ.


ಕೊಲೆ ಮಾಡಿದ್ದು ಯಾರು?

ಬದುಕನ್ನು ಇಂಚಿಂಚಾಗಿ ಅನುಭವಿಸಿ ಭುವಿಯಲ್ಲಿ ಸ್ವರ್ಗ ಕಾಣಬೇಕೆಂಬ ಮನಸ್ಥಿತಿಯ ಸಂತೋಷ್ ಮೊಂತೇರೊ ಆತ್ಮಹತ್ಯೆ ಬಗ್ಗೆ ಕನಸಲ್ಲೂ ಯೋಚಿಸುವ ಗಿರಾಕಿಯಲ್ಲ. ಹಾಗಂತ ಆತನ ಬದುಕಿನ ಬಣ್ಣ ಬಲ್ಲ ಬಂಧುಗಳು-ಗೆಳೆಯರು ಖಡಾಖಂಡಿತವಾಗೇ ಹೇಳುತ್ತಾರೆ. ಆತನಿಗೆ ಜೀವ ತೆಗೆದುಕೊಳ್ಳುವಂಥ ಕಾರಣಗಳೇ ಇರಲಿಲ್ಲ. ಹೆಂಡತಿ ಬಗ್ಗೆ ಬೇಸರ ಇದ್ದರೂ ಅದನ್ನೇ ತಲೆಗೇನೂ ಆತ ಹಚ್ಚಿಕೊಂಡು ಕೊರಗುವ ಪೈಕಿಯೂ ಅಲ್ಲ. ಹೇಗೆ ರೇಖಾ ಕ್ಯಾಸಿನೋ ಜೂಜಾಟ, ಡ್ಯಾನ್ಸ್ ಪಾರ್ಟಿ ಎಂದು ಇತಿಮಿತಿಯಿಲ್ಲದೆ ಮೋಜು-ಮಸ್ತಿಯಲ್ಲಿ ಮೈಮರೆಯುತ್ತಿದ್ದಳೋ ಹಾಗೆಯೇ ಸಂತೋಷ್‌ಗೂ ಹೆಣ್ಣುಗಳ ಖಯಾಲಿ ಜೋರಾಗಿತ್ತು. ಯಾವ್ಯಾವುದೋ ಹೆಂಗಸರ ಸಂಘ-ಸಹವಾಸವಿತ್ತು. ಹೀಗಾಗಿ ಹೆಂಡತಿ ಹದ್ದು ಮೀರಿದ್ದಾಳೆಂದು ಆತ್ಮಹತ್ಯೆಗೆಲ್ಲ ಯೋಚಿಸುವ ಭಾವುಕನೇನೂ ಸಂತೋಷನಾಗಿರಲಿಲ್ಲ.

ಸಂತೋಷ್‌ನ ಹೆಣ ದಫನ್ ಮಾಡುವಾಗ ಆತನ ಪುಟ್ಟ ಮಕ್ಕಳು "ಪಪ್ಪನಿಗೆ ಆಕ್ಸಿಡೆಂಟ್ ಆಯ್ತಾ....?" ಎಂದು ಅಜ್ಜನಿಗೆ ಕೇಳಿದ್ದು ರೇಖಾ ಗಂಡನ ಆಪ್ತೋಷನ ಪಡೆದಳಾ? ಎಂಬ ಸಹಜ ಸಂಶಯ ಹುಟ್ಟು ಹಾಕಿಬಿಡುತ್ತದೆ. ಏಕೆಂದರೆ ಮನೆಯಲ್ಲಿ ತಂದೆ ರಿವಾಲ್ವರ್‌ನಿಂದ ಸುಟ್ಟುಕೊಂಡರೆ ಆ ಸದ್ದು ಮಕ್ಕಳಿಗೆ ಕೇಳಿಸದೇ ಇರುತ್ತದಾ. ಆನಂತರದ ಅಮ್ಮನ ಆಕ್ರಂದನ ಮಕ್ಕಳಿಗೆ ಕೇಳಿಸದಾ? ಅಂದರೆ ಸಂತೋಷ್‌ನ ಕೆನ್ನೆಯ ಮೇಲ್ಭಾಗದಿಂದ ತೂರಿಹೋದ ಬುಲೆಟ್ ದೂರದಿಂದಲೇ ಬಂದಿದೆ. ಅಷ್ಟೇ ಅಲ್ಲ, ಸಂತೋಷ್‌ನನ್ನು ಎಲ್ಲೋ ಕೊಂದು ಹೆಣ ತಂದು ಫ್ಲಾಟ್‌ನಲ್ಲಿ ಹಾಕಲಾಗಿರುವ ಸಾಧ್ಯತೆಯೂ ಹೆಚ್ಚು!

ಡಾ. ಫ್ರಾನ್ಸಿಸ್ ಅದೆಷ್ಟೋ ಕೊಲೆ-ಆತ್ಮಹತ್ಯೆಯ ದೇಹಗಳ ಮಹಜರು ಮಾಡಿದ ಅನುಭವಿ ಫೊರೆನ್ಸಿಕ್ ಡಾಕ್ಟರ್. ಜೀವನೋತ್ಸಾಹದ ಲಹರಿಯ ತಮ್ಮ ಸಂತೋಷ್ ಸೂಸೈಡ್ ಮಾಡಿಕೊಂಡಿಲ್ಲ ಎಂದು ಫ್ರಾನ್ಸಿಸ್‌ನ ವೃತ್ತಿ ಅನುಭವ, ತಮ್ಮನ ಜೀವನಶೈಲಿ ಸಾರಿ ಸಾರಿ ಹೇಳುತ್ತಿದ್ದವು. ಸಂತೋಷ್ ಗುಂಡು ಹಾರಿಸಿಕೊಂಡು ಸತ್ತಿದ್ದೇ ಹೌದಾದರೆ ಆತನ ಮುಷ್ಠಿ ಬಿಗಿಯಾಗಿರಬೇಕಿತ್ತು, ಅದರಲ್ಲಿ ರಿವಾಲ್ವರ್ ಇದ್ದಿರಲೇ ಬೇಕಿತ್ತು. ರಿವಾಲ್ವರ್ ನಳಿಕೆ ತಲೆಗೆ ಅಂಟಿಸಿಕೊಂಡು ಗುಂಡು ಹಾರಿಸಿದ್ದರೆ, ಮುಖವಿಡೀ ಪಿಸ್ತೂಲು ಉಗುಳಿದ ಬೆಂಕಿಗೆ ಸುಟ್ಟು ರಕ್ತ ಮೆತ್ತಿಕೊಳ್ಳಬೇಕಿತ್ತು. ಏನಿಲ್ಲದಿದ್ದರೂ ಆತನ ಸಾವಿಗೆ ಕಾರಣವೆಂದು ಹೇಳಲಾದ ಬುಲೆಟ್ ಮೆದುಳಿಂದ ಹೊರಬರುವಾಗ ಒಂದಿಷ್ಟು ರಕ್ತ-


ಮಾಂತೇರೋ


ಶೂಟೌಟ್ ಆದ ಸ್ಥಳ

ಮಾಂಸವನ್ನಾದರೂ ಅಂಟಿಸಿಕೊಂಡು ಬರಬೇಕಿತ್ತು.

ಇದ್ಯಾವುದೇ ಕುರುಹುಗಳು ಸಂತೋಷ್ ಶವದಲ್ಲಿ ಅಥವಾ ಸುತ್ತಮುತ್ತಲಲ್ಲಿ ಇರಲಿಲ್ಲ. ಶೂಟ್ ಮಾಡಿಕೊಂಡಾಗ, ರಕ್ತ ದೇಹದ ಮೇಲೆ ಬೀಳೋದು ಸರ್ವೇಸಾಮಾನ್ಯ. ಆದರೆ ರಕ್ತ ಸಂತೋಷ್‌ನ ಮೈಮೇಲಲ್ಲ, ಆತನ ಶವ ಬಿದ್ದಿದ್ದ ಜಾಗದಲ್ಲೂ ಬಿದ್ದಿರಲಿಲ್ಲ. ಆದರೆ ಬೇರ್‍ಯಾವುದೋ ರಕ್ತ ತಂದು ಹನಿ-ಹನಿಯಾಗಿ ರೂಮಿನಲ್ಲಿ ಸಿಂಚನ ಮಾಡಿದಂತೆ ಕಾಣಿಸುತ್ತಿತ್ತು. ಸಂತೋಷ್ ಸತತ ಮೂರು ತಾಸು ಕುಡಿದು ನಂತರ ನಿಶೆಯಲ್ಲಿ ಗುಂಡು ಹಾಕಿಕೊಂಡು ಸತ್ತಿದ್ದಾನೆಂದು ರೇಖಾ ಹೇಳಿದ್ದಾಳೆ. ಇದನ್ನು ಭಂಡ ಪೊಲೀಸರು ಹೌದೆಂದು ದೃಢೀಕರಿಸಿದ್ದಾರೆ. ಆದರೆ ಮಹಜರು ವರದಿಯಲ್ಲಿ ಸಂತೋಷನ ದೇಹದಲ್ಲಿ ಆಲ್ಕೋಹಾಲ್‌ನ ಹನಿಯೂ ಇರಲಿಲ್ಲ ಎಂದು ಸ್ಪಷ್ಟವಾಗಿ ಬರೆಯಲಾಗಿದೆ!

ರೇಖಾಳ ರಿವಾಲ್ವರ್ ಎಲ್ಲಿ?

ಆತ ಹೆಂಡ ಕುಡಿದು ಹತಾಶೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಬಿಂಬಿಸುವ ಸೀನ್ ಸೃಷ್ಟಿ ಮಾಡಲಾಗಿದೆ. ಡ್ರಾಯಿಂಗ್ ರೂಮಿನ ಸೋಫಾದ ಎದುರು ಟೀಪಾಯಿ ಇಟ್ಟು ಅದರ ಮೇಲೆ ಹೆಂಡದ ಬಾಟಲ್, ಹೆಂಡ ತುಂಬಿದ ಗ್ಲಾಸ್ ಒಪ್ಪವಾಗಿ ಜೋಡಿಸಲಾಗಿದೆ. ಅಲ್ಲೊಂದು ರಿವಾಲ್ವರ್ ಎಸೆಯಲಾಗಿತ್ತು. ಅಸಲಿಗೆ ಆ ರಿವಾಲ್ವರ್‌ನಿಂದ ಗುಂಡೇ ಹಾರಿಲ್ಲ! ಆ ಪಿಸ್ತೂಲಿನ ಮೇಲೆಲ್ಲೂ ಸಂತೋಷನ ಬೆರಳಚ್ಚುಗಳಿಲ್ಲ!! ತಲೆ ಕೂದಲು ಸುಟ್ಟ ಗುರುತುಗಳಿರಲಿಲ್ಲ. ರೇಖಾ ಮತ್ತು ಪೊಲೀಸರ ಪ್ರಕಾರ ರಾತ್ರಿ 9.30ಕ್ಕೆ 'ಆತ್ಮಹತ್ಯೆ' ಆಗಿದೆ. ಆದರೆ ಆ ನಂತರವೂ ಸಂತೋಷ್‌ನ ಮೊಬೈಲ್‌ನಿಂದ ಯಾರ್‍ಯಾರಿಗೋ ಮೆಸೇಜುಗಳು, ಫೋನ್‌ಕಾಲ್‌ಗಳು ಹೋಗಿವೆ. ಸಂತೋಷ್‌ನ ಶವ ನೋಡಿದರೆ ದೂರದಿಂದ ಗುಂಡು ಹಾರಿಸಿದಾಗ ಎಂತೆಂಥ ಸಾಕ್ಷ್ಯಗಳು, ಗುರುತುಗಳು ಉದ್ಭವವಾಗುತ್ತದೋ ಅದೆಲ್ಲವೂ ಇದೆ. ಹತ್ತಿರದಿಂದ ಆತ್ಮಹತ್ಯೆಗೆ ಗುಂಡು ಹಾರಿಸಿಕೊಂಡಂತೆ ಸಾಂದರ್ಭಿಕ ಸಾಕ್ಷ್ಯಗಳು ಕಾಣಿಸದು.

ಮಹತ್ವದ ಸಂಗತಿ ಎಂದರೆ, ರೇಖಾಳ ಬಳಿಯೂ ವಿದೇಶಿ ನಿರ್ಮಾಣದ ಸೊಫೆಸ್ಟಿಕೇಟೆಡ್ ರಿವಾಲ್ವರ್ ಇದೆ. ಈ ಬಗ್ಗೆ ಪೊಲೀಸರು ಒಂದೇ ಒಂದು ಪ್ರಶ್ನೆ ಆಕೆಗೆ ಕೇಳಿಲ್ಲ. ಶಿರಿಬೀಡು ಟವರ್‌ನ ಕಾವಲುಗಾರರನ್ನು ವಿಚಾರಣೆಗೆ ಒಳಪಡಿಸಿಲ್ಲ, ಅಪಾರ್ಟ್‌ಮೆಂಟ್‌ನ ಸಿಸಿ ಕ್ಯಾಮರಾದ ಪುಟೇಜ್ ಪರಿಶೀಲಿಸಿಲ್ಲ ಏಕೆ? ಸಂತೋಷನನ್ನು ಎಲ್ಲೋ ಕೊಂದು ಹೆಣ ತಂದು ಫ್ಲಾಟಲ್ಲಿ ಹಾಕಿದ ಸಾಕ್ಷ್ಯ ಸಿಗುತ್ತದೆಂದಾ?

ಇಂಥ ಹಲವಾರು ಸಾಂದರ್ಭಿಕ ಸಂಶಯಗಳನ್ನು ಕಲೆ ಹಾಕಿದ ಡಾ. ಫ್ರಾನ್ಸಿಸ್ ಜಾಣ ವಕೀಲ ರವಿಕಿರಣ್ ಮೂಲಕ ನ್ಯಾಯಾಲಯದ ಗಮನ ಸೆಳೆಯಲು ಸಫಲರಾಗಿದ್ದಾರೆ. ಈಗಿರುವ ಕುತೂಹಲ ಒಂದೇ. ಅದೆಂದರೆ, ಖುದ್ದು ರೇಖಾಳೆ ಗಂಡನ ಮೇಲೆ ಗುಂಡು ಹಾರಿಸಿ ಕಗ್ಗೊಲೆ ಮಾಡಿದಳಾ? ಅಥವಾ ಸುಪಾರಿ ಕೊಟ್ಟಿದ್ದಳಾ? ಸಂತೋಷ್‌ನನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆತನ ಗೆಳೆಯ ಬಜ್ಪೆಯ ಹರುಷ ಶೆಟ್ಟಿಯೇನಾದರೂ ರೇಖಾಳಿಗೆ ನೆರವಾಗಿದ್ದಾನಾ?


ಪರಿಣತ ಫೊರೆನ್ಸಿಕ್ ವೈದ್ಯ ಫ್ರಾನ್ಸಿಸ್ ಮೊಂತೇರೊ ಮತ್ತು ಪ್ರತಿಭಾನ್ವಿತ ಕ್ರಿಮಿನಲ್ ಲಾಯರ್ ರವಿಕಿರಣ್ ಮುರ್ಡೇಶ್ವರ್‌ರ ನ್ಯಾಯದ ಹೊಡೆತಕ್ಕೆ ಪಾಪಿಗಳು ತತ್ತರಿಸಿಹೋಗಿದ್ದಾರೆ. ಸರಿಯಾದ ದಾರಿಯಲ್ಲಿ ಮತ್ತೆ ತನಿಖೆ ನಡೆದರೆ ಬೆಕ್ಕಿನ ಕಣ್ಣಿನ ಬಿನ್ನಾಣಗಿತ್ತಿ ರೇಖಾ ಮತ್ತು ನೀಚ ಖಾಕಿಗಳಾದ ಎಎಸ್ಪಿ ಸಂತೋಷ್‌ಕುಮಾರ್, ನಿವೃತ್ತ ಡಿವೈಎಸ್ಪಿ ಪ್ರಭುದೇವ ಮಾನೆ ಮತ್ತು ಎಸ್‌ಐ ಲಿಂಗರಾಜು ಕಂಬಿ ಎಣಿಸೋದು ಖಾತ್ರಿ! ■

05⇦ ಲ್ಯಾನ್ಸರ್ ರಾಜೇಂದ್ರ

ಬಂದವರೆ ಈತನ ಕಂಪನಿ ಬಗ್ಗೆ ಮತ್ತಷ್ಟು ಪ್ರಚಾರ ಮಾಡಿದರು. ಆ ಚುನಾವಣೆಯಲ್ಲಿ ಲ್ಯಾನ್ಸರ್ ರಾಜೇಂದ್ರನಿಗೆ ಠೇವಣಿಯೂ ದಕ್ಕಲಿಲ್ಲ ಎನ್ನುವುದು ಬೇರೆ ಮಾತು, ಆದರೆ ಅದರಿಂದ ಅವನ ಹೂಡಿಕೆಯ ಗಾತ್ರ ಮತ್ತೊಮ್ಮೆ ಹಿಗ್ಗಲಾರಂಭಿಸಿತು.

ಆದರೆ ರಾಜೇಂದ್ರನ ಪಾಲಿಗೆ ಶನಿಯಂತೆ ಹೆಗಲೇರಿದ್ದು ಮೈಸೂರಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಭಿನವ್‌ಕರೆ. ಇವನ ವಂಚನೆಯಿಂದ ಬೇಸತ್ತ ರೀಟಾ ಎಂಬ ಮಹಿಳೆ ರೂರಲ್ ಸೌತ್ ಪೊಲೀಸ್ ಸ್ಟೇಷನ್‌ನಲ್ಲಿ ರಾಜೇಂದ್ರನ ವಿರುದ್ಧ ಮೋಸ, ವಂಚನೆ, ಸಿ.ಕೆ.ನಂ. 109/15 ಅಂಡರ್ ಸೆಕ್ಷನ್ 406, 420 ಕೇಸ್ ದಾಖಲಿಸಿದ್ದಳು. ಅಭಿನವ್‌ಕರೆ ಈತನನ್ನು ಕರೆಸಿ ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಸೂಚಿಸಿದ್ದರು. ಆದರೆ ತಾನೊಬ್ಬ ಪೊಲಿಟಿಕಲ್ ಆಸಾಮಿ ಎಂಬ ಹಮ್ಮು ಮೆತ್ತಿಸಿಕೊಂಡಿದ್ದ ರಾಜೇಂದ್ರ ಅಭಿನವ್ ಕರೆಯವರ ಮೇಲೆಯೇ ಏರಿಹೋದ. ತನ್ನ ಮೇಲೆ ಅಕ್ರಮವಾಗಿ ದಾಳಿ ಮಾಡಿ, ಹಲ್ಲೆ ನಡೆಸಿದ್ದಲ್ಲದೆ ತನ್ನ ಕೈ ಮುರಿದಿದ್ದಾರೆ ಅಂತ ಎಸ್ಪಿ ಅಭಿನವ್ ಕರೆಯವರ ಮೇಲೆಯೇ ದೂರು ಕೊಟ್ಟು ಟಿ.ವಿ.ಯಲ್ಲಿ ಸುದ್ದಿ ಬರುವಂತೆ ನೋಡಿಕೊಂಡ.


ತನ್ನ ಬಳಿ ಹಣ ವಾಪಾಸ್ ಕೇಳಲು ಬಂದವರಿಗೆ 'ಎಸ್.ಪಿ. ಮೇಲೆಯೇ ಕೇಸ್ ಹಾಕಿದ್ದೇನೆ ನೀವು ಯಾವ ಮಹಾ' ಅಂತ ಬೆದರಿಸಲಾರಂಭಿಸಿದ. ಅಭಿನವ್ ಕರೆ ಇವನ ಮೇಲೆ ಕಣ್ಣಿಟ್ಟಿದ್ದರಾದರು ಸೂಕ್ತ ಅವಕಾಶ ಅವರಿಗೆ ಸಿಕ್ಕಿರಲಿಲ್ಲ. ಯಾಕೆಂದರೆ ಇವನ ಬಳಿ ಹಣ ಹೂಡಿದವರಲ್ಲಿ ರಿಟೈರ್ಡ್ ಡಿ.ವೈ.ಎಸ್.ಪಿ. ನರಸಿಂಹಮೂರ್ತಿ ಸೇರಿದಂತೆ ಪ್ರಖ್ಯಾತ ಡಾಕ್ಟರ್ಸ್, ಲೆಕ್ಚರರ್ಸ್, ಇಂಜಿನಿಯರ್‌ಗಳಲ್ಲದೆ ಬ್ಲ್ಯಾಕ್‌ಮನಿ ವೀರರೂ ಇದ್ದರು. ಅಶೋಕ ರಸ್ತೆಯ ರಾಮ್ ಎಂಬ ಮಾರ್ವಾಡಿ 1 ಕೋಟಿ ಬ್ಲ್ಯಾಕ್ ಮನಿ ಇಟ್ಟು ಪೇಚಾಡುತ್ತಿದ್ದಾನೆ. ಅವರೆಲ್ಲಾ ಮರ್ಯಾದೆಗೆ ಅಂಜಿಯೋ, ತಮ್ಮ ಕಳ್ಳದಂಧೆಗೆ ಬೆದರಿಯೋ ದೂರು ನೀಡಲು ಮುಂದಾಗಲಿಲ್ಲ. ಇನ್ನು ಮಧ್ಯಮ ವರ್ಗದ ಕೆಲವರು ಹಣ ಕಳೆದುಕೊಂಡಿದ್ದರೂ ಇವನ ಪೊಲೀಸ್ ಮತ್ತು ಪೊಲಿಟಿಕಲ್ ದರ್ಪಕ್ಕೆ ಬೆದರಿ ಕಣ್ಣೀರು ಸುರಿಸುವುದು ಬಿಟ್ಟು ಬೇರೆ ಆಯ್ಕೆಗೇ ಮುಂದಾಗಲಿಲ್ಲ.


ಮೈಸೂರು ಮನೆ

ಆದರೆ ಡಿ.ಆರ್.ಲಕ್ಷ್ಮಿದೇವಿ ಎನ್ನುವವರು ದೇವರಾಜ ಪೊಲೀಸ್ ಠಾಣೆಯಲ್ಲಿ ಇವನ ವಿರುದ್ಧ ದೂರಿತ್ತರು. ಅಂದಹಾಗೆ, ಈ ಲಕ್ಷ್ಮಿದೇವಿಯುವರ ಗಂಡ ಕಾಂಗ್ರೆಸ್ ಮುಖಂಡ ಸುರೇಶ್ ಯಾದವ್, ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿಕಟವರ್ತಿ ಧ್ರುವಕುಮಾರ್‌ರ ಸಹೋದರ ನಗರಪಾಲಿಕೆ ಸದಸ್ಯ ನಾಗಭೂಷಣ್‌ರ ಗೆಳೆಯರಾಗಿದ್ದರು. ಸುರೇಶ್ ತೀರಿಕೊಂಡಾಗ ಬಂದಿದ್ದ 12 ಲಕ್ಷ ರೂಪಾಯಿ ಎಲ್‌ಐಸಿ ಹಣವನ್ನೆಲ್ಲಾ ಲಕ್ಷ್ಮಿದೇವಿ ಇದೇ ರಾಜೇಂದ್ರನ ಬ್ಲೇಡ್ ಕಂಪನಿಯಲ್ಲಿ ಹೂಡಿಕೆ ಮಾಡಿದ್ದರು. ಯಾವಾಗ ರಾಜೇಂದ್ರ ಕೈ ಎತ್ತುವ ಸೂಚನೆ ಕೊಟ್ಟನೋ ಆಗ ನಾಗಭೂಷಣ್ ಖುದ್ದು ನಿಂತು ಲಕ್ಷ್ಮಿದೇವಿಯ ಮೂಲಕ ದೂರು ದಾಖಲಾಗುವಂತೆ ನೋಡಿಕೊಂಡರು.

ಅಷ್ಟಲ್ಲದೇ ಲಕ್ಷ್ಮಿದೇವಿಯಂತೆಯೇ ರಾಜೇಂದ್ರನಿಂದ ವಂಚನೆಗೆ ಒಳಗಾದ ಒಂದಷ್ಟು ಮಹಿಳೆಯರನ್ನು ಕರೆದೊಯ್ದು ನಾಗಭೂಷಣ್ ಈತನ ಮನೆಯ ಮುಂದೆ ಧರಣಿ ಕೂತರು. ಆಗಲೂ ರಾಜೇಂದ್ರನ ನೆರವಿಗೆ ಬಂದದ್ದು ಅದೇ ವಿ.ವಿ.ಪುರಂ ಪೊಲೀಸ್ ಠಾಣೆಯ ಸಿಬ್ಬಂದಿ. ಸಿಎಂ ಸಿದ್ದು ಜೊತೆಗಿದ್ದ ತಮ್ಮ ಲಿಂಕ್ ಬಳಸಿಕೊಂಡ ನಾಗಭೂಷಣ್ ಈ ವಿಷಯ ಸಿದ್ದರಾಮಯ್ಯನವರಿಗೆ ತಲುಪಿಸಿದರು. ಕೂಡಲೇ ಖುದ್ದು ಮುತುವರ್ಜಿ ವಹಿಸಿದ ಸಿಎಂ ಪೊಲೀಸ್ ಕಮೀಷನರ್‌ಗೆ ತನಿಖೆ ನಡೆಸುವಂತೆ ಆದೇಶಿಸಿದರು. ಯಾವಾಗ ಸಿಎಂ ಸಿದ್ದು ಅವರೇ ರಾಜೇಂದ್ರನ ನಡ ಮುರಿಯಲು ಮುಂದಾಗಿದ್ದಾರೆ ಅಂತ ಗೊತ್ತಾಯಿತೊ ಆಗಲೇ ದೇವರಾಜ ಪೊಲೀಸ್ ಸ್ಟೇಷನ್‌ನಲ್ಲಿ ಇವನ ಮೇಲೆ ಬರೋಬ್ಬರಿ 26 ಕೇಸುಗಳು ಬಿದ್ದವು. ಪ್ರಕರಣವನ್ನು ಮೈಸೂರಿನ ಸಿ.ಸಿ.ಬಿಗೆ ವಹಿಸಲಾಯ್ತು. ಕೇಸು ಕೈಗೆತ್ತಿಕೊಂಡ ಸರ್ಕಲ್ ಇನ್ಸಪೆಕ್ಟರ್ ಜೆ.ಸಿ.ರಾಜು ಕಲಂ ನಂ 9 ಆಫ್ ಕರ್ನಾಟಕ ಪ್ರೊಟೆಕ್ಷನ್ ಆಫ್ ಇಂಟರೆಸ್ಟ್ ಆಫ್ ಡಿಪಾಜಿಟರ್ಸ್ ಅಂಡ್ ಇನ್ ಫೈನಾನ್ಸಿಯಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ 2004 ರಡಿಯಲ್ಲಿ ಪ್ರಕರಣ ದಾಖಲಿಸಿ, ಖತರ್ನಾಕ್ ರಾಜೇಂದ್ರ ಹಾಗೂ ಆತನ ಪತ್ನಿ ಅನಿತಾರನ್ನು ಜೈಲಿಗೆ ಅಟ್ಟಿದ್ದರು. ಸದ್ಯ ಅನಿತಾ ಜಾಮೀನು ಪಡೆದು ಹೊರಬಂದಿದ್ದಾಳೆ.

ಈತನ ಮೇಲೆ ದಾಖಲಾದ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ (ಚೆಕ್‌ಬೌನ್ಸ್) ಕೇಸ್‌ಗಳ ಒಟ್ಟು


ಲ್ಯಾನ್ಸರ್ ಕಾರ್ಪೋರೇಟ್ ಆಫೀಸ್

ಮೊತ್ತ 15 ಕೋಟಿಗೂ ಹೆಚ್ಚು. ನಂಜನಗೂಡಿನ ಬಳಿ ಇರುವ 15 ಎಕರೆಯಲ್ಲಿ ಈಗಾಗಲೇ ಪರಭಾರೆ ಮಾಡಿದ್ದು ಉಳಿದಿರುವುದು 1.5 ಎಕರೆ ಮಾತ್ರ. ಹೀಗಾಗಿ ಜನರಿಂದ ವಂಚಿಸಿದ ಹಣವೆಲ್ಲವನ್ನು ಬೇನಾಮಿಯಲ್ಲಿ ಕೂಡಿಟ್ಟಿರುವುದರಿಂದ, ಈತನ ಜಾತಕವನ್ನು ಜಾಲಾಡಿ ಕೋರ್ಟಿನ ಮುಂದಿರಿಸಿ ಠೇವಣಿದಾರರಿಗೆ ನ್ಯಾಯ ನೀಡಬೇಕಾದ್ದು ಮೈಸೂರಿನ ಸಿ.ಸಿ.ಬಿ.ಯ ಅಧಿಕಾರಿಗಳ ಪ್ರಮುಖ ಆದ್ಯತೆಯಾಗಿದೆ. ಅಲ್ಲದೇ, ಮುಖ್ಯಮಂತ್ರಿ ಸಿದ್ದರಾಮಯ್ಯರವರ ತವರೂರಿನಲ್ಲಿ ಈ ಹಗರಣ ನಡೆದಿರುವುದರಿಂದ ಕೇಸ್ ಹಳ್ಳ ಹಿಡಿಯದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಪೊಲೀಸ್ ಇಲಾಖೆಯ ಮೇಲಿದೆ.

■ ಮೋಹನ್

ಮಂಡ್ಯ: ಇನ್ಫಿ ಹುಡುಗನ 'ಹೌರಿ'ದಾಹಕ್ಕೆ ಮುದ್ದು ಹುಡುಗಿ ಬಲಿ

ಎಲ್ಲಾ ಸರಿ ಇದ್ದಿದ್ದರೆ ಮಾರ್ಚ್ 27ಕ್ಕೆ ಹಸೆಮಣೆ ಏರಬೇಕಿದ್ದ ಚೆಂದದ ಹೆಣ್ಣುಗಳು ಆಕೆ. ಆದರೆ ವರದಕ್ಷಿಣೆಯ ಕರಾಳಮುಷ್ಠಿಗೆ ಸಿಲುಕಿ ಮಣ್ಣಾಗಿ ಹೋಗಿದ್ದಾಳೆ. ಇನ್ನೇನಿದ್ದರೂ ಹೆತ್ತವರ ಪಾಲಿಗೆ ಆಕೆಯ ಕಣ್ಣೀರ ನೆನಪಷ್ಟೇ!

ಅವಳ ಹೆಸರು ಶೃತಿ. ಸುಂದರಿಯಷ್ಟೇ ಅಲ್ಲ, ಎಂ.ಟೆಕ್ ಮುಗಿಸಿ ಕೆ.ಆರ್.ಪೇಟೆಯ ಬಿಸಿಎಸ್‌ಐಟಿ ಇಂಜಿನಿಯರಿಂಗ್ ಕಾಲೇಜಲ್ಲಿ ಉಪನ್ಯಾಸಕಿಯೂ ಆಗಿದ್ದಳು. ಕೈತುಂಬಾ ಸಂಬಳ, ಇಡೀ ಜೀವನಕ್ಕೆ ಸಾಕಾಗುವಷ್ಟು ಪ್ರೀತಿ ಧಾರೆ ಎರೆಯುವ ಅಪ್ಪ-ಅಮ್ಮ, ಅಣ್ಣಂದಿರು. ಅಂತವಳ ಬಾಳಿಗೆ ಯಮಗಂಡ ಕಾಲದಲ್ಲಿ ಎಂಟ್ರಿ ಕೊಟ್ಟವನೇ ಕೆ.ಟಿ. ಹುತ್ತೇಶ ಅಲಿಯಾಸ್ ಇನ್ಫೋಸಿಸ್ ಹುತ್ತೇಶಾ.


ಕೆ.ಆರ್.ಪೇಟೆ ಪಟ್ಟಣದ ಬಸವೇಶ್ವರ ನಗರದಲ್ಲಿ ವಾಸವಿರುವ ವೆಂಕಟರಾಮೇಗೌಡರದು ಸಭ್ಯಸ್ಥ ಕುಟುಂಬ. ಮೂಲತಃ ಪಾಂಡವಪುರ ತಾಲೂಕಿನ ಮೇಲುಕೋಟೆ ಬಳಿಯ ಚೆಲ್ಲಾರಹಳ್ಳಿ ಕೊಪ್ಪಲಿನವರಾದ ವೆಂಕಟರಾಮೇಗೌಡರು ತಮ್ಮ ಗಂಡುಮಕ್ಕಳಾದ ವಿಜಯ್ ಮತ್ತು ಅಜಯ್‌ರ ಜೊತೆ ದುಬೈನಲ್ಲಿ ಕೆಲಸ ಮಾಡಿಕೊಂಡಿದ್ದಾರೆ.

ಇಲ್ಲಿರೋದು ಅವರ ಹೆಂಡತಿ ಲಕ್ಷ್ಮಿದೇವಿ ಮತ್ತು ಮಗಳು ಶೃತಿ ಮಾತ್ರ. ಇದ್ದ ಒಬ್ಬಳೇ ಮಗಳ ಮೇಲೆ ಅವರಿಗೆ ಎಲ್ಲಿಲ್ಲದ ಅಕ್ಕರೆ. ಅದಕ್ಕೋಸ್ಕರ ಅವಳು ಇಷ್ಟಪಟ್ಟಂತೆ ಚೆನ್ನಾಗಿಯೇ ಓದಿಸಿದ್ದರು. ಶೃತಿ ಕೂಡಾ ಓದಿನಲ್ಲಿ ಚುರುಕಿನ ಹುಡುಗಿ. ನಾಗಮಂಗಲ ತಾಲೂಕಿನ ಬೆಳ್ಳೂರು ಕ್ರಾಸ್‌ನಲ್ಲಿರುವ ಬಿಜಿಎಸ್‌ಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಮುಗಿಸಿದ ಶೃತಿ ನಂತರ ಮೈಸೂರು ಎಂಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಂ.ಟೆಕ್ ಕೂಡಾ ಮುಗಿಸಿಕೊಂಡಿದ್ದಳು. ಕೆಲಕಾಲ ಕೆ.ಆರ್.ಪೇಟೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದೂವರೆ ವರ್ಷ ಉಪನ್ಯಾಸಕಿಯಾಗಿ ಕೆಲಸ ಮಾಡಿದಳಾದರೂ ಕೊನೆಗೆ ತಾನೇ ಇಂಜಿನಿಯರಿಂಗ್ ಓದಿದ್ದ ಬೆಳ್ಳೂರಿನ ಬಿಜಿಟಿಎಸ್‌ಐಟಿ ಕಾಲೇಜಿನಲ್ಲಿ ಕಳೆದ 2 ವರ್ಷಗಳಿಂದ ಉಪನ್ಯಾಸಕಿಯಾಗಿ ಕೆಲಸ ಮಾಡಿಕೊಂಡಿದ್ದಳು. ತಿಂಗಳಿಗೆ 30,000 ಸಂಬಳ ಬರುತ್ತಿತ್ತು.

ಎಲ್ಲಾ ಹೆತ್ತವರಿಗೆ ಇರುವಂತೆ ವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡಬೇಕೆನ್ನುವ ಬಯಕೆ ಶೃತಿ ಹೆತ್ತವರಿಗೂ ಶುರುವಾಯಿತು. ಕೆಲ ಪರಿಚಯಸ್ಥರ ಕೈಗೆ ಶೃತಿಯ ಫೋಟೊ ಕೊಟ್ಟು ವರ ವಿಚಾರಿಸುವಂತೆ ಕೇಳಿಕೊಂಡಿದ್ದರು. ಅಂತದ್ದೇ ಒಂದು ಫೋಟೊ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಗಾಂಧಿನಗರದ ತಿಮ್ಮೇಗೌಡನೆಂಬ ಧನದಾಹಿ ಆಸಾಮಿಯ ಕೈಸೇರಿತ್ತು. ಈ ತಿಮ್ಮೇಗೌಡನಿಗೆ ಹುತ್ತೇಶ ಎಂಬ ಮಗನಿದ್ದ. ಆತ ಬೆಂಗಳೂರಿನ ಇನ್ಫೋಸಿಸ್‌ನಲ್ಲಿ ಉದ್ಯೋಗಸ್ಥ. ಶೃತಿಯ ತಂದೆ ಮತ್ತು ಅಣ್ಣಂದಿರ ದುಬೈ ವರಮಾನ, ಇಲ್ಲಿ ಶೃತಿ ದುಡಿಯುತ್ತಿದ್ದ ರೊಕ್ಕದ ಬಾಬ್ತನ್ನು ಸರಿಯಾಗಿ ವಿಚಾರಿಸಿಕೊಂಡ ಹುತ್ತೇಶ ತನ್ನ ತಂದೆ ತಿಮ್ಮೇಗೌಡ, ತಾಯಿ, ಅಣ್ಣ, ಅಕ್ಕಂದಿರ ಸಮೇತ ಶೃತಿ ಮನೆಗೆ ಹೆಣ್ಣು ನೋಡಲಿಕ್ಕೆಂದು ಬಂದಿದ್ದ.

ಹುಡುಗಿಗಿಂತ ಹೆಚ್ಚಾಗಿ ಆಕೆಯ ಮನೆಯವರ ಸಂಪಾದನೆಯೇ ಹುತ್ತೇಶನ ಮನೆಯವರಿಗೆ ಇಷ್ಟವಾಗಿ ಹೋಗಿತ್ತು, ಮುಲಾಜಿಲ್ಲದೆ ಲಗ್ನಕ್ಕೆ ಸಮ್ಮತಿ ಕೊಟ್ಟಿದ್ದರು. ಮದುವೆಯ ಬಗ್ಗೆ, ದಾಂಪತ್ಯ ಜೀವನದ ಬಗ್ಗೆ ಅಪಾರ ಕನಸು ಕಟ್ಟಿಕೊಂಡಿದ್ದ ಶೃತಿಗೂ ಸಾಫ್ಟ್‌ವೇರ್ ಹುಡುಗ ಹುತ್ತೇಶ ತುಂಬಾ ಇಷ್ಟವಾಗಿದ್ದ, ಹಾಗಾಗಿ 2015ರ ನವೆಂಬರ್ 6ರಂದು ಕೆ.ಆರ್.ಪೇಟೆಯ ನಂಜಮ್ಮ ಮುದ್ದೇಗೌಡ ಕಲ್ಯಾಣ ಮಂಟಪದಲ್ಲಿ ಶೃತಿ ಹಾಗೂ ಹುತ್ತೇಶ್ ನಿಶ್ಚಿತಾರ್ಥ ಅದ್ದೂರಿಯಾಗೇ ನಡೆದುಹೋಯ್ತು. ಇದ್ದ ಏಕೈಕ ಮಗಳು ಚೆನ್ನಾಗಿರಲೆಂಬ ಆಸೆಯಿಂದಲೇ ವೆಂಕಟರಾಮೇಗೌಡರು 150 ಗ್ರಾಂ ಚಿನ್ನವನ್ನು ಮಗಳ ಮೈಮೇಲೆ ಹಾಕಿ ನಿಶ್ಚಿತಾರ್ಥ ನೆರವೇರಿಸಿದ್ದರು. ಅಲ್ಲದೇ ಹುತ್ತೇಶನಿಗೆ ಒಳ್ಳೆಯ ವರದಕ್ಷಿಣೆ ಕೊಡುವ ಕುರಿತೂ ಮಾತುಕತೆಯಾಗಿತ್ತು, 2016ರ ಮಾರ್ಚ್ 27ರಂದು ಮದುವೆ ನಿಗದಿಯಾಗಿ ಕಲ್ಯಾಣ ಮಂಟಪವನ್ನು ಸಹ ಬುಕ್ ಮಾಡಲಾಗಿತ್ತು,

ಆದರೆ ಶೃತಿ ಮನೆಯವರಿಗೆ ಈ ಖುಷಿ ಬಹಳ ದಿನ ಉಳಿಯಲಿಲ್ಲ, ಯಾವಾಗ ಈ ಕುಟುಂಬಕ್ಕೆ ಹೆಣ್ಣುಮಗಳ ಮೇಲೆ ತುಂಬಾ ಪ್ರೀತಿ ಇದೆ ಅನ್ನೋದು ತಿಮ್ಮೇಗೌಡ ಮತ್ತವನ ಮಗ ಹುತ್ತೇಶನ ಧನದಾಹಿ ಕಣ್ಣುಗಳಿಗೆ ಗೊತ್ತಾಗಿ ಹೋಯ್ತೊ ಆಗಲೇ ಅವರು ಹೊಸ ವರಾತ ಶುರುವಿಟ್ಟುಕೊಂಡರು. ಮದುವೆ ದಿನಗಳು ಹತ್ತಿರವಾದಂತೆ ಕೆ.ಟಿ. ಹುತ್ತೇಶನ ಒಂದೊಂದೇ ನಿಜಬಣ್ಣ ಬಯಲಾಗತೊಡಗಿತು. ಶೃತಿಗಿಂತ ಆಕೆ ತರುವ ಚಿನ್ನಾಭರಣ ಹಾಗೂ ಹಣದ ಮೇಲೆ ಕಣ್ಣಿಟ್ಟಿದ್ದ ಹುತ್ತೇಶ್ ಹಾಗೂ ಆತನ ಕುಟುಂಬದವರು ಶೃತಿಗೆ ಫೋನ್ ಮಾಡಿ ನಮಗೆ ನೀವು ಕೊಟ್ಟ ವರದಕ್ಷಿಣೆ ಸಾಕಾಗಿಲ್ಲ, ಇನ್ನು ಹೆಚ್ಚಿನ ವರದಕ್ಷಿಣೆ ಬೇಕೆಂದು ಡಿಮ್ಯಾಂಡ್ ಮಾಡಲು ಶುರು ಮಾಡಿದ್ದರು.



ಧನದಾಹಿ ಹೆತ್ತವರೊಂದಿಗೆ ಹುತ್ತೇಶ್

ದಡಿಯಾ ಹುತ್ತೇಶ್ ಕೂಡ ಶೃತಿಗೆ ಫೋನ್ ಮಾಡಿದಾಗಲೆಲ್ಲ "ನೀನು ಇನ್ನಷ್ಟು ಮಾಡ್ರನ್ ಆಗಬೇಕು. ನಿಮ್ಮ ತಂದೆ ಹಾಗೂ ಅಣ್ಣಂದಿರು ದುಬೈನಲ್ಲಿ ಇರುವುದರಿಂದ ನನಗೆ ನಿನ್ನನ್ನು ಸುಖವಾಗಿಡಬೇಕೆಂದರೆ ಈಗ ನೀಡಿರುವ ವರದಕ್ಷಿಣೆ ಜೊತೆಗೆ ಒಂದು ಕಾರು, ಬೆಂಗಳೂರಿನಲ್ಲಿ ಮನೆ ಅಥವಾ ಸೈಟು ಹಾಗೂ 5 ಲಕ್ಷ ಹಣ ನೀಡಬೇಕು" ಅಂತೆಲ್ಲಾ ಟಾರ್ಚರ್ ಶುರು ಮಾಡಿಕೊಂಡ. ಆರಂಭದಲ್ಲಿ ಮೆತ್ತಗಿದ್ದ ಅವನ ಬೇಡಿಕೆ ದಿನಕಳೆದಂತೆ ಬ್ಲ್ಯಾಕ್‌ಮೇಲ್ ರೂಪಕ್ಕೆ ತಿರುಗಿತು. ತಮ್ಮೆಲ್ಲಾ ಡಿಮ್ಯಾಂಡ್ ಪೂರ್ಣಗೊಳಿಸದಿದ್ದರೆ ಮದುವೆ ಮುರಿಯುತ್ತೇನೆಂದು ಬೆದರಿಕೆ ಹಾಕಲು ಆರಂಭಿಸಿದ. ಹುತ್ತೇಶನ ತಂದೆ-ತಾಯಿ ಹಾಗೂ ಅಕ್ಕಂದಿರು ಕೂಡ ಯೋಗಕ್ಷೇಮ ವಿಚಾರಿಸುವಂತೆ ಶೃತಿಗೆ ಫೋನಾಯಿಸಿ ಹೆಚ್ಚಿನ ವರದಕ್ಷಿಣೆ ತರುವಂತೆ ಒತ್ತಡ ಹಾಕುತ್ತಿದ್ದರು. ಗಂಡಿನ ಮನೆಯವರ ಈ ಬೇಡಿಕೆಯನ್ನು ಶೃತಿ ತನ್ನ ತಂದೆ ಹಾಗೂ ಅಣ್ಣಂದಿರ ಮುಂದಿರಿಸಿದ್ದಳು. ಮದುವೆಗೆ ಮುನ್ನವೇ ಇವರ ದುರಾಸೆಯನ್ನು ಕಂಡು ಎಚ್ಚೆತ್ತುಕೊಳ್ಳಬೇಕಿದ್ದ ವೆಂಕಟರಾಮೇಗೌಡ ಕೂಡಾ ಎಲ್ಲಿ ಮದುವೆ ಮುರಿದುಬಿದ್ದು ಮಗಳ ಬದುಕು ಅತಂತ್ರವಾಗಿ ಬಿಡುತ್ತೋ ಅಂತ ಕೆಲ ಹಿರಿಯರ ಸಮ್ಮುಖದಲ್ಲಿ ರಾಜಿ ಪಂಚಾಯ್ತಿ ಮಾಡಿಸಿದ್ದರು.


"ವರದಕ್ಷಿಣೆ ಆಸೆಗಾಗಿ ಮದುವೆ ಮುರಿಯಬೇಡಿ. ನಿಶ್ಚಿತಾರ್ಥವಾದ ನಂತರ ಕಾರು, ಮನೆ, 5 ಲಕ್ಷ ಹಣ ಕೇಳುವುದು ಸರಿಯಲ್ಲ, ಮದುವೆ ನಿಂತರೆ ಹುಡುಗಿಯ ಭವಿಷ್ಯ ಹಾಳಾಗುತ್ತದೆ. ಮಾನವೀಯತೆಯಿಂದ ನಡೆದುಕೊಳ್ಳಿ" ಅಂತ ಅವರೆಲ್ಲ ಪರಿಪರಿಯಾಗಿ ಕೇಳಿಕೊಂಡರೂ ಧನಪಿಶಾಚಿ ಹುತ್ತೇಶ್ ಮತ್ತವನ ತಂದೆ-ತಾಯಿ, ಅಣ್ಣ, ಅಕ್ಕಂದಿರು ಸುತರಾಂ ಒಪ್ಪದೆ "ಆಕೆ ಸತ್ತರೆ ಸಾಯಲಿ, ನಮಗೇನು ನಷ್ಟವಿಲ್ಲ" ಅಂತ ಕಡ್ಡಿ ತುಂಡರಿಸಿದಂತೆ ಎದ್ದು ನಡೆದಿದ್ದರು.

ಅಸಲಿಗೆ ಮದುವೆಯೇನೂ ಮುಗಿದಿರಲಿಲ್ಲ, ಮದುವೆಗೆ ಮೊದಲೇ ಇವರ ಭಂಡಾಟ ಗೊತ್ತಾಯಿತಲ್ಲ ಅಂತ ನಿಟ್ಟುಸಿರು ಬಿಡಬಹುದಿತ್ತು. ಆದರೆ ಸೂಕ್ಷ್ಮ ಮನಸ್ಸಿನ ಶೃತಿ ಇದನ್ನು ಬಲವಾಗಿ ಹಚ್ಚಿಕೊಂಡು ಕೊರಗಲಾರಂಭಿಸಿದಳು. ತೀರಾ ಮನನೊಂದ ಆಕೆ ಮಾರ್ಚ್ 17ರಂದು ವಿಷ ಕುಡಿದುಬಿಟ್ಟಳು. ಪ್ರಜ್ಞಾಶೂನ್ಯಳಾಗಿದ್ದ ಶೃತಿಯನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಸೇರಿಸಿದರಾದರು ಮಾರ್ಚ್ 21ರಂದು ಇಹಲೋಕವನ್ನೇ ತ್ಯಜಿಸಿ ನಡೆದಳು. ಮದುವೆ-ಸಂಸಾರದ ಬಗ್ಗೆ ಸಾವಿರಾರು ಕನಸು ಕಟ್ಟಿಕೊಂಡಿದ್ದ ಶೃತಿಯ ಬಾಳು ಸರ್ವನಾಶ ಮಾಡಿದ ಹುತ್ತೇಶ ಹಾಗೂ ಅವನ ಧನದಾಹಿ ಕುಟುಂಬದ ವಿರುದ್ಧ ಕೆ.ಆರ್.ಪೇಟೆ ಪೊಲೀಸರು ಬಂಧಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳುವಂತಹ ಎಫ್‌ಐಆರ್ ಹಾಕಬೇಕಿದೆ. ಒಂದೊಮ್ಮೆ ಪೊಲೀಸರು ಇವರನ್ನು ಬಂಧಿಸಿದರೂ ಜಾಮೀನು ಪಡೆದು ಹೊರಬರುವುದು ಇಂತಹ ಪಾಪಿಗಳ ಪಾಲಿಗೆ ಕಷ್ಟವೇನೂ ಅಲ್ಲ. ಯಾತಕ್ಕೂ ಹೆಣ್ಣೆತ್ತ ಪೋಷಕರು ಇಂತಹ ಧನಪಿಶಾಚಿಗಳ ಬಗ್ಗೆ ಸ್ವಲ್ಪ ಎಚ್ಚರದಿಂದ ಇದ್ದರೆ ಒಳಿತು.

■ ವರದಿಗಾರ

ಮುಗ್ಧೆಯ ಡೆತ್‌ನೋಟ್‌ನಲ್ಲಿ...

ಧನ ಪಿಶಾಚಿ ಕೆ.ಟಿ.ಹುತ್ತೇಶ್ ಹಾಗೂ ಆತನ ತಂದೆ-ತಾಯಿಯ ಧನದಾಹಕ್ಕೆ ಇನ್ನೊಂದು ವಾರಕ್ಕೆ ಹಸಮಣೆ ಏರಬೇಕಿದ್ದ ಮುಗ್ಧ ಹೆಣ್ಣು ಮಗಳು ಶೃತಿ ಬಲಿಯಾಗಿದ್ದು ದುರ್ದೈವದ ವಿಷಯ. ವಿಷ ಸೇವಿಸುವ ಮುನ್ನ ಆಕೆ ಬರೆದಿದ್ದ 12 ಪುಟಗಳ ಪತ್ರ ನೋಡಿದರೆ ಆಕೆ ಎಂತಹ ಅಮಾಯಕಿ, ಮುಗ್ಧೆ ಎಂಬುವುದು ತಿಳಿಯುತ್ತದೆ. "ದೇವರೇ... ಒಬ್ಬರ ಜೊತೆ ನಿಶ್ಚಿತಾರ್ಥ ಮಾಡಿಕೊಂಡು ಇನ್ನೊಬ್ಬರ ಜೊತೆ ಮದುವೆಯಾಗಲು ನನಗೆ ಸಾಧ್ಯವಿಲ್ಲ. ಜೀವನದಲ್ಲಿ ಏನೂ ಬಯಸದ ನನಗೆ ಎಲ್ಲವನ್ನೂ ಕೊಟ್ಟೆ. ಆದರೆ ಯಾವುದರಲ್ಲೂ ತೃಪ್ತಿಯಿಲ್ಲದಂಗೆ ಮಾಡ್ತಿದಿಯಾ? ಏಕೆ ದೇವರೇ... ನನ್ನ ಗೊಂಬೆ ತರಹ ಆಡುಸ್ತಿದಿಯಾ? ಯಾವಾಗಲೋ ಈ ಅತೃಪ್ತಿ ಜೀವನದಿಂದ ನನಗೆ ಮುಕ್ತಿ? ನಾನು ಅವರಿಗೆ ಬೇಡ ಸರಿ. but ನನಗೆ ಇನ್ಯಾರು ಬೇಡ. ಅವರಂತೆ ನಾನು ಬದುಕಲು ಆಗುತ್ತಾ...?, ನನ್ನಂಥ ನತದೃಷ್ಟ ಬದುಕನ್ನು ಯಾರಿಗೂ ಕೊಡ್ಬೇಡ. ನನ್ನಿಂದ ಎಲ್ಲರಿಗೂ ನೋವು, ಎಲ್ಲರಿಗೂ ನಿರಾಸೆ, ಈ ಜನ್ಮ ಏತಕ್ಕೆ ಬೇಕಾಗಿತ್ತು, ಇದರ ಅವಶ್ಯಕತೆ ಇದೆಯೇ? ನಾನು ಏನ್ ಮಾಡ್ದೆ ಅಂತ ನನಗೆ ಶಿಕ್ಷೆ? ಎಲ್ಲರ ಹಾಗೆ ನಾನು ಅಲ್ವಾ. ಇವನೇ ನಿನ್ನ ಮದುವೆಯಾಗೋನು ಅನ್ನುವಾಗ ನೂರಾರು ಕನಸು ಚಿಗುರುತ್ತೆ ನಿಶ್ಚಿತಾರ್ಥ ಆದ ನಂತರ ಅವರ ಮೇಲೆ ಬೆಳೆಸಿಕೊಂಡಿರೋ ಭಾವನೆಗಳನ್ನು ನಾನು ಹೇಗೆ ಅಳಿಸಿ ಹಾಕಲಿ. ಎಲ್ಲರ ಮುಂದೆ ಆದ ಈ ನಿಶ್ಚಿತಾರ್ಥಕ್ಕೆ ಬೆಲೆ ಇಲ್ವಾ...? ನನಗೆ ಅವರು ಬೇಕು. ಆ ಜಾಗ ನಾನು ಯಾರಿಗೂ ಕೊಡಕ್ಕಾಗಲ್ಲ... ಪ್ಲೀಸ್ ದೇವರೇ ಅವರಿಗೆ ಒಳ್ಳೆಯ ಬುದ್ಧಿ ಕೊಟ್ಟು ಬದಲಾಗುವಂತೆ 'ಮಾಡು ಪ್ಲೀಸ್... ಪ್ಲೀಸ್..." ಹೀಗೆ ಸಾಗುತ್ತಾ ಹೋಗುತ್ತದೆ ಶೃತಿ ಬರೆದಿಟ್ಟ ಡೆತ್ ನೋಟ್.



ನಮ್ಮ ದೇಶಭಕ್ತರ ಅಸಲಿ ಮುಖ

ಘಜನಿ ಮೊಹಮ್ಮದನು ಹದಿನೇಳು ಬಾರಿ (1000–1027) ಹಿಂದೂಸ್ಥಾನದ ಮೇಲೆ ಆಕ್ರಮಣ ಮಾಡುತ್ತಾನೆ, ಸೋಮನಾಥ ದೇವಸ್ಥಾನವನ್ನು ಲೂಟಿ ಮಾಡುತ್ತಾನೆ. ನಾವು ಹೆದರಿ ಓಡುತ್ತೇವೆ, ಹೆದರದವರನ್ನು ಕೊಲ್ಲುತ್ತಾನೆ. ಮೊಘಲ್ ದೊರೆ ಬಾಬರ್ (1526–1530) ಹಿಂದೂಸ್ಥಾನದ ಮೇಲೆ ದಂಡೆತ್ತಿ ಬರುತ್ತಾನೆ, ಅಯೋಧ್ಯದಲ್ಲಿರುವ ನಮ್ಮ ಪವಿತ್ರ ರಾಮಮಂದಿರವನ್ನು ಧ್ವಂಸ ಮಾಡುತ್ತಾನೆ. ಅಲ್ಲಿ ಬಾಬರಿ ಮಸೀದಿ ಕಟ್ಟುತ್ತಾನೆ (1528). ನಾವು ಹೆದರಿ ಓಡುತ್ತೇವೆ, ಹೆದರದವರನ್ನು ಕೊಲ್ಲುತ್ತಾನೆ. ಅದೇ ಸಮಯದಲ್ಲಿ ಹಿಂದೂಸ್ಥಾನಕ್ಕೆ ಹಿಂದೂ ಸಂಸ್ಕೃತಿಗೆ, ಹಿಂದೂ ಧರ್ಮಕ್ಕೆ ಇತಿಹಾಸದಲ್ಲಿ ಎಂದೂ ಅಪಚಾರ ಮಾಡದ, ವಿದೇಶಿಯರ ಧಾರ್ಮಿಕ ದಬ್ಬಾಳಿಕೆಯ ನಡುವೆಯೂ ತಮ್ಮ ಮೂಲ ಸಂಸ್ಕೃತಿ, ಮೂಲ ಧರ್ಮ ಉಳಿಸಿಕೊಂಡಿರುವ ನಮ್ಮದೇ ದೇಶದ, ನಮ್ಮದೇ ಧರ್ಮದ ಜನರು ದೇವರ ದರ್ಶನಕ್ಕೆ ಬಂದರೆ ಹೆದರಿಸಿ ಓಡಿಸುತ್ತೇವೆ, ಹೆದರದವರನ್ನು ಕೊಲ್ಲುತ್ತೇವೆ! ರಾಮಮಂದಿರ ನಾಶವಾಗಿ ಬರೋಬ್ಬರಿ 464 ವರ್ಷಗಳ ಬಳಿಕ (1992) ಬಾಬರಿ ಮಸೀದಿ ಕೆಡವಿ ವಿಜಯೋತ್ಸವ ಆಚರಿಸುತ್ತೇವೆ!

ರೆಜಿನಾಲ್ಡ್ ಎಡ್ವರ್ಡ್ ಹ್ಯಾರಿ ಡಾಯರ್, 1919ರ ಏಪ್ರಿಲ್ 13 ರಂದು ಪಂಜಾಬಿನ ಜಲಿಯನ್‌ವಾಲಾ ಭಾಗ್‌ನಲ್ಲಿ ಶಾಂತಿಯುತವಾಗಿ ಸಭೆ ನಡೆಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ನಿರ್ದಯವಾಗಿ ಗುಂಡು ಹಾರಿಸಿ ಸಾವಿರದ ಐನೂರಕ್ಕೂ ಅಧಿಕ ಜನರನ್ನು ಕೊಲ್ಲುತ್ತಾನೆ. 1927ರ ಮಾರ್ಚ್ 20 ರಂದು ಮಹಾರಾಷ್ಟ್ರದ ಮಹಡ್ ನಲ್ಲಿ ನೀರಿಗಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಶಾಂತಿಯುತ ಚಳವಳಿ ಮಾಡುತ್ತಾರೆ. ಪ್ರಕೃತಿದತ್ತವಾದ ಕೆರೆಯ ನೀರನ್ನು ಜಾತಿಯ ಕಾರಣಕ್ಕಾಗಿ ಕೆಲಜಾತಿಗಳಿಗೆ ನಿರಾಕರಿಸಲಾಗಿತ್ತು, ಇದರ ವಿರುದ್ಧ ಅಂಬೇಡ್ಕರ್ ಅವರು ಸಾವಿರಾರು ಜನರೊಂದಿಗೆ ತೆರಳಿ ಚೌಡರ್ ಕೆರೆಯ ನೀರನ್ನು ಕುಡಿಯುತ್ತಾರೆ. ಇದರಿಂದ ರೊಚ್ಚಿಗೆದ್ದ ಸವರ್ಣೀಯ ಹಿಂದೂಗಳು, ಅಂಬೇಡ್ಕರ್ ಅನುಯಾಯಿಗಳ ಮೇಲೆ ಅಮಾನವೀಯವಾಗಿ ಹಲ್ಲೆ ಮಾಡುತ್ತಾರೆ! ಕೊಲ್ಲುತ್ತಾರೆ!

ನಾವು ಸಾವಿರಾರು ವರ್ಷ ವಿದೇಶಿ ಮುಸ್ಲಿಂ, ಕ್ರೈಸ್ತರ ಕೈಕೆಳಗೆ ಜೀತ ಜೀವನ ನಡೆಸಿದ್ದೇವೆ. ನಮ್ಮ ನಾಡಿನ ಸಂಪತ್ತನ್ನು ಪೋರ್ಚುಗೀಸರು, ತುರ್ಕರು, ಮೊಘಲರು, ಫ್ರೆಂಚರು, ಬ್ರಿಟಿಷರು, ಡಚ್ಚರು, ಕ್ರಿಮಿಕೀಟಗಳು, ನಾಯಿನರಿಗಳು ಲೂಟಿಮಾಡುವಾಗ, ನಮ್ಮ ನೆಲಕ್ಕಾಗಿ ಇವರುಗಳು ಕಿತ್ತಾಡುವಾಗ ನಾವು ಅಸಹಾಯಕರಾಗುತ್ತೇವೆ. ವಿದೇಶಿಯರು ಹೊಸ ಹೊಸ ಸಂಶೋಧನೆ ಮಾಡುತ್ತಿರುವಾಗ ವಿದ್ಯುತ್, ದೂರವಾಣಿ, ದೂರದರ್ಶನ, ಮೊಬೈಲ್, ಮೋಟಾರು ವಾಹನ, ವಿಮಾನ ಮುಂತಾದ ಆಧುನಿಕ ಬದುಕಿಗೆ ಬೇಕಾದುದನ್ನು ಜಗತ್ತಿಗೆ ನೀಡುತ್ತಿರುವಾಗ ನಾವು ಏನನ್ನೂ ನೀಡಲಾರದೆ ಕೀಳರಿಮೆಯಿಂದ ನರಳುತ್ತೇವೆ. ಆದರೆ ನಮ್ಮದೇ ದೇಶದ, ನಮ್ಮದೇ ಧರ್ಮದ, ಅವಕಾಶವಂಚಿತ, ವಿದ್ಯಾಭ್ಯಾಸ ವಂಚಿತರ ಮುಂದೆ ನಾವು ಮೇಲರಿಮೆಯಿಂದ ಮೆರೆಯುತ್ತೇವೆ!

ದೇಶ ವಿಭಜನೆಗೆ ಗಾಂಧೀಜಿ ಒಬ್ಬರೇ ಕಾರಣರಲ್ಲ, ಪಾಕಿಸ್ತಾನದ ಕೆಲವು ನಾಯಕರೂ ದೇಶ ವಿಭಜನೆಗೆ ಕಾರಣಕರ್ತರು. ಆದರೆ ನಾವು ನಮ್ಮದೇ ದೇಶದ, ನಮ್ಮದೇ ಧರ್ಮದ ಅಹಿಂಸವಾದಿ, ಸಂತ, ಮುದುಕ ಮಹಾತ್ಮ ಗಾಂಧೀಜಿ ಅವರನ್ನು ಕೊಂದು ದೇಶಪ್ರೇಮ ಮೆರೆಯುತ್ತೇವೆ!


ನಮ್ಮ ನೆರೆಯ ದೇಶದ ಒಂದಿಬ್ಬರು, ತಮ್ಮ ವೈರಿ ರಾಷ್ಟ್ರವಾದ ನಮ್ಮ ದೇಶದೊಳಗೆ ಶಸ್ತ್ರಸಜ್ಜಿತರಾಗಿ ನುಗ್ಗಿ ಇಡೀ ದೇಶವನ್ನೇ ಭಯಭೀತಗೊಳಿಸುತ್ತಾರೆ. ಅವರು ಅವರ ದೇಶಕ್ಕಾಗಿ ಇಲ್ಲಿ ಸಾಯುತ್ತಾರೆ, ನಾವು ನಮ್ಮ ನಾಡಿನಲ್ಲೇ ನಮ್ಮ ಸೈನಿಕರನ್ನು ಬಲಿಕೊಟ್ಟು ಹುತಾತ್ಮರೆನ್ನುತ್ತೇವೆ! ಪಾಕಿಸ್ತಾನದೊಂದಿಗೆ ರಾಜತಾಂತ್ರಿಕ ಸಂಬಂಧ ಇಟ್ಟುಕೊಂಡು, ವ್ಯಾಪಾರ ವ್ಯವಹಾರ ಮಾಡಿಕೊಂಡಿರುವಾಗ ಅಲ್ಲಿಯ ಕ್ರಿಕೆಟ್ ತಂಡ ಇಲ್ಲಿ ಆಡುವುದನ್ನು ವಿರೋಧಿಸುತ್ತೇವೆ. ಕೋಪದಲ್ಲಿ ನಮ್ಮ ಮೈ ನಾವೇ ಪರಚಿಕೊಂಡಂತೆ ನಮ್ಮ ನೆಲವನ್ನು ನಾವೇ ಅಗೆಯುತ್ತೇವೆಂದು ಹೆದರಿಸಿ ಶೂರರೆನಿಸುತ್ತೇವೆ! ಪುಟ್ಟ ದೇಶ ಪಾಕಿಸ್ತಾನದಲ್ಲಿರುವ ಉಗ್ರರ ನೆಲೆಗಳ ಮೇಲೆ 'ಭರತ್ ಮಾತಾಕಿ ಜೈ' ಎಂದು ದಾಳಿ ಮಾಡಲಾಗದ ನಾವು, ಭಾರತದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದವರ ಮೇಲೆ ದಾಳಿ ಮಾಡಿ ವೀರರಾಗುತ್ತೇವೆ.

ಅಫ್ಜಲ್ ಗುರುವನ್ನು ನಮ್ಮ ನ್ಯಾಯಾಲಯದ ಮುಂದೆ ತಂದಾಗ ಏನೂ ಮಾಡದ ನಾವು, ನಮ್ಮದೇ ದೇಶದ, ನಮ್ಮವನೆ ಆದ ಕನ್ಹಯ್ಯ ಕುಮಾರನನ್ನು ನ್ಯಾಯಾಲಯಕ್ಕೆ ಕರೆತಂದಾಗ ಪೊಲೀಸರ ಸಹಕಾರದಿಂದ ಹೊಡೆದು ದೇಶಪ್ರೇಮಿಗಳೆನ್ನುತ್ತೇವೆ! ಕೊರಳಿಗೆ ಹೂಮಾಲೆ ಹಾಕಿ ಕೊಂದು ಮೆರೆಯುತ್ತೇವೆ! ಈ ದೇಶದ ಮೂಲನಿವಾಸಿಗಳೂ, ಬಹುಸಂಖ್ಯಾತರೂ ಆದ ನಮ್ಮದೇ ಧರ್ಮಿಯರನ್ನು ಹುಟ್ಟಿ ಸಾಯುವತನಕ ಪ್ರತ್ಯೇಕವಾಗಿ ಕಾಣುವ ಪ್ರತೀ ಹಂತದಲ್ಲೂ ಪ್ರತ್ಯೇಕತಾವಾದ ಅನುಕರಿಸುವ ನಾವು ಕಾಶ್ಮೀರ ಸಮಸ್ಯೆಯನ್ನು ಮಾತ್ರ ಪ್ರತ್ಯೇಕತಾವಾದ ಅನ್ನುತ್ತೇವೆ.

ನಮ್ಮ ಮಾತುಗಳಿಗೂ ನಡವಳಿಕೆಗಳಿಗೂ ಒಂದಕ್ಕೊಂದು ಸಂಬಂಧವಿಲ್ಲ ಅನಿಸುತ್ತದೆ. ನಾವಿಂದು ಧರ್ಮ ರಕ್ಷಣೆ, ದೇಶ ರಕ್ಷಣೆ ಎಂದು ನಡೆಸುವ ಹೋರಾಟ ಅದಕ್ಕೆ ಪೂರಕವಾಗಿರದೆ ಮಾರಕವಾಗುಬಹುದೆಂಬಹ ಸಂದೇಹ ಕಾಡುತ್ತಿದೆ. ಧರ್ಮ ರಕ್ಷಣೆ, ನಾಡು ವಿಸ್ತರಣೆಗೆ ಹೊರಟ ತಾಲಿಬಾನ್, ಐಸಿಸ್, ಅಲ್ ಖೈದಾ, ಬೊಕೊ ಹರಾಮ್‌ಗಳು ಮುಸ್ಲಿಮರಾಗಿರಬಹುದು. ಆದರೆ ಅವರು ಈ ಜಗತ್ತಿನಲ್ಲಿ ಕೊಂದದ್ದು ಮುಸ್ಲಿಮರನ್ನೆ ಹೆಚ್ಚು! ಭಾರತದಲ್ಲೂ ಹಿಂದೂಗಳು ಜಾತಿಯ ಕಾರಣಕ್ಕಾಗಿ ಹಿಂದೂಗಳನ್ನೆ ಕೊಂದದ್ದು ಹೆಚ್ಚು! ಧರ್ಮೋ ರಕ್ಷತಿ ರಕ್ಷಿತಃ.

-ಟಿ.ಕೆ. ಸುರೇಶ್, ಬ್ರಹ್ಮಾವರ

ಮಾಜಿ ಐಎಎಸ್ ಅಧಿಕಾರಿಯ ಭ್ರಷ್ಟ ಮುಖ



ನಿವೃತ್ತ ಐಎಎಸ್ ಅಧಿಕಾರಿ ಬಿ.ಎಲ್. ಶ್ರೀಧರ್

ಆತ ನಿವೃತ್ತ ಐಎಎಸ್ ಅಧಿಕಾರಿ. ಸರ್ಕಾರಿ ಹುದ್ದೆಗೆ ಸೇರಿ ಇಪ್ಪತ್ತು ವರ್ಷವೇ ಗತಿಸಿಹೋಗಿದ್ದರೂ 1997ಕ್ಕೂ ಮುನ್ನ ಅವನಿಗೆ ಆಸ್ತಿ ಅಂತ ಇದ್ದದ್ದು ಸರ್ಕಾರಿ ವಸತಿ ಗೃಹ ಮತ್ತು ಒಂದೆರಡು ಬೆತ್ತದ ಚೇರುಗಳು ಮಾತ್ರ. ಶಾಲೆಗೆ ಹೋಗುತ್ತಿದ್ದ ಮಗನಿಗೆ ಸರಿಯಾದ ಒಂದು ಜೋಡಿ ಶೂಗಳಿಗೂ ಗತಿ ಇರಲಿಲ್ಲ. ಅಷ್ಟರಮಟ್ಟಿಗೆ ತನ್ನ ಪ್ರಾಮಾಣಿಕತೆಯನ್ನು ಕಾಯ್ದುಕೊಂಡಿದ್ದ. ಆದರೆ ಅದೇನಾಯಿತೊ, ಏನೊ 1997ರ ನಂತರ ಅವನ ಪ್ರಾಮಾಣಿಕತೆ ಅಟ್ಟ ಸೇರಿ ಭ್ರಷ್ಟಾಚಾರವನ್ನೇ ತನ್ನ ಉಸಿರಾಗಿಸಿಕೊಂಡ; ನೋಡನೋಡುತ್ತಿದ್ದಂತೆಯೇ ನೂರಾರು ಕೋಟಿಗೆ ಯಜಮಾನನಾದ; ಮಕ್ಕಳಿಬ್ಬರನ್ನೂ ಅಮೆರಿಕಗೆ ಕಳಿಸಿ, ಅಲ್ಲೇ ಓದಿಸಿ ಸೆಟ್ಲ್ ಮಾಡಿದ; ಬೆಂಗಳೂರಿನ ಉತ್ತರಹಳ್ಳಿಯಲ್ಲಿ ಪಂಚತಾರಾ ಹೊಟೇಲ್‌ಗಳೇ ನಾಚುವಂತಹ ಭವ್ಯಬಂಗಲೆ ಕಟ್ಟಿಸಿದ; ದೇಶ, ವಿದೇಶದ ಹತ್ತಾರು ಬ್ಯಾಂಕ್ ಅಕೌಂಟುಗಳಲ್ಲಿ ಹಣ ತುಂಬಿ ತುಳುಕಾಡಲಾರಂಭಿಸಿತು; ಗಣಿ ಮಾಫಿಯಾಕ್ಕೂ ಕೈಯಿಟ್ಟು ಕಾಸು ಗೆಬರಿಕೊಂಡ; ಅವನ ಭ್ರಷ್ಟತೆಯನ್ನು ಕಣ್ಣಾರೆ ಕಂಡ ಮುಗ್ಧ ಪ್ರಾಮಾಣಿಕ ಮನಸ್ಸುಗಳು ಸದ್ಯದಲ್ಲೇ ಇವನಿಗೊಂದು ಗತಿ ಕಾದಿದೆ ಅಂತ ಕನವರಿಸಿದ್ದೇ ಬಂತು, ಅವನು ಮಾತ್ರ 2013ರ ಏಪ್ರಿಲ್‌ನಲ್ಲಿ ರಿಟೈರ್ ಆಗಿ ಈಗ ಬೆಚ್ಚಗಿನ ಐಷಾರಾಮಿ ಬದುಕು ದೂಡುತ್ತಿದ್ದಾನೆ! ಈ ದೇಶದ ಬಹುಪಾಲು ಭ್ರಷ್ಟರಂತೆಯೇ ಅವನೂ 'ಸೇಫ್' ಆಗಿದ್ದಾನೆ!!

ಅಂದಹಾಗೆ, ಇಷ್ಟುದ್ದ ಪರಾಕು ಹೇಳಿಸಿಕೊಂಡ ಆ ನಿವೃತ್ತ ಐಎಎಸ್ ಅಧಿಕಾರಿ ಬೇರಾರೂ ಅಲ್ಲ, 2013ರಲ್ಲಿ ಕರ್ನಾಟಕ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯಾಗಿ ರಿಟೈರ್ಡ್ ಆದ ಬಿ.ಎಲ್.ಶ್ರೀಧರ್. ನಿವೃತ್ತಿಯಾಗುವ ಕೊನೇ ತಿಂಗಳಲ್ಲೂ ಆತ ಸರ್ಕಾರದ ಅಕೌಂಟಿನಿಂದ ಸ್ಯಾಲರಿ ಅಂತ ಡ್ರಾ ಮಾಡಿದ್ದು ಕೇವಲ 80 ಸಾವಿರ ರೂಪಾಯಿ. 1977ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿ ಆತ ಸರ್ಕಾರಿ ಜೀವನಕ್ಕೆ ಪಾದಾರ್ಪಣೆ ಮಾಡಿದಾಗ ಖಂಡಿತವಾಗಿಯೂ ಇಷ್ಟು ಸಂಬಳ ಇರುವುದಿಲ್ಲ, ಸರಾಸರಿ ಮಾಸಿಕ 40,000 ರೂ. (70-80ರ ದಶಕದಲ್ಲಿ ಈ ಮಟ್ಟದ ಸಂಬಳ ಇರಲಿಲ್ಲವೆನ್ನುವುದು ಬೇರೆಮಾತು) ಸಂಬಳ ಅಂತ ಲೆಕ್ಕ ಹಿಡಿದರೂ ಅವನ ಒಟ್ಟಾರೆ ವೃತ್ತಿಬದುಕಿನ 35 ವರ್ಷದಲ್ಲಿ ಆತ ಪಡೆದಿರಬಹುದಾದ ಸಂಬಳ ಎರಡು ಕೋಟಿಯನ್ನೂ ದಾಟುವುದಿಲ್ಲ, ದಿನವಹಿ ಖರ್ಚು, ಸಂಸಾರ ನಿರ್ವಹಣೆ ಅಂತ ಯಾವುದಕ್ಕೂ ಖರ್ಚು ಮಾಡದೆ ಅಷ್ಟೂ ಹಣವನ್ನು ಉಳಿಸಿಟ್ಟಿದ್ದರೂ ಬಡ್ಡಿ, ಚಕ್ರಬಡ್ಡಿ ಅಂತ ಸೇರಿಕೊಂಡು ಅದು ಐದಾರು ಕೋಟಿಗೆ ಹಿಗ್ಗಬಹುದಷ್ಟೆ. ಆದರೆ ಬಿ.ಎಲ್.ಶ್ರೀಧರ್ ಇವತ್ತು ಏನಿಲ್ಲವೆಂದರೂ ನೂರರಿಂದ ಇನ್ನೂರು ಕೋಟಿ ರೂಪಾಯಿ ಆಸ್ತಿಗೆ ತೂಗುತ್ತಾನೆ. ಬೆಂಗಳೂರಿನಲ್ಲಿರುವ ಸೈಟು, ಫ್ಲ್ಯಾಟು, ರಿಯಲ್ ಎಸ್ಟೇಟು ವ್ಯವಹಾರಗಳು ಒತ್ತಟ್ಟಿಗಿರಲಿ ಅವನ ಮಗ ಅಭಿಜಿತ್ ಅಮೆರಿಕದಲ್ಲಿ ನಡೆಸುತ್ತಿರೋ ನಿಗೂಢ ದಂಧೆಯೇ ಹುಬ್ಬೇರುವಂತೆ ಮಾಡುತ್ತದೆ.

ಹಾದಿ ತಪ್ಪಿಸಿದ 'ಗಾಯತ್ರಿ ಮಂತ್ರ

ಅಷ್ಟಕ್ಕೂ ಈ ಶ್ರೀಧರ್ ಎನ್ನುವ ಆಸಾಮಿ ಹುಟ್ಟಾ ಭ್ರಷ್ಟನೇನಲ್ಲ. 1977ರಲ್ಲಿ ಐಎಎಸ್ ಅಧಿಕಾರಿಯಾದರೂ ಸುಮಾರು ಹದಿನೈದು-ಇಪ್ಪತ್ತು ವರ್ಷಗಳ ಕಾಲ ಸ್ವಚ್ಛಂದ ವೃತ್ತಿ ಬದುಕನ್ನೇ ಪಾಲಿಸಿಕೊಂಡು ಬಂದಿದ್ದ. ಪ್ರಾಮಾಣಿಕ ಅಧಿಕಾರಿ ಅಂತಲೂ ಕರೆಸಿಕೊಳ್ಳುತ್ತಿದ್ದ. ಅಂತಹವನು ಸಂಪೂರ್ಣವಾಗಿ ತನ್ನ ಮೈಗೆ ಭ್ರಷ್ಟತೆಯ ಮೈಲಿಗೆ ಅಂಟಿಸಿಕೊಳ್ಳಲು ಕಾರಣವಾದದ್ದು ಅವನ ಕೈಹಿಡಿದ ಧರ್ಮಪತ್ನಿ ಗಾಯಿತ್ರಿದೇವಿ. ಹಾಸನ ಮೂಲದ ಅನಂತರಾಮಯ್ಯ ಅನ್ನೋ ಅಡ್ವೊಕೇಟ್ ಸಾಹೇಬರ ಮಗಳಾದ ಗಾಯತ್ರಮ್ಮನಿಗೆ ಎಲ್ಲಿಲ್ಲದ ದುಡ್ಡಿನ ವ್ಯಾಮೋಹ. ಡಾಕ್ಟರೇಟ್ ಸಂಪಾದಿತೆ ಗಾಯಿತ್ರಮ್ಮ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ ನೆಪಕ್ಕೊಂಬಂತೆ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡಿಕೊಂಡಿದ್ದಾರೆ. ಹಿಂದೊಮ್ಮೆ ಈಕೆ ವಾಸವಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾಗ, ಆಕೆ ಪಾಠ ಹೇಳಿದ್ದ ವಿದ್ಯಾರ್ಥಿಗಳ ಬ್ಯಾಚು ಹೋಲ್‌ಸೇಲಾಗಿ ಫೇಲಾಗಿತ್ತಂತೆ. ಅದೇ ಕಾರಣಕ್ಕೆ ಗಾಯಿತ್ರಮ್ಮನನ್ನು ವಾಸವಿ ಕಾಲೇಜಿನವರು ಹೊರಹಾಕಿದರು ಎಂಬ ಮಾತುಗಳೂ ಇವೆ.

ಅಂತಿಪ್ಪ ಗಾಯತ್ರಿದೇವಿಗೆ ಗಂಡ ಐಎಎಸ್ ಅಧಿಕಾರಿಯಾಗಿದ್ದರೂ ಸೀದಾಸಾದಾ ಲೈಫು ನಡೆಸೋದು ಸೇರಿ ಬರಲಿಲ್ಲ, ಹಾಗಾಗಿ 'ಭ್ರಷ್ಟಾಂದೋಲನಕ್ಕೆ' ಧುಮುಕುವಂತೆ ಗಂಡನನ್ನು ಪ್ರೇರೇಪಿಸಿದ್ದರಿಂದಲೇ ಪಾಪ, ನಮ್ಮ ಶ್ರೀಧರ್ ಅಡ್ಡಹಾದಿ ತುಳಿಯಬೇಕಾಯ್ತು ಅಂತ ಶ್ರೀಧರ್ ಸಮಕಾಲೀನ ಅಧಿಕಾರಿಗಳೇ ಹೇಳಿಕೊಳ್ಳುತ್ತಾರೆ. ಅಲ್ಲದೇ ಮಾವ ಅಡ್ವೊಕೇಟ್ ಅನಂತರಾಮಯ್ಯ ದೊಡ್ಡದೊಡ್ಡ ರಾಜಕಾರಣಿಗಳೊಂದಿಗೆ ಹೊಂದಿದ್ದ ಸಲುಗೆಗಳು ಕೂಡಾ ಶ್ರೀಧರ್‌ಗೆ ಸ್ಫೂರ್ತಿ ತುಂಬಿದ್ದವು.

ಜನರಲ್ ಡೈರೆಕ್ಟರ್ಸ್ ಆಫ್ ಫ್ಯಾಮಿಲಿ

ಪ್ರಾಮಾಣಿಕವಾಗಿ ಬದುಕುವುದಕ್ಕಿಂತ ಹೆಂಡತಿ ಮಾತುಕೇಳಿ ನಾವೂ ಎಲ್ಲರಂತಾಗಬೇಕು ಅಂತ ಶ್ರೀಧರ್ ಗಟ್ಟಿ ಮನಸ್ಸು ಮಾಡುವುದಕ್ಕೂ ಗಣಿ ಮತ್ತು ಖನಿಜ ಇಲಾಖೆಯಂತಹ ಭರಪೂರ ಇಲಾಖೆಯ ಕಾರ್ಯದರ್ಶಿ ಹುದ್ದೆ ಒಲಿದುಬರುವುದಕ್ಕೂ ಸರಿಹೋಯ್ತು. ಪ್ರಾಮಾಣಿಕತೆಯಿಂದಾಗಿ ಅಷ್ಟುದಿನ ತನ್ನೊಳಗಿದ್ದ ಭ್ರಷ್ಟತೆಯ ಹಸಿವೆಲ್ಲ ಒಂದೇ ಏಟಿಗೆ ಹಿಂಗಿಹೋಗುವಂತೆ ತಿನ್ನಾಟಕ್ಕೆ ನಿಂತ. ಆಗಿನ್ನೂ ಬಳ್ಳಾರಿಯಲ್ಲಿ ರೆಡ್ಡಿ ರಿಪಬ್ಲಿಕ್ ಹಾವಳಿ ಅಷ್ಟಾಗಿರಲಿಲ್ಲ, ಮೈನಿಂಗ್ ಕಿಂಗ್‌ಪಿನ್ ಬಲ್ಡೋಟಾ ಗ್ರೂಪಿನ 'ಮಿನರಲ್ ಸೇಲ್ಸ್ ಪ್ರೈವೇಟ್ ಲಿಮಿಟೆಡ್' (ಎಂಎಸ್‌ಪಿಎಲ್) ಕಂಪನಿಯ ಹವಾ ಜೋರಾಗಿತ್ತು, ಎಂಎಸ್‌ಪಿಎಲ್ ಮತ್ತು ಅಂತಹುದೇ ಇನ್ನಿತರೆ ಗಣಿ ಕಂಪನಿಗಳಿಗೆ ಬೇಕಾಬಿಟ್ಟಿ ಲೈಸೆನ್ಸ್ ನೀಡುವ ಮೂಲಕ ಬಿ.ಎಲ್.ಶ್ರೀಧರ್ ಭರ್ಜರಿ ಕಮಾಯಿಯನ್ನೇ ಕಂಡ. ಅದೇವೇಳೆಗೆ, ಶ್ರೀಧರ್ ತಲೆಯಲ್ಲಿ ಖತರ್ನಾಕ್ ಐಡಿಯಾವೊಂದು ಮೊಳೆದಿತ್ತು. ಬೇರೆ ಯಾರ್‍ಯಾರಿಗೊ ಲೈಸೆನ್ಸ್ ನೀಡಿ ಚೂರುಪಾರು (?) ಜೇಬಿಗಿಳಿಸಿಕೊಳ್ಳುವ ಬದಲು ತನ್ನದೇ ಒಂದು ಕಂಪನಿ ಹುಟ್ಟುಹಾಕಿ, ಅದಕ್ಕೆ ಬೇಕಾದ ರೀತಿಯಲ್ಲಿ ಲೈಸೆನ್ಸ್ ನೀಡಿಕೊಂಡು ನೇರ ಗಣಿ ದಂಧೆಗೇ ಇಳಿದುಬಿಟ್ಟರೆ ದೊಡ್ಡ ಗಂಟಿನ ಕಮಾಯಿಯನ್ನೇ ಕಾಣಬಹುದಲ್ಲಾ ಅಂತ ಶ್ರೀಧರ್ ಲೆಕ್ಕ ಹಾಕಿದ. ಆಗ ಹುಟ್ಟಿಕೊಂಡಿದ್ದೇ ಕರ್ನಾಟಕ ಓರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಲೀಡ್ಸ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ ಎಂಬೆರಡು ಕಂಪನಿಗಳು. ಇದರಲ್ಲಿ ಕರ್ನಾಟಕ ಓರ್ಸ್ ಪ್ರೈವೇಟ್ ಕಂಪನಿಯೇ ಸಕ್ರಿಯ ಗಣಿಗಾರಿಕೆಯಲ್ಲಿ ತೊಡಗಿಕೊಂಡದ್ದು.

ಈ ಕಂಪನಿಯ ಒಟ್ಟು 10 ಮಂದಿ ಡೈರೆಕ್ಟರ್‌ಗಳೂ ಶ್ರೀಧರ್ ಕುಟುಂಬದ ಸದಸ್ಯರು ಮತ್ತು ಆಪ್ತ ಸ್ನೇಹಿತರೇ ಆಗಿದ್ದರು. ಶ್ರೀಧರ್‌ಗೆ ಅತ್ಯಾಪ್ತ ಮತ್ತು ಮೈನಿಂಗ್ ಕುಳ ಎನಿಸಿಕೊಂಡಿದ್ದ ರಾಮಕೃಷ್ಣ ಹೇಮಪ್ಪ ಸಾವ್ಕಾರ್ (ಆರ್.ಎಚ್.ಸಾವ್ಕಾರ್) ಮತ್ತು ಬೆಂಗಳೂರಿನ ಜಯನಗರದಲ್ಲಿರುವ ಕುಚಲಾಂಬ ಕಲ್ಯಾಣಮಂಟಪದ ಒಡೆಯ ಎ.ಆರ್.ಶ್ರೀರಾಮುಲುಗಳೇ ಈ ಕಂಪನಿಯ ಜೀವಾಧಾರಗಳಾಗಿದ್ದರು. ಇನ್ನುಳಿದಂತೆ ಶ್ರೀಧರ್‌ನ ಪತ್ನಿ ಗಾಯತ್ರಿದೇವಿ, ಮಾವ ಕೆ.ಅನಂತರಾಮಯ್ಯ, ಅತ್ತೆ ಕಮಲಮ್ಮ, ಭಾಮೈದುನರಾದ ಉದಯ್‌ಶಂಕರ್ ಮತ್ತು ರವಿಶಂಕರ್, ರವಿಶಂಕರ್‌ನ ಹೆಂಡತಿ ಡಾ|| ಅನಿತಾ, ಶ್ರೀಧರ್‌ನ ಕುಟುಂಬ ಸ್ನೇಹಿತರಾದ ವೀಣಾ ಸುಜೇಂದ್ರ, ಕೆ.ಜಿ.ರಾಘವೇಂದ್ರ ಮತ್ತು ಎಚ್.ಪಿ.ಸತ್ಯನಾರಾಯಣ ಹೀಗೆ ಸಕಲಷ್ಟು ಮಂದಿ ಡೈರೆಕ್ಟರ್‌ಗಳೂ ಶ್ರೀಧರ್ ಡ್ರಾಮಾ ಕಂಪನಿಯ ಜೊತೆಯಾಳುಗಳೇ ಆಗಿದ್ದರು. ಅಂದಹಾಗೆ, ಈ ಎಚ್.ಪಿ.ಸತ್ಯನಾರಾಯಣ ಅನ್ನೋನು ಶ್ರೀಧರ್ ಈ ಹಿಂದೆ ಸಾರಿಗೆ ಇಲಾಖೆಯ ಮುಖ್ಯಸ್ಥನಾಗಿದ[್ದಾಗ] ಸೂಪರಿಂಟೆಂಡೆಂಟ್ ಆಗಿದ್ದು ಮಾತ್ರವಲ್ಲದೆ, ಶ್ರೀಧ[ರ್] ಪಾಲಿನ ನಿಯತ್ತಿನ ಸಿಪಾಯಿಯಂತಿದ್ದ.

ಹೀಗೆ ಸ್ಥಾಪಿಸಿಕೊಂಡ ಕಂಪನಿಗೆ, ಸರ್ಕಾ[ರದ] ಮಾನದಂಡಗಳನ್ನೆಲ್ಲ ಗಾಳಿಗೆ ತೂರಿ ಬೇಕಾಬಿಟ್ಟಿ ಲೈ[ಸೆನ್ಸ್] ನೀಡಲಾಯ್ತು. ಪರಿಣಾಮವಾಗಿ ಶ್ರೀಧರ್‌ನ ಆಸ್ತಿಯ ಗ[ಾತ್ರ] ಹಿಗ್ಗಾಮುಗ್ಗಾ ಏರಲಾರಂಭಿಸಿತು. ಆಗಲೇ ಆತ ಬೆಂಗಳೂ[ರು] ಹೊರವಲಯದ ಉತ್ತರಹಳ್ಳಿಯಲ್ಲಿ 50/80 ಅಳತೆಯ ಸೈ[ಟ್] ಖರೀದಿಸಿ ಭವ್ಯ ಬಂಗಲೆ ನಿರ್ಮಾಣಕ್ಕೆ ಅಡಿಗಲ್ಲು ಹಾಕಿ[ದ]. ಆ ಬಂಗಲೆ ಅದೆಷ್ಟು ಐಷಾರಾಮಿ ಸೋಂಕು ಮೆತ್ತಿಸಿಕೊಂ[ಡು] ನಿಂತಿದೆಯೆಂದರೆ ನೆಲಕ್ಕೆ ದುಬಾರಿ ಇಟಾಲಿಯ[ನ್] ಮಾರ್ಬಲ್ಲುಗಳು, ಒಳಗೇ ಜಿಮ್ನಾಸ್ಟಿಕ್ ಮತ್ತು ಮ[ಿನಿ] ಸಿನಿಮಾ ಹಾಲ್‌ಗಳು, ಬೆಲೆಬಾಳುವ ಪೀಠೋಪಕರಣಗಳ[ು] ಕಂಗೊಳಿಸುತ್ತಿದೆ. ಶ್ರೀಧರ್ ಬಳಸುವ ಹತ್ತಾರು ಲ[...] ಸ್ಟಡಿ ಟೇಬಲ್ಲನ್ನು ಖುದ್ದು ಥಾಯ್‌ಲ್ಯಾಂಡ್‌ನಿ[ಂದ] ತರಿಸಿಕೊಳ್ಳುತ್ತಾರೆಂದರೆ ಅವರ ಐಷಾರಾಮಿಯ ಅಮ[...] ಎಂಥದ್ದಿರಬೇಡ. ಇದೆಲ್ಲದರ ಉಸ್ತುವಾರಿ ಹೊತ್ತ[ಿದ್ದು] ಗಾಯತ್ರಿದೇವಿ.

2005ರವರೆಗೂ ಈ ಕರ್ನಾಟಕ ಓರ್ಸ್ ಕಂ[ಪನಿ] ಸಖತ್ತಾಗಿ ಕಮಾಯಿ ಮಾಡಿತು. ಆದರೆ ಯಾವಾಗ ಅ[...] ಅಕ್ರಮಗಳು ದಾಖಲೆಯನ್ನೂ ಮೀರುವ[...] ಉಬ್ಬಿಹೋದವೊ, ಜೊತೆಗೆ ಗಣಿ ಮಾಫಿಯಾದಲ್ಲಿ [...]



ನಿವೃತ್ತ ಐಎಎಸ್ ಅಧಿಕಾರಿ ಬಿ.ಎಲ್. ಶ್ರೀಧರ್‌ರವರ ಮನೆ

ರಿಪಬ್ಲಿಕ್‌ನ ಹಾವಳಿಯೂ ಅತಿಯಾಯ್ತೊ, ಆಗ ಓ[ರ್ಸ್] ಕಂಪನಿಯನ್ನು 2005ರಲ್ಲಿ ಲೀಡ್ಸ್ ಎಂಟರ್‌ಪ್ರೈಸಸ[್] ಪ್ರೈವೇಟ್ ಲಿಮಿಟೆಡ್‌ನೊಳಗೆ ವಿಲೀನ ಮಾಡಿದರು. ಇದ[...] ಅಡಿಯಲ್ಲಿ ಲೀಡ್ಸ್ ಎಲೆಕ್ಟ್ರಾನಿಕ್ಸ್, ಲೀಡ್ಸ್ ಫಾರ್ಮ[...] ಲೀಡ್ಸ್ ಪ್ರಿಂಟಿಂಗ್ ಅಂಡ್ ಪಬ್ಲಿಕೇಷನ್, ಲೀಡ್ಸ್ ಎಲ್ಲೈ[...] ಸ್ಟೋರರ್ (ಪಿಸ್ತೂಲ್ ವ್ಯಾಪಾರ) ಅಂತ ತರಹೇವಾ[ರಿ] ಬಿಸಿನೆಸ್ ಶುರು ಮಾಡಿ ಗಣಿ ದುಡ್ಡನ್ನೆಲ್ಲ ಸೇಫ[್] ಮಾಡಿಕೊಳ್ಳುವ ಹುನ್ನಾರ ನಡೆಸಿದರು.

ಮಗನ ಹವಾಲಾ ಗುಮಾನಿ

ಇಬ್ಬರು ಮಕ್ಕಳು ಅಮೆರಿಕದಲ್ಲೆ ಸೆಟ್ಲ್ ಆಗಿದ್ದಾ[ರೆ]. ವಾಪಾಸ್ ಬರುವ ಇರಾದೆ ಅವರಿಗೆ ಇದ್ದಂತಿಲ್ಲ. ಇ[...] ಉಳಿದಿರೋದು ಶ್ರೀಧರ್ ಮತ್ತು ಗಾಯತ್ರಿದೇವಿ ಇಬ್ಬ[ರೇ]. ಅವರಿಗೆ ಆ ದೆವ್ವದಂತಹ ಬಂಗಲೆಯೇ ದೊಡ್ಡದಾಯ[...] ಅಂತದ್ದರಲ್ಲಿ ಕಾಕ್ಸ್‌ಟೌನ್‌ನಲ್ಲಿ ಐಷಾರಾಮಿ ಅಪಾರ್ಟ್‌ಮೆಂಟ್ ಫ್ಲ್ಯಾಟ್, ಪದ್ಮನಾಭನಗರದ ಶೋಭ[ಾ] ಡೆವಲಪರ್‌ನಲ್ಲಿ ಒಂದು ಫ್ಲ್ಯಾಟ್ ಹೀಗೆ ಹತ್ತಾರು ಫ್ಲ್ಯಾಟ್‌ಗಳನ್ನು ಖರೀದಿಸುತ್ತಲೇ ಇದ್ದಾರೆ. ಅಲ್ಲದ[ೆ] ಉತ್ತರಹಳ್ಳಿಯಲ್ಲೇ 100/100 ಮತ್ತು ರಾಜರಾಜೇಶ್ವ[ರಿ] ನಗರದಲ್ಲಿ ಇನ್ನೊಂದು ಖಾಲಿ ಸೈಟುಗಳೂ ಶ್ರೀಧರ[್] ಅಕೌಂಟಿನಲ್ಲಿವೆ. ಇನ್ನು ಶ್ರೀಧರ್ ಮತ್ತು ಗಾಯತ್ರಿದೇ[ವಿ] ಆಗಿಂದಾಗ್ಗೆ ಫಾರಿನ್ ಟೂರ್ ಅಂತ ಹೋಗುತ್ತಲೇ ಇರುತ್ತಾರೆ. ಅಮೆರಿಕದಲ್ಲಿರುವ ಇಬ್ಬರು ಮಕ್ಕಳು ಸ[...] ಇದಕ್ಕೆ ಹೊರತಾದವರಲ್ಲ.

ನೋ ಡೌಟ್, ಅವರ ಇಷ್ಟೂ ಐಷಾರಾಮಿಯನ[್ನು] ಸಾಕುತ್ತಿರೋದು ಬಿ.ಎಲ್. ಶ್ರೀಧರ್‌ನ ಭ್ರಷ್ಟ ಗಳಿಕೆಯೇ. ಇಡೀ ಕುಟುಂಬದಲ್ಲಿ ದುಡಿಯುವ ಕೈ ಅಂತ ಇರೋದು ಶ್ರೀಧರ್ ಮಾತ್ರ. ಗಾಯತ್ರಿದೇವಿ ಇಗ್ನೋದಲ್ಲಿ ಅತಿಥಿ ಉಪನ್ಯಾಸಕಿಯಾಗಿದ್ದರೂ ಅದನ್ನೇನು ನೆಚ್ಚಿಕೊಂಡವರಲ್ಲ. ಇನ್ನವರ ಮಗ ಅಭಿಜಿತ್ ದುಡಿಯಲಾರಂಭಿಸಿದ್ದು ತೀರಾ ಇತ್ತೀಚೆಗಷ್ಟೆ. ಅದೂಅಲ್ಲದೆ ಅಮೆರಿಕದ ಫಾರ್ಮಿಂಗ್ಟನ[್]

ಮಗನ ಸಂಸಾರವನ್ನೇ ಮುರಿದ 'ಧನದಾಹ'

ಶ್ರೀಧರ್ ಮತ್ತು ಗಾಯತ್ರಿದೇವಿ ದಂಪತಿಯ ಧನದಾಹ ಅದೆಷ್ಟು ವಿಕೃತ ಹಂತಕ್ಕೆ ಬಂದು ತಲುಪಿದೆಯೆಂದರೆ, ನೂರಾರು ಕೋಟಿ ಆಸ್ತಿಯಿದ್ದರೂ ವರದಕ್ಷಿಣೆಗಾಗಿ ಸೊಸೆಯನ್ನು ಪೀಡಿಸಿ ಮಗನ ಸಂಸಾರವನ್ನೇ ಮುರಿದು ಹಾಕಿದ್ದಾರೆ. ಮಗ ಅಭಿಜಿತ್ ಅಮೆರಿಕದ ಓಕ್ಲೊಹೋಮ ವಿವಿಯಲ್ಲಿ ಎಂಬಿಎ ಮುಗಿಸಿ ಅಲ್ಲೇ ನೌಕರಿ ಗಿಟ್ಟಿಸಿಕೊಂಡು ನೆಲೆಸಿದ್ದಾನೆ. ಬೆಂಗಳೂರಿನ ಕಂಪ್ಯೂಟರ್ ಇಂಜಿನಿಯರ್ ಆಗಿದ್ದ ಒಬ್ಬ ಹುಡುಗಿಯನ್ನು ಹುಡುಕಿ 2012ರ ಫೆಬ್ರವರಿಯಲ್ಲಿ ಆತನಿಗೆ ಅದ್ದೂರಿಯಾಗಿ ಮದುವೆ ಮಾಡಿದ್ದರು. ಗಣ್ಯ ಮನೆತನ, ಅಮೆರಿಕಾದಲ್ಲಿರೋ ಗಂಡ, ಸುಶಿಕ್ಷಿತ ಅತ್ತೆ-ಮಾವ ಅಂತೆಲ್ಲ ಕನಸು ಕಟ್ಟಿಕೊಂಡು ಬಂದ ಆ ಅಮಾಯಕ ಹುಡುಗಿಯ ಬದುಕನ್ನೇ ಶ್ರೀಧರ್ ಕುಟುಂಬ ಛಿದ್ರಛಿದ್ರ ಮಾಡಿಟ್ಟಿದೆ.

ಮದುವೆಯಾಗುತ್ತಿದ್ದಂತೆಯೇ ಕೆಲಸದ ನೆಪ ಹೇಳಿ ಅಭಿಜಿತ್ ಒಬ್ಬಂಟಿಯಾಗಿ ಅಮೆರಿಕಾದ ವಿಮಾನ ಏರಿ ಹೊರಟಿದ್ದ. ಇತ್ತ ಅತ್ತೆ ಮನೆಯಲ್ಲಿ ಆ ಹುಡುಗಿಗೆ ಐಎಎಸ್ ಕುಟುಂಬದಿಂದ ವರದಕ್ಷಿಣೆಯ ಕಿರುಕುಳ ಶುರುವಾಗಿತ್ತು, ಮೊದಮೊದಲು ಹುಡುಗಿಯ ತಂದೆಯೂ ಅವರೇಳಿದ ಬೇಡಿಕೆಗಳನ್ನು ಈಡೇರಿಸಿದರು. ಯಾವಾಗ ಅವರ ದಾಹ ಇಂಗುವಂತದ್ದಲ್ಲ, ತೀರಿಸಿದಷ್ಟೂ ಅಪೇಕ್ಷೆಗಳು ಬೆಳೆಯುತ್ತಲೇ ಹೋಗುತ್ತಿವೆ ಎಂಬುದು ಮನವರಿಕೆಯಾಯಿತೊ, ಆಗ ಆ ತಂದೆಯೂ ಕೈಸೋತು ಕೂತರು. ಹೇಗೂ ಇಲ್ಲಿಂದ ಅಮೆರಿಕಾಗೆ ತೆರಳಿ ಗಂಡನೊಟ್ಟಿಗೆ ಸಂಸಾರ ಶುರು ಮಾಡಿದರೆ ಎಲ್ಲಾ ಸರಿಹೋಗಬಹುದೆಂದು ಆ ಹುಡುಗಿ ಬಯಸಿದ್ದಳು. ಅದರಂತೆ ಮದುವೆಯಾದ ಎಂಟು ತಿಂಗಳ ನಂತರ ವೀಸಾ ಹೊಂದಿಸಿಕೊಂಡು ಅಮೆರಿಕಾ ತಲುಪಿದಳು. ಅಷ್ಟರಲ್ಲಾಗಲೆ ಮಗನಿಗೆ ಫೋನಾಯಿಸಿ ಇಲ್ಲಸಲ್ಲದ ವಿಚಾರಗಳನ್ನು ತಲೆಗೆ ತುಂಬಿದ್ದರು. ತನ್ನವರಿಲ್ಲದ ಪರದೇಸಿ ನೆಲದಲ್ಲಿ ಆಕೆ ಅಸಹಾಯಕಳು ಎಂಬುದನ್ನೂ ಲೆಕ್ಕಿಸದ 'ಎಜುಕೇಟೆಡ್' ಅಭಿಜಿತ್ ಧನದಾಹಿ ಗಂಡ ಇಂಡಿಯಾದಲ್ಲಿ ಹೇಗೆ ನಡೆದುಕೊಳ್ಳುತ್ತಾನೊ ಹಾಗೇ ವರ್ತಿಸಿದ್ದ. ಹಾಗೋಹೀಗೋ ಸಹಿಸಿಕೊಂಡು ದಿನದೂಡುತ್ತಿದ್ದ ಆ ಹುಡುಗಿ ಅದೊಮ್ಮೆ ಹೆತ್ತವರನ್ನು ಕಾಣಲೆಂದು ಭಾರತಕ್ಕೆ ಬಂದು ವಾಪಾಸ್ ಮರಳುವ ವೇಳೆಗಾಗಲೇ ಅಭಿಜಿತ್ ತಾನಿದ್ದ ಮನೆಯನ್ನೇ ಖಾಲಿಮಾಡಿಕೊಂಡು ಪಲಾಯನಗೈದಿದ್ದ. ಇತ್ತ ಶ್ರೀಧರ್ ಮತ್ತು ಗಾಯತ್ರಿದೇವಿಯನ್ನು ಕೇಳಿದರೆ ತಮಗೆ ಆತನ ಹೊಸ ವಿಳಾಸವೇ ಗೊತ್ತಿಲ್ಲ ಅಂತ ಕತೆ ಕಟ್ಟಿದ್ದರು. ದಿಕ್ಕಿಲ್ಲದ ನಾಡಲ್ಲಿ ಆ ಹೆಣ್ಮಗಳು ಅಕ್ಷರಶಃ ಅನಾಥೆಯಂತೆ ದಿನ ದೂಡಿದ್ದಳು. ಹೆತ್ತವರ ನೆರವಿನಿಂದ ಭಾರತಕ್ಕೆ ವಾಪಾಸಾದ ಆಕೆ ಗಂಡ, ಅತ್ತೆ-ಮಾವರ ಮೇಲೆ ಕಂಪ್ಲೇಂಟು ಕೊಡಲು ಮುಂದಾದಾಗ ಪೊಲೀಸರಿಂದಾಗಲಿ, ಮಾನವಹಕ್ಕುಗಳ ಆಯೋಗದಿಂದಾಗಲಿ, ಮಹಿಳಾ ಆಯೋಗದಿಂದಾಗಲಿ ಕಡೆಗೆ ವಿದೇಶಾಂಗ ವ್ಯವಹಾರ ಸಚಿವಾಲಯದಿಂದಲೂ ಆವಳಿಗೆ ನೆರವು ದೊರಕದಂತೆ ಶ್ರೀಧರ್ ತನ್ನ ಪ್ರಭಾವ ಬಳಸಿದ್ದ. ಕೊನೆಗೆ ದೆಹಲಿ ಹೈಕೋರ್ಟ್ ಮಧ್ಯಪ್ರವೇಶಿಸಿ ದೂರು ದಾಖಲಿಸಿಕೊಳ್ಳುವಂತೆ ತಾಕೀತು ಮಾಡಿದ ಮೇಲಷ್ಟೆ ಪೊಲೀಸ್ ಕಂಪ್ಲೇಂಟ್ ದಾಖಲಾದದ್ದು.

ಆ ಹೆಣ್ಮಗಳೇ ಮುಂದಾಗಿ ತನಗೆ ಇಂತಹ ಪೀಡಕರ ಸಹವಾಸವೇ ಬೇಡ, ಡೈವೋರ್ಸ್ ಕೊಡಿಸಿ ಅಂತ ಕೋರ್ಟ್ ಮೆಟ್ಟಿಲೇರಿದ್ದಾಳೆ. ಇನ್ನು ಕೆಲವೇ ದಿನಗಳಲ್ಲಿ ಡೈವೋರ್ಸ್ ದಕ್ಕಲಿದೆ. ಇದೇ ಖುಷಿಗೆ, ಬಹುಶಃ ತಮ್ಮ ಮಗನಿಗೆ ಮತ್ತೊಂದು 'ಧನ'ಕಲ್ಯಾಣ ಮಾಡಿಸಲು ಶ್ರೀಧರ್ ದಂಪತಿಯೂ ಕಸರತ್ತು ಶುರುವಿಟ್ಟುಕೊಂಡಿರಬಹುದು....

ನಲ್ಲಿರುವ ಒಂದು ಕಂಪ್ಯೂಟರ್ ಸರ್ವಿಸ್ ಕಾರ್ಪೋರೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಅಭಿಜಿತ್‌ನ ಸ್ಯಾಲರಿ ಹೆಚ್ಚೆಂದರೆ ಮೂರರಿಂದ ನಾಲ್ಕು ಸಾವಿರ ಡಾಲರ್ ಅಷ್ಟೆ. ಅವನ ಹೈ-ಫೈ ಲೈಫ್‌ಸ್ಟೈಲಿಗೆ ಅದೂ ಸಾಕಾಗದೆ ಇಲ್ಲಿಂದ ಅಪ್ಪ ಶ್ರೀಧರ್‌ನೇ ದುಡ್ಡು ಕಳಿಸಬೇಕು. ಹೀಗಿರುವಾಗ 1997ರವರೆಗೂ ಏನೇನು ಇರದಿದ್ದ ಶ್ರೀಧರ್‌ಗೆ ನೂರಾರು ಕೋಟಿಯ ಆಸ್ತಿ ಬಂದಿದ್ದಾದರು ಹೇಗೆ?

ಶ್ರೀಧರ್ ತನ್ನ ಭ್ರಷ್ಟತೆಯಿಂದ ಸಂಪಾದಿಸಿದ ಬ್ಲ್ಯಾಕ್‌ಮನಿಯಿದೆಯಲ್ಲ ಅದನ್ನು ವೈಟಾಗಿಸುವ ದಾರಿಯನ್ನೂ ಮಗನೊಟ್ಟಿಗೆ ಸೇರಿ ಶ್ರೀಧರ್ ಕಂಡುಕೊಂಡಿದ್ದಾನೆ. ಮಗ ಅಮೆರಿಕದ ಕಂಪನಿಯಲ್ಲಿ ಕೆಲಸ ಮಾಡುತ್ತಿರೋದು ನೆಪಕ್ಕಷ್ಟೆ. ತನ್ನ ಕಂಪನಿ ಕೆಲಸದ ಜೊತೆಗೆ ಲೀಡ್ಸ್ ಫಾರ್ಮಸಿಯ ಬ್ರಾಂಚನ್ನೂ 2010ರಲ್ಲಿ ಅಮೆರಿಕದ ಇಲ್ಲಿನೋಯ್ಸ್‌ನಲ್ಲಿ ತೆರೆದು ಕೂತಿದ್ದಾನೆ. ಅಲ್ಲಿ ಈ ಕಂಪನಿ ಅದೇನು ವ್ಯವಹಾರ ಮಾಡುತ್ತೋ ಗೊತ್ತಿಲ್ಲ, ಆದರೆ ಬಿ.ಎಲ್.ಶ್ರೀಧರ್ ಇಲ್ಲಿ ಸಂಪಾದಿಸಿರುವ ಬ್ಲ್ಯಾಕ್‌ಮನಿಯನ್ನೆಲ್ಲ ಹವಾಲಾ ಲಿಂಕ್ ಮೂಲಕ ಅಮೆರಿಕಾದ ಮಗನ ಕಂಪನಿಗೆ ರವಾನಿಸಿ ಅಲ್ಲಿ ಅದನ್ನು ಬಿಳಿಯಾಗಿಸುತ್ತಿದ್ದಾನೆ ಎನ್ನುವ ಗುಮಾನಿಗಳಿವೆ. ಅದಕ್ಕೆ ಪೂರಕವಾಗುವಂತೆ 1,30,000 ಡಾಲರ್ ವಾರ್ಷಿಕ ಆದಾಯ ಈ ಕಂಪನಿಗಿದೆ ಎಂಬ ಮಾಹಿತಿಯನ್ನು ಅಮೆರಿಕದ ಕಂಪನಿ ರೆಕಾರ್ಡ್‌ಗಳು ಬಹಿರಂಗ ಮಾಡುತ್ತವೆ. ಅಚ್ಚರಿಯೆಂದರೆ, ಈ ಪಾಟಿ ವ್ಯವಹಾರ ನಡೆಸುವ ಇಲ್ಲಿನೋಯ್ಸ್‌ದ ಆ ಕಂಪನಿಯಲ್ಲಿ ಇರೋ ನೌಕರರ ಸಂಖ್ಯೆ ಎಷ್ಟು ಗೊತ್ತೆ? ಕೇವಲ ಇಬ್ಬರು ಮಾತ್ರ! ಅದು ಶ್ರೀಧರ್‌ನ ಮಗ ಮತ್ತು ಮಗಳು (ಇಬ್ಬರೂ ಅಮೆರಿಕದಲ್ಲೇ ವಾಸವಿರುವವರು) ಮಾತ್ರ ಇರಬಹುದೇನೊ!

ಇಂತಹ ಗುಮಾನಿಗೆ ಮತ್ತೂ ಒಂದು ಕಾರಣವಿದೆ. ಏನೆಂದರೆ, ಅಮೆರಿಕದಲ್ಲಿರುವ ಅಭಿಜಿತ್ ಟ್ಯಾಂಪಾ ಎಂಬಲ್ಲಿರುವ ಬ್ಯಾಂಕ್ ಆಫ್ ಅಮೆರಿಕದ ಶಾಖೆಯಲ್ಲಿ ವಿವಿಧ ಹತ್ತು ಬೇರೆಬೇರೆ ಅಕೌಂಟುಗಳನ್ನು ಹೊಂದಿದ್ದಾನೆ (ಅಕೌಂಟ್ ನಂಬರ್‌ಗಳು; 305002455798, 305001682999, 305001742444, 305001742431). ಅವೆಲ್ಲ ಅಕೌಂಟುಗಳಲ್ಲಿ ಭಾರೀ ಅಮೌಂಟು ಶೇಖರಣೆಯಾಗಿದ್ದರೂ ಅಚ್ಚರಿ ಪಡಬೇಕಿಲ್ಲ. ಎಚ್1 ಬಿ ಟೆಂಪರರಿ ವೀಸಾದೊಂದಿಗೆ ಅಮೆರಿಕಾದ ಕಂಪನಿಯೊಂದರಲ್ಲಿ ಗುತ್ತಿಗೆ ಕೆಲಸ ಮಾಡುತ್ತಿರುವ ವ್ಯಕ್ತಿಗೆ ಇಷ್ಟೊಂದು ಅಕೌಂಟುಗಳ ಅವಶ್ಯಕತೆಯಾದರೂ ಏತಕ್ಕೆ?

ಗ್ರೇಟ್ ಎಸ್ಕೇಪ್

ಗಣಿ ಮತ್ತು ಭೂವಿಜ್ಞಾನ, ಕೃಷಿ ಮತ್ತು ಸಹಕಾರಿ, ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ, ಕೈಗಾರಿಕೆ ಹಾಗೂ ಸಾರಿಗೆ ಇಲಾಖೆಯ ಆಯುಕ್ತರಂತಹ ಆಯಕಟ್ಟಿನ ಜಾಗಗಳಲ್ಲಿ ಕೆಲಸ ಮಾಡಿದ್ದ ಬಿ.ಎಲ್.ಶ್ರೀಧರ್ ಎಗ್ಗಿಲ್ಲದಂತೆ ತಿಂದು ತೇಗಿದ್ದು ಈಗ ಇತಿಹಾಸ. ಕರ್ನಾಟಕ ನ್ಯಾಯಮಂಡಳಿಯಲ್ಲಿ ಕಂದಾಯ ವಿಭಾಗದ ಅಧ್ಯಕ್ಷರಾಗಿದ್ದಾಗ ಶ್ರೀಧರ್ ನಡೆಸಿರುವ ಅವ್ಯವಹಾರಗಳಿವೆಯಲ್ಲ ಅವಷ್ಟೇ ಸಾಕು ಆತನನ್ನು ಜೈಲಿಗೆ ತಳ್ಳಲು. ಆದರೆ ಯಾರೂ ಅತ್ತ ಚಕಾರವೆತ್ತುತ್ತಿಲ್ಲ. ಕೆಎಟಿಯಲ್ಲಿ ಶ್ರೀಧರ್‌ನ ಹಾವಳಿ ಅದೆಷ್ಟು ಹದ್ದುಮೀರಿ ಹೋಗಿತ್ತೆಂದರೆ ರೋಸಿಹೋದ ಸರ್ಕಾರ ಆತನಿಗೆ ಹುದ್ದೆಯನ್ನೇ ತೋರಿಸದಂತೆ ವಿಧಾನಸೌಧಕ್ಕೆ ವರ್ಗಾವಣೆ ಮಾಡಿತ್ತು.

ಸುಮಾರು 35 ವರ್ಷ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿಯಾಗುವುದು ಇನ್ನೇನು ಎರಡ್ಮೂರು ತಿಂಗಳಿದೆ ಎನ್ನುವಾಗ ಹುದ್ದೆಯನ್ನೇ ತೋರಿಸದೆ ಒಬ್ಬ ಹಿರಿಯ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗುತ್ತದೆಂದರೆ ಅದನ್ನು ಏನೆಂದು ಅರ್ಥೈಸಿಕೊಳ್ಳಬೇಕು ನೀವೇ ಯೋಚಿಸಿ. ಕೊನೆಗೆ ಆತನ ಹುದ್ದೆಗೆ ಅವಮಾನವಾಗಬಾರದೆಂಬ ಕಾರಣಕ್ಕೆ ನಿವೃತ್ತಿಯಾಗುವುದು ಇನ್ನೇನು ಒಂದು ತಿಂಗಳು ಇದೆ ಎನ್ನುವಾಗ ಜಗದೀಶ್ ಶೆಟ್ಟರ್ ಸರ್ಕಾರ ಆತನನ್ನು ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯಲ್ಲಿ ಪ್ರತಿಷ್ಠಾಪಿಸಿ ಮನೆಗೆ ಕಳಿಸಿತ್ತು. ಅಂದಹಾಗೆ, ಸಾರಿಗೆ ಇಲಾಖೆ ಆಯುಕ್ತನಾಗಿದ್ದಾಗಲೇ ಶ್ರೀಧರ್ ಭ್ರಷ್ಟಾಚಾರದ ಕಾರಣಕ್ಕೆ ಸಸ್ಪೆಂಡ್ ಆಗಿ ಜೈಲು ಸೇರುವ ಪರಿಸ್ಥಿತಿ ನಿರ್ಮಾಣವಾಗಿತ್ತಂತೆ, ಆದರೆ ಭಾಮೈದ ಅಡ್ವೋಕೇಟ್ ರವಿಶಂಕರ್ ತನ್ನೆಲ್ಲ ಪೊಲಿಟಿಕಲ್ ಲಿಂಕ್ ಬಳಸಿಕೊಂಡು, ಲೀಗಲ್ ಸರ್ಕಸ್ ಮಾಡಿ ಬಚಾವು ಮಾಡಿದ್ದ ಎಂಬ ಮಾತುಗಳೂ ಇವೆ.

ಬಿ.ಎಲ್.ಶ್ರೀಧರ್‌ನ ಅಕ್ರಮ ಆಸ್ತಿಗಳಿಕೆ ಹಾಗೂ ಭ್ರಷ್ಟಾಚಾರದ ಕುರಿತು ಸೂಕ್ತ ದಾಖಲೆಗಳ ಸಮೇತ ಹಲವಾರು ಮಂದಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೂ ದೂರು ನೀಡಿದ್ದರು. ಆದರೆ ಇದುವರೆಗೂ ಆತನ ಮೇಲೆ ಯಾವ ಕ್ರಮವೂ ಜರುಗಿಲ್ಲ. ಈಗಲೂ ಆರಾಮಾಗಿಯೇ ಓಡಾಡಿಕೊಂಡಿದ್ದಾರೆ. ನಿವೃತ್ತರಾದ ಕೂಡಲೇ ತಮ್ಮೆಲ್ಲಾ ಪಾಪಗಳು ಮನ್ನಾ ಆಗಿಬಿಡುತ್ತವೆ ಎಂಬ ನಂಬಿಕೆಯಲ್ಲಿರುವ ಇಂತಹವರ ಮೇಲೆ ಪ್ರಹಾರ ನಡೆಸಿ, ಜನರಲ್ಲಿ ವಿಶ್ವಾಸ ತುಂಬುವ ಕೆಲಸವನ್ನು ಸರ್ಕಾರಗಳು ಮಾಡಬೇಕಿದೆ.

■ ವರದಿಗಾರ

ನಿಜವಾದ ರಾಷ್ಟ್ರಪ್ರೇಮಿಗಳಾರು ಗೊತ್ತೆ?

ಥೂತ್ತೇರಿ

ಯಾಹೂ

"ನಿಜವಾದ ರಾಷ್ಟ್ರಪ್ರೇಮಿಗಳ ಸಂಘಟನೆ ಎಂದರೆ ಅದು ನಮ್ಮ ಆರೆಸ್ಸೆಸ್ ಸಂಘಟನೆ. ಅದು ಭಾರತೀಯರ ಬೌದ್ಧಿಕ ಮತ್ತು ಮಾನಸಿಕ ಸ್ಥಿತಿ ವೃದ್ಧಿಸುವಲ್ಲಿ ಮಾಡುತ್ತಿರುವ ಸಾಹಸ ಅನನ್ಯವಾದುದು. ಜಗತ್ತಿನಲ್ಲೇ ಅತಿದೊಡ್ಡ ಸಂಘಟನೆಯಾದ ಆರೆಸ್ಸೆಸ್‌ನ ದೇಶಸೇವೆ ಗಮನಿಸಿದ ಡಾ. ಅಂಬೇಡ್ಕರ್ ಕೂಡ ಅದನ್ನು ಮೆಚ್ಚಿ ಕೊಂಡಾಡಿದ್ದರು. ರಾಷ್ಟ್ರೀಯ ಮನೋಭಾವನೆ, ದೇಶದ ಐಕ್ಯತೆ, ಅಸ್ಮಿತೆ ಹೋಗಲಾಡಿಸುವುದರಲ್ಲಿ ಆರೆಸ್ಸೆಸ್ ವಹಿಸಿರುವ ಪಾತ್ರ ವಂತೂ ಅಮೋಘ. ಅದರ ಪೂರ್ಣಾವಧಿ ಕಾರ್ಯಕರ್ತರ ಅಗತ್ಯ ಈ ದೇಶಕ್ಕೆ ಅತ್ಯಗತ್ಯ. ದೇಶದ ಒಗ್ಗಟ್ಟಿಗೆ ಅವರು ಪಡುತ್ತಿರುವ ಶ್ರಮ ಶ್ಲಾಘನೀಯವಾದದು..." ಈ ಅಮೃತ ವಾಕ್ಯವನ್ನು ಯಾರು ಬಿತ್ತರಿಸಿದರು ಗೊತ್ತೆ? ರಾಮಾಜೋಯ್ಸ್, ಕೃಷ್ಣಭಟ್ಟ, ಗೋವಿಂದ, ಭಾಗವತ ಇವರಾರೂ ಅಲ್ಲ, ಕುವೆಂಪು ಯೂನಿವರ್ಸಿಟಿಯ ಕುಲಪತಿ-ಜೋಗನ್ ಶಂಕರನಂತಲ್ಲಾ, ಥೂತ್ತೇರಿ!!

* * *


ಯಾವ ಹುತ್ತದಲ್ಲಿ ಯಾವ ಹಾವ್ರೋ. ಕೈಹಾಕಿ ಈಚೆಗೆ ಎಳೆದಾಗಲೇ ಅದರ ಜಾತಿ ತಿಳಿಯುವುದು. ಅಂತೆಯೇ ಕುವೆಂಪು ವಿಚಾರಧಾರೆಯನ್ನೇ ಬುನಾದಿಯಾಗಿ ಹೊಂದಿರಬೇಕಾದ ಯೂನಿವರ್ಸಿಟಿಗೆ ಎಂತೆಂಥವರು ವಕ್ಕರಿಸಿ ಬಂದರಲ್ಲಾ, ಈ ಜೋಗನ್ ಶಂಕರ್ ಕೂಡ ಕನಿಕರ ಮಿಶ್ರಿತ ಪ್ರೀತಿಗೆ ತುತ್ತಾದ ವ್ಯಕ್ತಿ. ದೇವನೂರರ ಪ್ರೀತಿಗೆ ಭಾದ್ಯರಾದ ಈತ, ಅಹಿಂದ ಗರಬಡಿದ ಮುಖ್ಯಮಂತ್ರಿಯ ಅಭಿಮಾನಕ್ಕೂ ತುತ್ತಾಗಿದ್ದವರು. ಅದರ ಫಲವಾಗಿ ಕುವೆಂಪು ಯೂನಿವರ್ಸಿಟಿಗೆ ವಕ್ಕರಿಸಿದ ಈತನ ಬುದ್ಧಿ ದಾರಿದ್ರ್ಯಕ್ಕೆ ಈಗ ಈ ನಾಡೇ ಬೆಚ್ಚಿಕೂತಿದೆ. ಮೊದಲೇ ಎಬಿವಿಪಿ ಎಂಬ ಮುಗ್ಧ ಜಂತುಗಳು ಈ ಯೂನಿವರ್ಸಿಟಿಯಲ್ಲಿ ಸೇರಿಕೊಂಡು ಅವಾಂತರ ಮಾಡುತ್ತಿವೆ. ಅವುಗಳ ಉಪಟಳ ತಡೆಯಲು ಸೆಕ್ಯುಲರ್‌ವಾದಿಗಳು ಮತ್ತು ದಲಿತ ಸಂಘಟನೆಗಳ ಹುಡುಗರು ಹೋರಾಡುತ್ತಿರುವಾಗಲೇ, ಜೋಗನ್ ಶಂಕರ್ ದೊಗಲೆ ಚೆಡ್ಡಿಯೊಳಗೆ ಆಶ್ರಯ ಪಡೆದು ಸೆಕ್ಯೂಲರ್‌ವಾದಿಗಳಿಗೇ ಅಧೈರ್ಯವುಂಟು ಮಾಡಿದ್ದಾರಲ್ಲಾ. ಈತನ ಮಂದಬುದ್ಧಿಯ ಅಭಿಪ್ರಾಯದ ಕಾರಣಕ್ಕೆ ಯೂನಿವರ್ಸಿಟಿ ಬಿಟ್ಟು ಓಡಿಸಲು ಬರುವುದಿಲ್ಲ, ಆ ಬಗ್ಗೆ ರಾಜಪಾಲರಿಗೆ ದೂರು ನೀಡಿದರೆ ಆತ ಕನ್ನಡ ರಾಜ್ಯೋತ್ಸವದಂದು ರಾಜಭವನದಲ್ಲಿ ಮರಾಠಿಗೋಷ್ಠಿ ಮಾಡುವಂತಹವರು. ಜೋಗನ್ ಶಂಕರನ ಅಭಿಪ್ರಾಯವನ್ನು ಕೊಂಡಾಡಿ ಮೆಡಲು ಕೊಡುವ ಹಳೇ ದೊಗಲೆ ಚೆಡ್ಡಿಯೆಂಬುದು ಕರ್ನಾಟಕದ ದುರಂತವಲ್ಲದೆ ಮತ್ತೇನೂ ಅಲ್ಲ, ಥೂತ್ತೇರಿ!

* * *

"ಸರಕಾರದ ಆಯಕಟ್ಟಿನ ಜಾಗಕ್ಕೆ ಮತ್ತು ವಿಸಿಗಳಾಗಲು ಯಾರಾದರೂ ಅಹಿಂದ ಅಭ್ಯರ್ಥಿಗಳಿದ್ದರೆ ನೋಡಿ. ಅವರಲ್ಲಿ ಯಾರೂ ಇಲ್ಲ ಎಂದಾದರೆ ಬೇರೆಯವರನ್ನು ಆರಿಸೋಣ" ಎನ್ನುತ್ತಿದ್ದ ಸಿದ್ದರಾಮಯ್ಯನ ಪರಿವಾರಕ್ಕೆ ತಕ್ಕ ಉತ್ತರವನ್ನೇ ಜೋಗನ್ ಶಂಕರ್ ಕೊಟ್ಟಿದ್ದಾರಲ್ಲ. ಶೂದ್ರ ಸಮೂಹವನ್ನೇ ನೆಚ್ಚಿ ಆಡಳಿತ ನಡೆಸುತ್ತಿರುವ ಸಿದ್ದು ಸರಕಾರ ಇತ್ತ ಒಬ್ಬಾಲಿಂ ವರ್ಗದ ಸಹಕಾರವು ಇಲ್ಲದೆ, ಅತ್ತ ಅಹಿಂದರ ಬೆಂಬಲವೂ ಇಲ್ಲದೆ ನರಳುವಂತಾಗಿದೆಯಲ್ಲಾ, ಅತ್ತ ಹೈದರಾಬಾದ್ ಕೇಂದ್ರೀಯ ವಿವಿ ಕುಲಪತಿ ಅಪ್ಪಾರಾವ್ ಎಂಬ ದಲಿತ ವಿರೋಧಿಯ ಮನೆ, ಕಚೇರಿ ಧ್ವಂಸವಾಗಿರುವ ಸಮಯದಲ್ಲೇ, ಶುದ್ಧ ಹೋಣೆಗೇಡಿ ಅಭಿಪ್ರಾಯ ಬಿತ್ತರಿಸಿರುವ ಜೋಗನ್ ಬಗ್ಗೆ ಬೆಲ್ಜಿಯಂ ಬಾಲ ಗಡಗಡಿಸಿ ನಕ್ಕು, "ನಾನು ಕುವೆಂಪು ವಿವಿಗೆ ಬರದಿದ್ದರೇನು. ನಮ್ಮ ಪ್ರತಿನಿಧಿಯಂತೆ ಜೋಗನ್ ಶಂಕರ್ ಇದ್ದಾರೆ" ಎಂದಿಲ್ಲವಂತಲ್ಲಾ, ಥೂತ್ತೇರಿ!!

* * *

ಕನ್ಹಯ್ಯ ಕುಮಾರನನ್ನು ಅಕಸ್ಮಾತ್ ಭಗತ್ ಸಿಂಗ್‌ಗೆ ಹೋಲಿಸಿದ ಕಾರಣಕ್ಕೆ, ಭಾರತದ ಟಿವಿಯೊಳಕ್ಕೆ ಸೇರಿಕೊಂಡಿರುವ ಪುರೋಹಿತ ಪಿಂಡದಂತಹ ಆ್ಯಂಕರ್‌ಗಳು ಸತತ 24 ಗಂಟೆ ಬೊಬ್ಬೆ ಹೊಡೆದಿವೆಯಂತಲ್ಲಾ. ಈ ಪೈಕಿ ಕರ್ನಾಟಕದ ಚಾನಲ್‌ಗಳಲ್ಲಿ ಸೇರಿಕೊಂಡು ಹವಾ



ಮಾನವನ್ನೇ ಗಬ್ಬೆಬ್ಬಿಸುತ್ತಿರುವ ಶಾನುಭೋಗರ ಮಕ್ಕಳು ಶುದ್ಧ ಬುದ್ಧಿಮಾಂದ್ಯರಂತೆ ಕಿರುಚುತ್ತ "ಕನ್ಹಯ್ಯ ಎಲ್ಲಿ? ಭಗತ್ ಎಲ್ಲಿ?" ಎನ್ನುತ್ತಿವೆಯಲ್ಲಾ, "ಹಾಗೆ ನೋಡಿದರೆ, ಭಗತ್ ಗಲ್ಲಿಗೇರಿದ ವಯಸ್ಸಿಗೇ ಕನ್ಹಯ್ಯ ಜೈಲು ಸೇರಿದ. ಆತ ಬಿಡುಗಡೆಯಾದ ಕೂಡಲೇ ಚಡ್ಡಿ ಕ್ರಾಕುಗಳು ತಲೆದಂಡ ಘೋಷಿಸಿದ್ದೂ ಅಲ್ಲದೆ ಹಲ್ಲೆ ಮಾಡಿದೆ. ಅಂದು ಬ್ರಿಟಿಷರು ಭಗತ್‌ನನ್ನು ನಡೆಸಿಕೊಂಡಂತೆಯೇ ಇಂದು ಬಿಜೆಪಿಗಳು ಕನ್ಹಯ್ಯನನ್ನು ನಡೆಸಿಕೊಳ್ಳುತ್ತಿವೆ. ಬ್ರಿಟಿಷ್‌ರದ್ದು ನೇರಾನೇರ ಕಾರ್ಯಾಚರಣೆಯಾದರೆ, ಬಿಜೆಪಿಗಳದ್ದು ಹೇಡಿಗಳ ಕಾರ್ಯಾಚರಣೆ, ಒಂದು ರೀತಿ ಹೈನಾಗಳ ಕಾರ್ಯಾಚರಣೆ" ಎಂಬುದು ಕನ್ಹಯ್ಯನ ಅಭಿಮಾನಿಗಳ ಆಕ್ರೋಶವಾಗಿದೆಯಲ್ಲಾ, ಥೂತ್ತೇರಿ!!

* * *

ಇತ್ತ ಕರ್ನಾಟಕದ ವಿಧಾನಸೌಧದ ವ್ಯಾಪ್ತಿಯೊಳಕ್ಕೆ ಬರುವುದಾದರೆ, ಲೋಕಾಯುಕ್ತವೆಂಬ ಸಂಸ್ಥೆ ಸಂಪೂರ್ಣ ಗೆಜ್ಜಲು ಹಿಡಿದುಹೋಗಿದೆಯಲ್ಲಾ, ಈ ಮೊದಲು ವೆಂಕಟಾಚಲ ಎಂಬ ಲೋಕಮಾನ್ಯರು ತಮ್ಮ ರೈಡುಗಳಿಂದ ಹೆಸರು ಮಾಡಿ ನಿರ್ಗಮಿಸಿದರು. ಕೂಡಲೇ ಬಿಜೆಪಿಗಳು ಅವರನ್ನು ಬಲೆ ಹಾಕಿ ಹಿಡಿದು ಬಿಜೆಪಿಗೆ ಕರೆದುಕೊಂಡು ಹೋಗಿ, ಅವರ ಹೆಸರನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ನೋಡಿದವು. ಅಲ್ಯಾವ ಕ್ಯಾಷೂ ಇಲ್ಲದ ಕಾರಣ ವೆಂಕಟಾಚಲ ಆಮೇಲೆ ಎಲ್ಲಿ ಹೋದರೋ ಏನೊ. ಆನಂತರ ಬಂದ ಸಂತೋಷ್ ಹೆಗ್ಡೆಯವರು ಲೋಕಾಯುಕ್ತದಲ್ಲಿ ಚರಿತ್ರೆಯನ್ನೇ ನಿರ್ಮಿಸಿದರೂ ಕೂಡ ಭ್ರಷ್ಟ ಅಧಿಕಾರಿಗಳು ಅವರ ಆಫೀಸಿನಲ್ಲೇ ಇದ್ದರು. ಅವರಿಗೆ ದುಡ್ಡು ಕೊಟ್ಟು ನಮಗಾಗದವರನ್ನು ರೈಡ್ ಮಾಡಿಸಬಹುದಿತ್ತು. ಜನಾರ್ದನ ರೆಡ್ಡಿ ಗುಂಪು ಆ ಕೆಲಸವನ್ನು ಮಾಡಿತು. ಇದೆಲ್ಲಕ್ಕಿಂತ ಮುಖ್ಯವಾಗಿ ಗಣಿಗಾರಿಕೆ ವಿಷಯದಲ್ಲಿ ಸಂತೋಷ್ ಹೆಗ್ಡೆ ತಯಾರಿಸಿದ ರಿಪೋರ್ಟ್ ಎಷ್ಟು ಭದ್ರವಾಗಿದೆಯೆಂದರೆ, ಮುಂದೆ ಅದರಿಂದ ಯಾರಿಗೂ ತೊಂದರೆಯಾಗದಂತೆ ಎಲ್ಲಾ ಪಾರ್ಟಿಯವರೂ ನೋಡಿಕೊಳ್ಳುತ್ತಾರೆ. ಇಂತಿರುವಾಗ ಲೋಕಾಯುಕ್ತವಾದರೇನು, ಲೋಕಪಾಲವಿದ್ದರೇನು ಎಂಬ ನಿರ್ಲಿಪ್ತಭಾವದಲ್ಲಿ ಬಾಯಾರಿದ ಸಾಮಾನ್ಯ ಜನ ನೀರು ಕುಡಿದು ಕೂತಿರುವಾಗಲೇ, ಕುಮಾರ್-ಶೆಟ್ಟರ್-ಜೋಷಿಗಳು ಬಾಯಾರಿಕೆಯನ್ನು ಪರಿಗಣಿಸದೆ ಕೂಗುತ್ತಿದ್ದಾರಂತಲ್ಲಾ, ಥೂತ್ತೇರಿ!!

* * *

ಅತ್ತ ಶಿವಮೊಗ್ಗದ ಕಡೆಯಿಂದ ಶಾನೆ ಸ್ವಾರಸ್ಯಕರವಾದ ಸುದ್ದಿಯೊಂದು ಬಂದಿದೆ. ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ಮಂಜುನಾಥ್ ಗೌಡರಿಂದ ಧನ ಸಹಾಯ ಪಡೆದು ಕೊಬ್ಬಿದ ಬಿಜೆಪಿಗಳು ಅವರನ್ನು ಪಾರ್ಟಿಗೆ ಸೇರಿಸಿಕೊಂಡು ಸಂಪೂರ್ಣ ಸುಲಿಗೆ ಮಾಡಿದ್ದರು. ಆದರೀಗ ಕಾಂಗ್ರೆಸ್‌ನಲ್ಲಿರುವ ಮಂಜು ನಾಥ ಗೌಡರ ಬಗ್ಗೆ ಸಿಐಡಿ, ಸಿಬಿಐ ತನಿಖೆಯಾಗಬೇಕೆಂದು ಕೂಗುತ್ತಿವೆಯಂತಲ್ಲಾ. ಅತ್ತ ಅರಗದ ಜ್ಞಾನೇಂದ್ರ ಎಂಬುವವನು ಎಂಪಿಎಂ ಅಧ್ಯಕ್ಷನಾಗಿದ್ದಾಗ ಕೋಟ್ಯಾನು ಕೋಟಿ ನಷ್ಟವುಂಟುಮಾಡಿರುವುದು ಈ ಬಿಜೆಪಿಗಳ ಗಮನಕ್ಕೆ ಈವರೆಗೂ ಬಂದಿಲ್ಲ, ಬದಲಿಗೆ ಪಾರ್ಟ್‌ಟೈಂ ರೈತಸಂಘದ ಲೀಡರುಗಳು ಭದ್ರಾವತಿಗೆ ಹೋಗಿ ಟೈರಿಗೆ ಬೆಂಕಿಹಚ್ಚಿ ಘೋಷಣೆ ಕೂಗಿದರಂತಲ್ಲಾ. ಕರ್ನಾಟಕದ ಜನ ಹಾಗೇ ಸೂಕ್ಷ್ಮವಾಗಿ ನೋಡಿದ್ದಾದರೆ ಸದರಿ ಚಳವಳಿಗಳು ತಮ್ಮ ಪ್ರಾಮಾಣಿಕತೆ ಕಳೆದುಕೊಂಡು ಹಾಸ್ಯಾಸ್ಪದವಾಗು ತ್ತಿರುವುದಕ್ಕೆ ಕಾರಣಗಳು ಕಾಣಿಸುತ್ತವೆ. ಜೈಲಲ್ಲಿದ್ದ ಜನಾರ್ದನ ರೆಡ್ಡಿಯನ್ನು ಭೇಟಿ ಮಾಡಿ ಬಂದಿದ್ದ ಹೈನಾತಿ ಗಿರಾಕಿಗಳು ಚಳವಳಿಗಳಲ್ಲಿ ತುಂಬಿರುವುದೇ ಕಾರಣವೆಂದು ಚಳವಳಿಗಳನ್ನ ಕಂಡರಾಗದ ಸೋಮಾರಿಗಳ ವ್ಯಾಖ್ಯಾನವಾಗಿದೆಯಲ್ಲಾ, ಥೂತ್ತೇರಿ!!! ■





ಇವತ್ತಿಗೆ (ಬುಧವಾರ) ಸರಿಯಾಗಿ ಎಂಬತ್ತೈದು ವರ್ಷಗಳ ಹಿಂದೆ ಮಾರ್ಚ್ 23, 1931 ರಂದು, ಶಹೀದ್ ಭಗತ್ ಸಿಂಗ್ ಮತ್ತು ಆತನ ಇಬ್ಬರು ಒಡನಾಡಿಗಳನ್ನು ಲಾಹೋರ್‌ನಲ್ಲಿ ಬ್ರಿಟಿಷರ ವಸಾಹತುಶಾಹಿ ಸರ್ಕಾರ ಗಲ್ಲಿಗೇರಿಸಿತು. ಹುತಾತ್ಮನಾದಾಗ ಭಗತ್ ಸಿಂಗ್‌ನ ವಯಸ್ಸು ಕೇವಲ 23 ವರ್ಷ. ಜೀವಮಾನವಿಡೀ ಆತನ ಮುಂದಿದ್ದರೂ, ಆತನ ಕುಟುಂಬದವರು ಮತ್ತು ಹಿತೈಷಿಗಳು ಎಷ್ಟೇ ಒತ್ತಾಯಿಸಿದರೂ ಭಗತ್ ಸಿಂಗ್ ಬ್ರಿಟಿಷರ ಕ್ಷಮೆಯಾಚಿಸಲಿಲ್ಲ.

ಬದಲಾಗಿ ತನ್ನ ಕೊನೆಯ ಕೋರಿಕೆ ಮತ್ತು ಒಡಂಬಡಿಕೆಯಲ್ಲಿ, ಬ್ರಿಟಿಷರು ತನ್ನ ವಿರುದ್ಧ ಮಾಡಿದ್ದ ಆರೋಪಕ್ಕೆ ಬದ್ಧರಾಗಿದ್ದರೆ, ತಾನು ಬ್ರಿಟಿಷರ ವಿರುದ್ಧ ಯುದ್ಧ ಸಾರಿದ್ದಕ್ಕೆ ಮರಣದಂಡನೆ ವಿಧಿಸಿದ್ದು ಸರಿಯಾದದ್ದಾಗಿದ್ದರೆ ತನ್ನನ್ನು ಯುದ್ಧ ಕೈದಿಯಂತೆ ನಡೆಸಿಕೊಳ್ಳಬೇಕೆಂದೂ, ತನ್ನನ್ನು ಗಲ್ಲಿಗೇರಿಸದೆ ಗುಂಡು ಹಾರಿಸಿ ತನ್ನ ಪ್ರಾಣವನ್ನು ಅಂತ್ಯಗೊಳಿಸಬೇಕೆಂದೂ ಆಗ್ರಹಿಸಿದ್ದ.

ಅದೇ ಪತ್ರದಲ್ಲಿ ಬ್ರಿಟಿಷರ ಮತ್ತು ಭಾರತೀಯ 'ಪರಾವಲಂಬಿಗಳಿಂದ' ಭಾರತದ ದುಡಿಯುವ ವರ್ಗ ಶೋಷಣೆಯಿಂದ ಹೇಗೆ ಮುಕ್ತವಾಗಬೇಕೆಂಬ ತನ್ನ ಚಿಂತನೆಗಳನ್ನೂ ಹಂಚಿಕೊಂಡಿದ್ದ.

ಇವತ್ತು ದೇಶದ ವಿವಿಧ ಕಡೆಗಳಲ್ಲಿ ಭಗತ್ ಸಿಂಗ್ ನೆನಪಿನಲ್ಲಿ 'ಶಹೀದ್ ದಿನ'ವನ್ನು ಆಚರಿಸಲಾಗುತ್ತಿದೆ. ಅದೇ ಹೊತ್ತಿನಲ್ಲಿ ಭಾರತೀಯ ಜನತಾ ಪಕ್ಷವು ತನ್ನ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ 'ರಾಷ್ಟ್ರೀಯತೆ'ಯನ್ನೇ ತನ್ನ ರಣಕಹಳೆಯಾಗಿ ಉಪಯೋಗಿಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಶಹೀದ್ ಭಗತ್ ಸಿಂಗ್ ಮತ್ತು ಆರೆಸ್ಸೆಸ್‌ನ ಹಿಂದೂತ್ವ ಸಿದ್ಧಾಂತವನ್ನು ರೂಪಿಸಿದ ವಿ.ಡಿ. ಸಾವರ್ಕರ್ ಎಂಬ ರಣಹೇಡಿಯ ರಾಜಕೀಯ ನಿಲುವು ಮತ್ತು ದೃಷ್ಟಿಕೋನಗಳನ್ನು ಹೋಲಿಸಿ ನೋಡುವುದು ಅತ್ಯವಶ್ಯಕವಾಗಿದೆ.

ಕ್ರಾಂತಿಕಾರಿ ಹೋರಾಟಗಾರನಾಗಿದ್ದ ಸಾವರ್ಕರ್‌ಗೆ ಐವತ್ತು ವರ್ಷಗಳ ಜೈಲುವಾಸವನ್ನು ವಿಧಿಸಿ 1911ರಲ್ಲಿ ಬ್ರಿಟಿಷ್ ಸರ್ಕಾರ ಕುಖ್ಯಾತ ಸೆಲ್ಯುಲರ್ ಜೈಲಿಗೆ ದೂಡಿತು. ಆಗ ಸಾವರ್ಕರ್ ವಯಸ್ಸು 28 ವರ್ಷ. ಜೈಲಿಗೆ ಹೋದ ಒಂದು ತಿಂಗಳಲ್ಲೇ ಸಾವರ್ಕರ್ "ನನ್ನನ್ನು ಬಿಡುಗಡೆಮಾಡಿ, ನಿಮ್ಮ ದಮ್ಮಯ್ಯ" ಎಂದು ಬೇಡಿಕೊಂಡು ಪತ್ರವೊಂದನ್ನು ಬರೆದ. ಆದರೆ ಬ್ರಿಟಿಷ್ ಸರ್ಕಾರ ಆತನತ್ತ ತಿರುಗಿಯೂ ನೋಡಲಿಲ್ಲ. 1913ರಲ್ಲಿ ಆತ ಹಲವಾರು ಬಾರಿ "ನನ್ನನ್ನು ಭಾರತದ ಮುಖ್ಯ ಭೂಭಾಗದಲ್ಲಿರುವ ಜೈಲಿಗಾದರೂ ವರ್ಗಾಯಿಸಿ" ಎಂದು ಬೇಡಿಕೊಂಡು ಮನವಿಗಳನ್ನು ಸಲ್ಲಿಸಿದ. 1920ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಮುಖ್ಯ ನಾಯಕರಾಗಿದ್ದ ಮಹಾತ್ಮ ಗಾಂಧಿ ಮತ್ತು ಬಾಲಗಂಗಾಧರ್ ತಿಲಕ್ ಅವರುಗಳು ಬ್ರಿಟಿಷ್ ಸರ್ಕಾರ ಬೇಷರತ್ತಾಗಿ ಸಾವರ್ಕರ್‌ನನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಗಾಂಧಿ ಒತ್ತಾಯಿಸಿದ್ದಕ್ಕೋ ಅಥವಾ ಸಾವರ್ಕರ್ ದೈನೇಸಿಯಾಗಿ ಬೇಡಿಕೊಂಡಿದ್ದಕ್ಕೋ, 1921ರಲ್ಲಿ ಆತನನ್ನು ಅಂಡಮಾನ್ ದ್ವೀಪದಲ್ಲಿರುವ ಸೆಲ್ಯುಲರ್ ಜೈಲಿನಿಂದ ಮಹಾರಾಷ್ಟ್ರದ ರತ್ನಗಿರಿ ಜೈಲಿಗೆ ವರ್ಗಾಯಿಸಲಾಯಿತು. ಕೊನೆಗೆ 1924ರಲ್ಲಿ ಬ್ರಿಟಿಷ್ ಸರ್ಕಾರ ಆತನನ್ನು ಜೈಲಿನಿಂದ ಬಿಡುಗಡೆ ಮಾಡಿತು. ಹದಿಮೂರು ವರ್ಷ ಜೈಲಿನಲ್ಲಿದ್ದು ಹೊರಬಂದಾಗ ಸಾವರ್ಕರ್‌ಗೆ 41 ವರ್ಷ ವಯಸ್ಸಾಗಿತ್ತು.

ಜೈಲಿನಲ್ಲಿದ್ದಾಗ ಸಾವರ್ಕರ್ ಸ್ವಾತಂತ್ರ ಸಂಗ್ರಾಮಕ್ಕಿಂತಲೂ ಹೆಚ್ಚು ಚಿಂತಿಸಿದ್ದು ಹಿಂದೂ ರಾಷ್ಟ್ರೀಯ ವಾದದ ಬಗ್ಗೆ. ಆದ್ದರಿಂದಲೇ ಆತ ರತ್ನಗಿರಿ ಜೈಲಿನಲ್ಲಿದ್ದಾಗ 'ಹಿಂದೂತ್ವ: ಹಿಂದೂ ಅಂದರೆ ಯಾರು' ಎಂಬ ಪ್ರಬಂಧವನ್ನು ಬರೆದ. ಅದೇ ಆನಂತರ ಆರೆಸ್ಸೆಸ್ ಎಂಬ ಕೋಮುವಾದಿ ಸಂಘಟನೆಗೆ ಸಿದ್ಧಾಂತವಾಯಿತು.

"ಸರ್ಕಾರವು ತನ್ನ ವಿಶಾಲ ವೈವಿಧ್ಯಮಯ ಔದಾರ್ಯ ಮತ್ತು ಕೃಪೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ನಾನು ಇಂಗ್ಲಿಷ್ ಸರ್ಕಾರದ ಸಾಂವಿಧಾನಿಕ ಪ್ರಗತಿ ಮತ್ತು ನಿಷ್ಠೆಯ ಪ್ರಬಲ ವಕ್ತಾರನಾಗುತ್ತೇನೆ" ಎಂದು ಬ್ರಿಟಿಷ್ ಸರ್ಕಾರಕ್ಕೆ ಮಾತು ಕೊಟ್ಟಿದ್ದ ಸಾವರ್ಕರ್ ಜೈಲಿನಿಂದ ಹೊರಬಿದ್ದ ನಂತರವೂ ಕೊಟ್ಟ ಮಾತಿನಂತೆ ನಡೆದುಕೊಂಡ. 1966ರಲ್ಲಿ ತನ್ನ 83ನೇ ವಯಸ್ಸಿನಲ್ಲಿ ತೀರಿಕೊಳ್ಳುವತನಕ ಆತ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸುವುದಿರಲಿ, ಆತ ಅದರತ್ತ ತಲೆ ಕೂಡ ಹಾಕಲಿಲ್ಲ. ಬದಲಾಗಿ ಹಿಂದೂ ಸಭಾ ಎಂಬ ಸಂಘಟನೆ ಸ್ಥಾಪಿಸಿ ಅಲ್ಪಸಂಖ್ಯಾತರ ವಿರುದ್ಧ ಕೆಂಡಕಾರುವುದು, ಮರುಮತಾಂತರ ಮಾಡುವುದು, ಹಿಂದಿ ಮಾತ್ರ ದೇಶದ ಭಾಷೆ ಆಗಬೇಕೆಂದು ಒತ್ತಡ ತರುವುದು, ಹಿಂದೂತ್ವ ಸಿದ್ಧಾಂತವನ್ನು ಇನ್ನಷ್ಟು ಗಟ್ಟಿಗೊಳಿಸುವುದು... ಇಂತಹ ಕೃತ್ಯಗಳಲ್ಲೇ ತನ್ನನ್ನು ತೊಡಗಿಸಿಕೊಂಡ.

ಸಾವರ್ಕರ್ ತರಹದವರು ಭಾರತದಲ್ಲಿ ಮುಸಲ್ಮಾನರಿಗೆ ಸ್ಥಾನಮಾನ ಇರುವುದಿಲ್ಲ ಎಂದು ಹೇಳಲಾರಂಭಿಸಿದ್ದರಿಂದಲೇ ಹಲವು ಮುಸಲ್ಮಾನರು ಪ್ರತ್ಯೇಕ ದೇಶಕ್ಕೆ ಒತ್ತಾಯಿಸಲಾರಂಭಿಸಿದ್ದು.

ಇಂತಹ ಹೇಡಿಯನ್ನು ಆರೆಸ್ಸೆಸ್ ಮತ್ತು ಅದರ ಪರಿವಾರ 'ವೀರ' ಎಂದು ಕೊಂಡಾಡುತ್ತದೆ. ಪಾರ್ಲಿಮೆಂಟಿನಲ್ಲಿ ಮಹಾತ್ಮ ಗಾಂಧಿಯ ಭಾವಚಿತ್ರದ ಎದುರಲ್ಲೇ ಈತನ ಭಾವಚಿತ್ರವನ್ನು ನೇತುಹಾಕುತ್ತದೆ. ಈತನ ಹಿಂದೂತ್ವ ಸಿದ್ಧಾಂತವನ್ನು ಆಧರಿಸಿ ಬಾಬ್ರಿ ಮಸೀದಿಯನ್ನು ಕೆಡವುತ್ತದೆ. ಅಲ್ಪಸಂಖ್ಯಾತರ ವಿರುದ್ಧ ಧರ್ಮ ಮತ್ತು ಆಹಾರವನ್ನು ನೆಪವಾಗಿಟ್ಟುಕೊಂಡು ದಾಳಿ ಮಾಡುತ್ತದೆ, ಮಹಿಳೆಯರನ್ನು ಥಳಿಸುತ್ತದೆ, ದಲಿತರ ಕೊಲೆ ಮಾಡಿಸುತ್ತದೆ.

ಯಾರು ನಿಜವಾಗಲೂ ವೀರ, ಯಾರು ನಿಜವಾಗಲೂ ನೀಚ ಎಂದು ನಿರ್ಧರಿಸಲು ಶಹೀದ್ ಭಗತ್ ಸಿಂಗ್ ಮತ್ತು ಸಾವರ್ಕರ್ ಬ್ರಿಟಿಷ್ ಸರ್ಕಾರಕ್ಕೆ ಬರೆದಿದ್ದ ಪತ್ರಗಳನ್ನು ಓದಿ.


ಲಾಹೋರ್‌ನಲ್ಲಿರುವ ಭಗತ್‌ಸಿಂಗ್ ವೃತ್ತ


ಮೋದಿ: ಸಾವರ್ಕರ್ ಅನುಯಾಯಿ

ಶಹೀದ್ ಭಗತ್ ಸಿಂಗ್ ಅವರ ಕೊನೆಯ ಮನವಿ

ಗೆ,

ರಾಜ್ಯಪಾಲರು, ಪಂಜಾಬ್ ಪ್ರಾಂತ್ಯ

ಸರ್,

ಗೌರವದೊಂದಿಗೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ವೈಸರಾಯ್ ವರ ಲಾಹೋರ್ ಪಿತೂರಿ ವಿಶೇಷ ಅಧಿನಿಯಮದನ್ವಯ ಸ್ಥಾಪಿಸಿದ್ದ ಟಿಷ್ ನ್ಯಾಯಾಲಯವು 7ನೇ ಅಕ್ಟೋಬರ್, 1930ರಂದು ನಮಗೆ ರಣದಂಡನೆ ವಿಧಿಸಿರುತ್ತದೆ. ಇಂಗ್ಲೆಂಡಿನ ದೊರೆ ವಿರುದ್ಧ ಯುದ್ಧ ಸಾರಿದ್ದೇವೆ ಬ ಆಪಾದನೆ ನಮ್ಮ ಮೇಲಿದೆ.

ನ್ಯಾಯಾಲಯವು ಕಂಡುಕೊಂಡ ಈ ವಿಚಾರವು ಎರಡು ಊಹೆಗಳನ್ನು ಗೊಂಡಿದೆ.

ಮೊದಲನೆಯದಾಗಿ, ಇಂಗ್ಲೆಂಡ್ ಮತ್ತು ಭಾರತದ ನಡುವೆ ಯುದ್ಧ ಯುತ್ತಿದೆ; ಎರಡನೆಯದು, ನಾವದರಲ್ಲಿ ಭಾಗಿಯಾಗಿದ್ದೇವೆ; ಆದ್ದರಿಂದ ವು ನಿಜಕ್ಕೂ ಯುದ್ಧ ಕೈದಿಗಳು.


ಎರಡನೆಯದು ಒಂಥರಾ ನಮಗೇ ಹೆಗ್ಗಳಿಕೆ ತರುವ ವಿಚಾರ, ಇರಲಿ.

ಮೊದಲನೆಯ ಊಹೆಯ ಬಗ್ಗೆ ವಿವರವಾಗಿ ಹೇಳಬಯಸುವೆ. ಅಂಥಾ ಯುದ್ಧವೇನೂ ಇಲ್ಲವೆಂದು ಬಳಸಿದ ಪದ ಸೂಚಿಸುತ್ತದೆ. ಆದರೂ ಪದಶಃ ವನ್ನು ಭಾವಿಸೋಣ.

ಎಲ್ಲಿವರೆಗೆ ಭಾರತದ ಶ್ರಮಿಕರು ಮತ್ತು ನಮ್ಮ ಪ್ರಾಕೃತಿಕ ಸಂಪನ್ಮೂಲಗಳು ರಳೆಣಿಕೆಯ ಪರೋಪಜೀವಿಗಳಿಂದ ಶೋಷಣೆಗೊಳಗಾಗುತ್ತಿರುತ್ತದೋ ಲ್ಲಿವರೆಗೆ ಈ ಯುದ್ಧ ನಡೆಯುತ್ತಲೇ ಇರುತ್ತದೆ. ಈ ಶೋಷಕರು - ಶುದ್ಧ ಟಿಷರೇ ಇರಬಹುದು ಅಥವಾ ಬ್ರಿಟಿಷ್-ಭಾರತೀಯ ಮಿಶ್ರವರ್ಗ ರಬಹುದು, ನೂರಕ್ಕೆ ನೂರು ಭಾರತೀಯರೇ ಇರಬಹುದು. ಈ ೀಷಣೆಯನ್ನು ಮಿಶ್ರ ಅಥವಾ ಶುದ್ಧಾಂಗ ಭಾರತೀಯ ಅಧಿಕಾರಿ ವರ್ಗದ ೂಲಕ ನಡೆಸುತ್ತಿರಬಹುದು. ಇದ್ಯಾವುದೂ ವಸ್ತುಸ್ಥಿತಿಯಲ್ಲಿ ವ್ಯತ್ಯಾಸ ಮಾಡುತ್ತಿಲ್ಲ.

ನಮ್ಮ ಸಮಾಜದ ಮೇಲ್ವರ್ಗದ ಒಂದಷ್ಟು ನಾಯಕರಿಗೆ ಅಷ್ಟಿಷ್ಟು ನಾಯಿತಿ ನೀಡುವುದರ ಮೂಲಕ ನೀವು ಮುಖ್ಯವಾಹಿನಿಯನ್ನು ಒಂದಷ್ಟು ಧೀರಗೊಳಿಸಬಹುದು. ಅದು ತಾತ್ಕಾಲಿಕ.

ಈ ಯುದ್ಧದ ಮಧ್ಯದಲ್ಲಿ ಈ ಹೋರಾಟದ ಮುಂಚೂಣಿಯಲ್ಲಿರುವ ಂತಿಕಾರಿ ಪಕ್ಷವನ್ನು ಇತರರು ಕೈಬಿಟ್ಟರೂ ಪರವಾಗಿಲ್ಲ.



ನಮಗೆ ತೋರಿದ ಅನುಕಂಪಕ್ಕೆ ಈ ನಾಯಕರಿಗೆ ನಾವು ಋಣಿಯಾಗಿದ್ದೇವೆ. ಆದರೆ ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ನೆಲೆಯಿಲ್ಲದ, ಕಾಸಿಲ್ಲದ, ಸಂಗಾತಿಗಳೂ ಇಲ್ಲದ, ಮಹಿಳಾ ಶ್ರಮಿಕರ ಬಗ್ಗೆ ಶಾಂತಿ ಮಾತುಕತೆಯಲ್ಲಿ ಒಂದು ಮಾತೂ ವ್ಯಕ್ತಪಡಿಸದ ಇವರ ನಿರ್ಲಕ್ಷ್ಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಈ ಮಹಿಳೆಯರನ್ನು ಅಹಿಂಸಾ ತತ್ವದ ಆದರ್ಶದ ಶತ್ರುಗಳೆಂದು ಈ ನಾಯಕರು ಬಗೆದಿದ್ದಾರೆ. ಈ ನಾಯಕಿಯರು ಇಷ್ಟೂ ಗೊಣಗದೇ ತಮ್ಮ ಗಂಡಂದಿರು, ಅಣ್ಣತಮ್ಮಂದಿರು, ತಮ್ಮ ಬಂಧುಬಾಂಧವರನ್ನು ಈ ಯುದ್ಧಕ್ಕೆ ಧಾರೆಯೆರೆದಿದ್ದಾರೆ. ತಮ್ಮನ್ನೂ ಬಲಿಕೊಟ್ಟುಕೊಂಡಿದ್ದಾರೆ. ಇವರೆಲ್ಲಾ ಕಾನೂನುಬಾಹಿರ ವ್ಯಕ್ತಿಗಳು, ನಿಮ್ಮ ಸರ್ಕಾರದ ದೃಷ್ಟಿಯಲ್ಲಿ.

ಇವರ ಪರಿಶುದ್ಧ ಚಾರಿತ್ರ್ಯದ ಬಗ್ಗೆ ನಿಮ್ಮ ಏಜೆಂಟರು ತಲೆಬುಡವಿಲ್ಲದ ಕಥೆಗಳನ್ನು ಹೆಣೆಯಬಹುದು; ಆ ಮೂಲಕ ಪಕ್ಷದ ಹೆಸರಿಗೆ ಕಳಂಕ ತರುವ ಪ್ರಯತ್ನ ಮಾಡಬಹುದು.

ಇಷ್ಟಾದರೂ ಈ ಯುದ್ಧ ಮುಂದುವರಿಯುತ್ತದೆ. ಬೇರೆಬೇರೆ ಕಾಲದಲ್ಲಿ ಇದು ಬೇರೆ ಬೇರೆ ರೂಪಗಳನ್ನು ತಾಳಬಹುದು. ಈಗ ಪ್ರತ್ಯಕ್ಷ, ಇನ್ನೊಮ್ಮೆ ಗುಪ್ತ ಒಮ್ಮೆ ಪ್ರತಿಭಟನಾತ್ಮಕ, ಇನ್ನೊಮ್ಮೆ ಸಾವು-ಬದುಕಿನ ಭೀಕರ ಹೋರಾಟ. ಈ ದಾರಿಯ ಆಯ್ಕೆ- ಅದು ರಕ್ತಸಿಕ್ತವಾಗಿರುತ್ತೋ ಇಲ್ಲ ಸ್ವಲ್ಪ ಶಾಂತಿಯುತವಾಗಿರುತ್ತೋ ಅನ್ನುವುದು ನಿಮ್ಮ ಮೇಲೆ ನಿಂತಿದೆ. ನಿಮಗ್ಯಾವುದು ಇಷ್ಟವೋ ಅದನ್ನು ಆರಿಸಿಕೊಳ್ಳಿ. ಆದರೆ ಈ ಯುದ್ಧ ಸಣ್ಣಪುಟ್ಟ ಅರ್ಥಹೀನ ನೈತಿಕ ಸಿದ್ಧಾಂತಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಮುಂದುವರಿಯುತ್ತದೆ.

ಈ ಯುದ್ಧ ಇನ್ನಷ್ಟು ಚೈತನ್ಯದೊಂದಿಗೆ ಇನ್ನಷ್ಟು ದೃಢನಿಶ್ಚಯದೊಂದಿಗೆ, ಇನ್ನಷ್ಟು ಹುಚ್ಚು ಧೈರ್ಯದೊಂದಿಗೆ ಮುಂದುವರಿಯುತ್ತೆ, ಸಮಾಜವಾದಿ ಗಣರಾಜ್ಯ ಸ್ಥಾಪನೆ ಆಗುವವರೆಗೂ; ಈ ಸಾಮಾಜಿಕ ವ್ಯವಸ್ಥೆಯನ್ನು ಕಿತ್ತು ಹೊಸ ಸಾಮಾಜಿಕ ವ್ಯವಸ್ಥೆ ಸ್ಥಾಪನೆ ಆಗುವವರೆಗೂ. ಸಾಮಾಜಿಕ ಸಮೃದ್ಧಿ, ಎಲ್ಲಾ ರೀತಿಯ ಸಾಮಾಜಿಕ ಶೋಷಣೆ ಮುಕ್ತವಾದ ಸಾಮಾಜಿಕ ಸಮೃದ್ಧಿಯಿರುವ ವ್ಯವಸ್ಥೆಯಾಗಿರುತ್ತದೆ ಅದು. ಮನುಜಕುಲ ನಿಜವಾದ ಸ್ಥಾಯೀ ಶಾಂತಿಯ ಯುಗವನ್ನು ಪ್ರವೇಶಿಸುತ್ತದೆ.

ಸದ್ಯ ಭವಿಷ್ಯದಲ್ಲೇ ಅಂತಿಮ ಯುದ್ಧ ಉದ್ಘಾಟನೆಯಾಗುತ್ತದೆ. ಅಂತಿಮ ಪರಿಹಾರವೂ ದೊರಕುತ್ತದೆ. ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಶೋಷಣೆಯ ದಿನಗಳ ಕೊನೆ ಎಣಿಕೆ ಆರಂಭವಾಗಿದೆ. ಈ ಯುದ್ಧ ನಮ್ಮಿಂದ ಆರಂಭವಾಗಿಯೂ ಇಲ್ಲ, ನಮ್ಮ ಜೀವಗಳೊಂದಿಗೆ ಕೊನೆಯಾಗುವುದೂ ಇಲ್ಲ.

ನಮ್ಮ ವಿನೀತ ತ್ಯಾಗ ಈ ಸರಪಳಿಯ ಒಂದು ಕೊಂಡಿ ಅಷ್ಟೆ. ಈ ಸರಪಳಿ ಜತಿನ್ ದಾಸ್‌ನ ಅಸೀಮ ತ್ಯಾಗದಿಂದ; ಕಾಮ್ರೇಡ್ ಭಗವತಿ ಚರಣ್ ಅವರ ಧೀರೋದಾತ್ತ ಸಾವಿನಿಂದ, ನಮ್ಮ ಪ್ರೀತಿಯ ಯೋಧ ಚಂದ್ರಶೇಖರ್ ಆಜಾದ್ ಅವರ ಉಜ್ವಲ ಸಾವಿನಿಂದ ಹೊಳೆಯುತ್ತಿದೆ.

ಇನ್ನು ನಮ್ಮ ವಿಧಿಯ ಬಗ್ಗೆ. ಯಾವತ್ತು ಸಾಯಿಸಬೇಕೆಂದು ನಿಮಗೆ ಕಾಣಿಸುತ್ತೋ ಆವಾಗ ನೀವದನ್ನು ಮಾಡುತ್ತೀರಿ. ನಿಮಗೆ ಆ ಅಧಿಕಾರದ ಶಕ್ತಿ ಇದೆ. ಅಧಿಕಾರದಂಥಾ ಸಮರ್ಥನೆ ಈ ಜಗತ್ತಿನಲ್ಲಿ ಇನ್ಯಾವುದೂ ಇಲ್ಲ, ಶಕ್ತಿಯೇ ಸರಿ ಎಂಬ ವಾಕ್ಯ ನಮಗೂ ಗೊತ್ತು; ಅದು ನಿಮ್ಮನ್ನು ನಡೆಸುವ ಉಕ್ತಿ. ನಮ್ಮ ಕೇಸಿನ ನಡಾವಳಿ ಅದರ ಪುರಾವೆ.

ನಿಮ್ಮ ನ್ಯಾಯಾಲಯದ ತೀರ್ಪಿನ ಪ್ರಕಾರ ನಾವು ಯುದ್ಧ ಸಾರಿದ್ದೇವೆ, ಆದ್ದರಿಂದ ನಮ್ಮನ್ನು ಯುದ್ಧ ಕೈದಿಗಳಂತೆ ನಡೆಸಿಕೊಳ್ಳಿ. ನಮ್ಮನ್ನು ಅದೇ ರೀತಿ ನಡೆಸಿಕೊಳ್ಳಿ ಎಂದು ಘೋಷಿಸುತ್ತಿದ್ದೇವೆ. ನೇಣಿಗೇರಿಸುವ ಬದಲು ಬಂದೂಕಿನಲ್ಲಿ ಸುಟ್ಟುಬಿಡಿ.

ನ್ಯಾಯಾಲಯ ಹೇಳಿದ್ದನ್ನು ನೀವು ನಿಜವೆಂದು ಒಪ್ಪಿಕೊಂಡಿದ್ದೀರಿ ಎಂದು ಸಿದ್ಧ ಮಾಡಿ ತೋರಿಸಿ. ನೀವು ನಿಮ್ಮ ಮಿಲಿಟರಿಯ ತುಕಡಿಯೊಂದನ್ನು ಕಳಿಸಿ ನಮ್ಮನ್ನು ಸಾಯಿಸಬೇಕೆಂದು ನಾವು ವಿನಂತಿಸುತ್ತೇವೆ, ಇದು ನಮ್ಮ ಆಶಯ ಕೂಡಾ.

ನಿಮ್ಮ

ಭಗತ್ ಸಿಂಗ್, 1931, ಲಾಹೋರ್ ಜೈಲು.

ವಿ.ಡಿ.ಸಾವರ್ಕರ್ ಬ್ರಿಟಿಷರ ಕ್ಷಮೆ ಕೋರಿ ಬರೆದ ಪತ್ರ

ಗೃಹ ಸದಸ್ಯ

ಭಾರತ ಸರ್ಕಾರ ಇವರಿಗೆ,

ನಿಮ್ಮ ಅವಗಾಹನೆಗೆ ಈ ಕೆಳಕಂಡ ಅಂಶಗಳನ್ನು ತರಬಯಸುತ್ತೇನೆ:

1. ನಾನು ಜೂನ್ 1911ರಲ್ಲಿ ಇಲ್ಲಿಗೆ ಬಂದಾಗ ನನ್ನನ್ನು ಇತರ ದಿಗಳೊಂದಿಗೆ ಮುಖ್ಯ ಆಯುಕ್ತರ ಕಚೇರಿಗೆ ತರಲಾಯಿತು. ಅಲ್ಲಿ ನನ್ನನ್ನು " ಅಂದರೆ ಅಪಾಯಕಾರಿ ಕೈದಿ ಎಂದು ವರ್ಗೀಕರಿಸಲಾಯಿತು. ಳಿದವರನ್ನು ಈ ಪಟ್ಟಿಗೆ ಸೇರಿಸಿರಲಿಲ್ಲ. ಆಮೇಲೆ ನಾನು ಏಕಾಂತ ಶಿಕ್ಷೆಯಲ್ಲಿ ು ತಿಂಗಳು ಕಳೆಯಬೇಕಾಯಿತು. ಉಳಿದವರು ಹೀಗೆ ಇರಬೇಕಾಗಿ ರಲಿಲ್ಲ. ಆ ಸಮಯದಲ್ಲಿ ನನ್ನ ಕೈಗಳಲ್ಲಿ ರಕ್ತಸ್ರಾವ ಆಗುತ್ತಿದ್ದರೂ, ನಾರಿನ ಗ್ಗದಲ್ಲಿ ನನ್ನ ಕೈಗಳನ್ನು ಕಟ್ಟಲಾಗಿತ್ತು. ಆಮೇಲೆ ಜೈಲಿನ ಅತಿ ಕಠಿಣ ಸವಾದ ಎಣ್ಣೆ ಗಾಣದ ಕೆಲಸಕ್ಕೆ ಹಚ್ಚಲಾಯಿತು. ಈ ಎಲ್ಲಾ ಅವಧಿಯಲ್ಲೂ ವರ್ತನೆ ಅತೀ ಉತ್ತಮವಾಗಿತ್ತು ಆದರೂ ನನ್ನನ್ನು ಜೈಲಿನಿಂದ ಹೊರಗೆ ಸಲಿಲ್ಲ. ಉಳಿದವರನ್ನು ಕಳಿಸಲಾಗಿತ್ತು. ಅಲ್ಲಿಂದ ಇಲ್ಲಿವರೆಗೂ ನಾನು ೀ ಉತ್ತಮ ನಡವಳಿಕೆ ಕಾಪಾಡಿಕೊಂಡು ಬಂದಿದ್ದೇನೆ.

(2) ನನಗೆ ಬಡ್ತಿ ಕೇಳಿ ಮನವಿ ಸಲ್ಲಿಸಿದಾಗ ನಾನು ವಿಶೇಷ ದರ್ಜೆಯ ದಿಯಾದ್ದರಿಂದ ಬಡ್ತಿ ಸಾಧ್ಯವಿಲ್ಲ ಎಂಬ ಉತ್ತರ ಬಂತು. ಒಳ್ಳೆ ಆಹಾರ, ಶೇಷ ಸವಲತ್ತು ಕೇಳಿದಾಗ, "ನೀವು ಸಾಮಾನ್ಯ ಕೈದಿಗಳು, ಕೊಟ್ಟದ್ದನ್ನು ಣ್ಣಬೇಕು" ಎಂದರು. ವಿಶೇಷ ಕಷ್ಟಗಳಿಗೆ ಮಾತ್ರ ನಮ್ಮನ್ನು ವಿಶೇಷ ದಿಗಳೆಂದು ವರ್ಗೀಕರಿಸಿದಂತಿದೆ.

2. ಹೆಚ್ಚಿನ ಕೇಸ್‌ಮೆನ್‌ಗಳನ್ನು ಹೊರಗೆ ಕಳಿಸಿದಾಗ ನಾನೂ ನನ್ನ ಡುಗಡೆಗೆ ಮನವಿ ಸಲ್ಲಿಸಿದೆ. ನಾನು ಒಂದೋ ಎರಡೋ ಬಾರಿ ಮಾತ್ರ ರಗದ ಏಟಿಗೊಳಗಾಗಿದ್ದು. ಆದರೆ ಹತ್ತು ಹನ್ನೆರಡು ಬಾರಿ ಈ ಶಿಕ್ಷೆಗೆ ಗಾದವರನ್ನು ಬಿಡುಗಡೆ ಮಾಡಲಾಗಿದೆ, ಆದರೆ ನನ್ನನ್ನು ಮಾತ್ರ ಬಿಡುಗಡೆ ಡಿಲ್ಲ, ನಾನು ಅವರ ಕೇಸ್‌ಮೆನ್ ಆಗಿದ್ದೆ ಎಂಬ ಕಾರಣಕ್ಕೆ. ಆಮೇಲೆ ಯೇನು ನನ್ನ ಬಿಡುಗಡೆಯ ಆದೇಶ ಬರುವಾಗ, ಕೆಲವು ರಾಜಕೀಯ ದಿಗಳನ್ನು ಒಳಗೆ ತರಲಾಯಿತು. ನನ್ನನ್ನೂ ಮತ್ತೆ ಒಳಗೆ ತಳ್ಳಲಾಯಿತು.

3. ನಾನು ಭಾರತದ ಜೈಲಿನಲ್ಲಿದ್ದಿದ್ದರೆ ಈ ವೇಳೆಗೆ ನನಗೆ ಒಂದಷ್ಟು ನಾಯಿತಿ ಸಿಗುತ್ತಿತ್ತು, ಒಂದಷ್ಟು ಪತ್ರ ಬರೆಯಬಹುದಿತ್ತು, ಯಾರನ್ನಾದರೂ ಟಿ ಮಾಡಬಹುದಿತ್ತು, ನಾನು ಬೇರೆಡೆ ಕಳಿಸುವ ಕೈದಿಯಾಗಿದ್ದರೂ ನನ್ನ ಡುಗಡೆಯಾಗುತ್ತಿತ್ತು ಇಷ್ಟರ ವೇಳೆಗೆ. ಅಥವಾ ರಜಾದಲ್ಲಿ ಹೊರಗೆ ಹೋಗಿ ರಬಹುದಿತ್ತು, ನನಗೆ ಭಾರತದ ಜೈಲಿನ ಸವಲತ್ತೂ ಇಲ್ಲ, ವಸಾಹತು ಯಮಗಳ ಅನುಕೂಲವೂ ಇಲ್ಲದಂತಾಗಿದೆ.

4. ಆದ್ದರಿಂದ ನೀವು ಕೃಪೆ ಮಾಡಿ, ನನ್ನ ಈ ಸ್ಥಿತಿಗೆ ಕೊನೆ ಹಾಡಿ ಂದೋ ನನ್ನನ್ನು ಭಾರತದ ಜೈಲಿಗೆ ಕಳಿಸಬೇಕು ಇಲ್ಲ, ವಸಾಹತು ನಿಯಮಾನುಸಾರ ಬಿಡುಗಡೆ ಮಾಡಬೇಕು. ನಾನು ವಿಶೇಷ ಪರಿಗಣನೆ ಕೇಳುತ್ತಿಲ್ಲ, ಬೇರೆ ಯ್ಯಾವ ದೇಶದಲ್ಲಾದರೂ ರಾಜಕೀಯ ಕೈದಿಯಾಗಿ ಅದನ್ನು ಕೇಳಬಹುದಾಗಿತ್ತು. ಅಪರಾಧವೇ ಚಾಳಿ ಆಗಿರುವ ಕೈದಿಗಳಿಗೆ ಕೊಡುವ ವಿನಾಯಿತಿಯನ್ನಷ್ಟೇ ನಾನು ಕೇಳುತ್ತಿದ್ದೇನೆ. ಜೈಲಿನಲ್ಲಿ ಕಾಯಂ ಆಗಿ ಕೊಳೆ ಹಾಕುವ ಈಗಿನ ಯೋಜನೆಯಿಂದಾಗಿ ನನಗೆ ಯಾವುದೇ ಬದುಕಿನ ಆಸೆ ಇಲ್ಲದಂತಾಗಿದೆ. ಜೀವಾವಧಿ ಶಿಕ್ಷೆ ಅನುಭವಿಸುವವರ ಮಾತು ಬೇರೆ. ಆದರೆ ನನ್ನೆದುರು ನನ್ನ ಬಾಳಿನ ಮುಂದಿನ ಐವತ್ತು ವರ್ಷ ಕುಣಿಯುತ್ತಿದೆ. ಉಳಿದ ಕಡುಪಾಪಿ ಕೈದಿಗಳು ತಮ್ಮ ಜೀವನ ನೇರ್ಪು ಮಾಡಿಕೊಳ್ಳುವ ಕೇಳುವ ವಿನಾಯಿತಿಗಳೂ ನನಗಿಲ್ಲವಾದರೆ, ನಾನು ಬದುಕುವ ಶಕ್ತಿ ಉಳಿಸಿಕೊಳ್ಳುವುದಾದರೂ ಹೇಗೆ? ನನ್ನನು ದಯವಿಟ್ಟು ಭಾರತದ ಜೈಲಿಗೆ ಕಳಿಸಿ. ಅಲ್ಲಿ ನನಗೆ 1) ಅವಧಿ ವಿನಾಯಿತಿ ಸಿಗಬಹುದು. 2) ನಾಲ್ಕು ತಿಂಗಳಿಗೊಮ್ಮೆ ಬಂದು ಬಾಂಧವರು ನಮ್ಮನ್ನು ಭೆಟ್ಟಿ ಮಾಡುವ ಅವಕಾಶವಾದರೂ ಇದೆ. ಜೈಲಿನಲ್ಲಿರುವ ನತದೃಷ್ಟರಿಗೆ ತಮ್ಮ ಆತ್ಮೀಯರನ್ನು ನೋಡುವುದು ಎಂಥಾ ಸಂತಸದ ವಿಚಾರ. 3) ಇನ್ನೊಂದು ಅಂಶ ಕಾನೂನು ಲೆಕ್ಕದ್ದಲ್ಲ, ನೈತಿಕ ಕೋರಿಕೆ, ಏನೆಂದರೆ 14 ವರ್ಷ ಜೈಲು ಶಿಕ್ಷೆ ಅನುಭವಿಸಿದ ಕಾರಣ ಬಿಡುಗಡೆಗೆ ಅರ್ಹನಿದ್ದೇನೆ. 4) ಪತ್ರ ಬರೆಯುವುದು ಇತ್ಯಾದಿ ಅನುಕೂಲಗಳಿವೆ. ಒಂದು ವೇಳೆ ಭಾರತದ ಜೈಲಿಗೆ ಕಳಿಸುವುದು ಶಕ್ಯವಿಲ್ಲವೆಂದಾದರೆ ನನ್ನನ್ನು ಬಿಡುಗಡೆ ಮಾಡಿ ನಾನು ಭರವಸೆಯಲ್ಲಿ ಬದುಕುವ ಆಸೆ ನೀಡಿ. ಉಳಿದ ಕೈದಿಗಳಿಗೆ ನೀಡಿದ ವಿನಾಯಿತಿಯಂತೆ ಐದು ವರ್ಷ ಆದ ಮೇಲೆ ಕುಟುಂಬವನ್ನು ಭೇಟಿ ಮಾಡಲು ಜಾಮೀನು ಮೇಲೆ ಕಳಿಸಿಕೊಡಿ. ಇವನ್ನು ನೀವು ಮನ್ನಿಸಿದರೆ, ಇನ್ನು ಒಂದೇ ಒಂದು ಬೇಡಿಕೆ ಇದೆ. ಅದೇನೆಂದರೆ ನಾನು ಮಾಡಿದ ತಪ್ಪಿಗಷ್ಟೆ ನಾನು ಹೊಣೆ ಹೊರತು ಉಳಿದವರು ಮಾಡಿದ್ದಕ್ಕಲ್ಲ. ದುರಂತವೆಂದರೆ, ಇಲ್ಲಿ ಇಪ್ಪತ್ತು ರಾಜಕೀಯ ಕೈದಿಗಳಿದ್ದಾರೆ. ಎಲ್ಲರೂ ಅಶಾಂತ ಯುವಕರು. ಅತ್ತ ಜೈಲಿನ ನಿಯಮಾವಳಿಗಳ ಪಟ್ಟಿ. ಒಬ್ಬರಲ್ಲದಿದ್ದರೆ ಇನ್ನೊಬ್ಬ ಈ ನಿಯಮಗಳನ್ನು ಆಗಾಗ್ಗೆ ಉಲ್ಲಂಘಿಸಿಯೇ ಇರುತ್ತಾರೆ. ಆ ಕಾರಣಕ್ಕೆ ಎಲ್ಲರಿಗೂ ಬಿಗಿ ಮಾಡುವುದು ಅನ್ಯಾಯ. ಇದರಿಂದಾಗಿ ನನಗೆ ಬಿಡುಗಡೆಯ ಅವಕಾಶ ಸಿಗುವುದೇ ಅನುಮಾನ.

ಕೊನೆಯಲ್ಲಿ, ನಾನು 1911ರಲ್ಲಿ ನೀಡಿದ ಕ್ಷಮಾದಾನದ ಮನವಿಯನ್ನು ತಾವೊಮ್ಮೆ ಪರಾಂಬರಿಸಿ ಅದು ಒಪ್ಪಿಗೆಯಾಗುವಂತೆ ಭಾರತ ಸರ್ಕಾರಕ್ಕೆ ಕಳಿಸಿಕೊಡುವಿರಾ?

ಇತ್ತೀಚೆಗೆ ಭಾರತದಲ್ಲಾಗುತ್ತಿರುವ ಬೆಳವಣಿಗೆಗಳು ಸಾಂವಿಧಾನಿಕ ಹಾದಿಯನ್ನು ತೆರೆದಿವೆ. 1906-7ರ ಕ್ಷೋಭೆಯುಕ್ತ ಸಂದರ್ಭವು ನಮ್ಮನ್ನು ಮಾಯೆಯಲ್ಲಿ ಶಾಂತಿ ಮತ್ತು ಪ್ರಗತಿಯ ಹಾದಿ ತಪ್ಪಿಸಿ ಅಡ್ಡದಾರಿಯ ಮುಳ್ಳಿನ ಹಾದಿ ಹಿಡಿಯುವಂತೆ ಮಾಡಿತು. ಈಗ ಭಾರತ ಮತ್ತು ಮನುಜಕುಲದ ಬಗ್ಗೆ ಸದಾಶಯವಿರುವ ಯಾವೊಬ್ಬನೂ ಕುರುಡಾಗಿ ಈ ಹಾದಿ ತುಳಿಯಲಾರ.



ಆದ್ದರಿಂದ ಸರ್ಕಾರವು ತನ್ನ ವಿಶಾಲ ವೈವಿಧ್ಯಮಯ ಔದಾರ್ಯ ಮತ್ತು ಕೃಪೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ನಾನು ಇಂಗ್ಲಿಷ್ ಸರ್ಕಾರದ ಸಾಂವಿಧಾನಿಕ ಪ್ರಗತಿ ಮತ್ತು ನಿಷ್ಠೆಯ ಪ್ರಬಲ ವಕ್ತಾರನಾಗುತ್ತೇನೆ. ಈ ನಿಷ್ಠೆಯೇ ಪ್ರಗತಿಗಿರುವ ಮೂಲ ಶರತ್ತು.

ನಾವು ಜೈಲಿನಲ್ಲಿರುವಷ್ಟು ದಿನ ಮಹಾರಾಣಿಯವರ ಸಾವಿರಾರು ಭಾರತೀಯ ಪ್ರಜೆಗಳಿಗೆ ನಿಜವಾದ ಹರ್ಷವಿರಲು ಸಾಧ್ಯವಿಲ್ಲ. ಯಾಕೆಂದರೆ ರಕ್ತಸಂಬಂಧ ಹೆಚ್ಚು ಗಟ್ಟಿ. ಆದರೆ ನಮ್ಮನ್ನು ಬಿಡುಗಡೆ ಮಾಡಿದರೆ ಪ್ರಜೆಗಳು ಸಹಜವಾಗಿ ಹರ್ಷೋದ್ಗಾರ ಮಾಡುವುದಲ್ಲದೇ ಈ ಸರ್ಕಾರಕ್ಕೆ ಕೃತಜ್ಞರಾಗಿರುತ್ತಾರೆ. ಸೇಡು ತೀರಿಸಿಕೊಳ್ಳುವುದಕ್ಕಿಂತ ನಮ್ಮನ್ನು ಕ್ಷಮಿಸಿ ನಮ್ಮನ್ನು ಸರಿದಾರಿಗೆ ತರುವ ಗುಣ ಈ ಸರ್ಕಾರಕ್ಕಿದೆ.

ಸಾಂವಿಧಾನಿಕ ಹಾದಿಗೆ ನನ್ನ ಪರಿವರ್ತನೆ, ನನ್ನನ್ನೇ ಆದರ್ಶವಾಗಿಟ್ಟುಕೊಂಡಿರುವ ನೂರಾರು ಹಾದಿತಪ್ಪಿದ ಯುವಕರನ್ನು ಮತ್ತೆ ಸರಿದಾರಿಗೆ ತರಲೂ ಅನುವು ಮಾಡಿಕೊಡುತ್ತದೆ. ನಾನು ಯಾವುದೇ ರೀತಿಯಲ್ಲಾದರೂ ಸರ್ಕಾರದ ಸೇವೆ ಮಾಡಲು ಸಿದ್ಧನಿದ್ದೇನೆ. ಯಾಕೆಂದರೆ ಇದು ನನ್ನ ಅಂತಸ್ಸಾಕ್ಷಿಗನುಗುಣವಾಗಿದೆ. ನನ್ನ ಮುಂದಿನ ನಡವಳಿಕೆಯೂ ಹೀಗೇ ಇರುತ್ತದೆ. ನನ್ನನ್ನು ಜೈಲಿನಲ್ಲಿರಿಸಿದರೆ ಈ ಅನುಕೂಲ ಇಲ್ಲವಷ್ಟೆ.

ಶಕ್ತಿವಂತರಷ್ಟೇ ಕರುಣಾಳುಗಳಾಗಿರುವುದು ಸಾಧ್ಯ. ಹಾದಿ ತಪ್ಪಿದ ಮಗ ಹೆತ್ತವರಂತಿರುವ ಸರ್ಕಾರದ ಬಾಗಿಲಿಗಲ್ಲದೇ ಇನ್ನೆಲ್ಲಿಗೆ ಬರಲು ಸಾಧ್ಯ?

ನೀವು ನಾನು ಹೇಳಿದ ಈ ಅಂಶಗಳನ್ನು ಪರಿಗಣಿಸುತ್ತೀರಿ ಎಂಬ ನಂಬುಗೆಯಲ್ಲಿದ್ದೇನೆ.

ವಿ.ಡಿ ಸಾವರ್ಕರ್

ಸೆಲ್ಯುಲರ್ ಜೈಲ್, 1913

ಅನುವಾದದ ಬಗ್ಗೆ

ನಾನು ಪಿಯುಸಿಯಲ್ಲಿ ಆರೆಸ್ಸೆಸ್‌ನಲ್ಲಿದ್ದವನು. ಸಾವರ್ಕರ್ ಪುಸ್ತಕ, ಬಾಬು ರಾವ್ ಪಟೇಲ್ ಅವರ ಆಚೆಯ ಓದಿ ಬೆಳೆದವನು. ಆಮೇಲೆ ಪ್ರೌಢಾವಸ್ಥೆಗೆ ಬಂದಾಗ ಆರೆಸ್ಸೆಸ್ ಪ್ರಕಟಣೆಗಳಿಂದಾಚೆ ಇರುವ ಮೂಲ ಪುಸ್ತಕಗಳನ್ನು ಓದಿ ಎಂಥಾ ಸುಳ್ಳುಗಳನ್ನು ಹೆಣೆದು ನಮ್ಮನ್ನು ವಂಚಿಸಿದರು ಎಂದು ಗೊತ್ತಾಯಿತು. ಭಗತ್ ಸಿಂಗ್ ಬಗ್ಗೆ ನೆಟ್ಟಗೆ ಓದಿಕೊಂಡದ್ದು ನಲವತ್ತು ದಾಟಿದ ಮೇಲೆ. ಆ ಬಗ್ಗೆ ನನಗೆ ಲಜ್ಜೆ ಇದೆ. ಈಗ ಇವೆರಡನ್ನೂ ಅನುವಾದ ಮಾಡುವಾಗ ಎಂಥಾ ವೈರುಧ್ಯದ ಮಾಹಿತಿ ನಮ್ಮೆದುರಿಗಿದೆ, ಆದರೂ ಅವನ್ನು ಮರೆಮಾಚಿ ಆರೆಸ್ಸೆಸ್ ಹುಡುಗರ ತಲೆ ತೊಳೆಯುತ್ತಿದೆ ಎಂಬುದನ್ನು ನೆನೆಸಿಕೊಂಡರೆ ಗಾಬರಿ ಆಗುತ್ತಿದೆ. ಇವೆರಡನ್ನು ಅನುವಾದ ಮಾಡುವಾಗ ತೀವ್ರ ಭಾವೋದ್ವೇಗಕ್ಕೆ ಒಳಗಾದೆ.

ಭಗತ್ ಸಿಂಗ್ ಪತ್ರ ಮನಸ್ಸನ್ನು ಕೃತಜ್ಞತೆಯಲ್ಲಿ ಮುಳುಗಿಸಿದರೆ, ಸಾವರ್ಕರ್ ಪತ್ರ ಅನುವಾದಿಸಿದಾಗ ಅಮೇಧ್ಯ ತುಳಿದ ಅನುಭವವಾಯಿತು.

■ ಕೆ.ಪಿ.ಸುರೇಶ

ದರ್ಶನ್ ಡೈವೋರ್ಸ್‌ಗೆ 40 ಕೋಟಿ?

ಗಾಡ್‌ಫಾದರ್‌ಗಳು ಗಾಡ್‌ಮದರ್‌ಗಳು ಉದ್ದಂಡ ನಾಯಕರು ಇತ್ಯಾದಿ ಇತ್ಯಾದಿ ತೋಲಾಂಡಿಗಳೆಲ್ಲರ ಚೌಕಾಸಿ ಪಂಚಾಯ್ತಿಗಳೆಲ್ಲ ಒಂದು ಹಂತಕ್ಕೆ ಬಂತೆಂದರೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತಾತನ ಪತ್ನಿ ವಿಜಯಲಕ್ಷ್ಮಿಯ ಡೈವೋರ್ಸ್ ಹೆಚ್ಚೂಕಮ್ಮಿ ನಲವತ್ತು ಕೋಟಿಗೆ ಚುಕ್ತಗೊಳ್ಳುತ್ತದೆ!

ಈತನಕ ನಟ ಸುದೀಪ್ ತನ್ನ ಮಲೆಯಾಳಿ ಪತ್ನಿಗೆ ಕೊಟ್ಟ ಡೈವೋರ್ಸ್ ಪರಿಹಾರದ ಮೊತ್ತವಾದ ಹತ್ತೊಂಭತ್ತು ಕೋಟಿಯೇ ಕನ್ನಡ ಚಿತ್ರಲೋಕ ಕಂಡ ಅತೀ ದೊಡ್ಡ ಮೊತ್ತವಾಗಿತ್ತು. ಈಗ ಚಾಲೆಂಜಿಂಗ್ ಸ್ಟಾರ್‌ನ ಸರದಿ. ಪತ್ನಿಯ ಮೇಲೆ ಕೈಮಾಡಿ ದರ್ಶನ್ ಜೈಲು ಕಂಡ. ಪೊಲೀಸ್ ಲಾಕಪ್ಪಿನ ರುಚಿಯುಂಡ. ಇಷ್ಟೆಲ್ಲಾ ಅವಮಾನ ಅಪನಿಂದನೆಗಳ ನಂತರವಾದರೂ ಪಾಠ ಕಲಿತನೇ ಎಂದರೆ ಈಗ ಮತ್ತೆ ಪತ್ನಿಯಿದ್ದ ಅಪಾರ್ಟ್‌ಮೆಂಟಿಗೆ ನುಗ್ಗಿ ಎರಡನೇ ಬಾರಿ ಪೊಲೀಸ್ ಆತಿಥ್ಯಕ್ಕೆ ಸಿಲುಕಿದ್ದಾನೆ. ಕಾಂಗ್ರೆಸ್ ಸರ್ಕಾರ ಮತ್ತು ಅಂಬಿಯ ಮಂತ್ರಿಗಿರಿಯಿಲ್ಲದೆ ಹೋಗಿದ್ದರೆ ದರ್ಶನ್ ಈ ಬಾರಿಯೂ ಕಂಬಿ ಎಣಿಸಬೇಕಾಗಿತ್ತು. ಪ್ರೆಸ್ಟೀಜ್ ಅಪಾರ್ಟ್‌ಮೆಂಟಿನ ಕಾವಲುಗಾರ ದೇವರಾಜ್ ನೀಡಿದ ದೂರೇ ಸಾಕಿತ್ತು. ಪಿತಾಮಹ ಅಂಬಿಯ ಅಧಿಕಾರ ದರ್ಶನ್‌ನ ಜೈಲುಯೋಗವನ್ನು ಬದಲಾಯಿಸಿತು. ಅಲ್ಲಿಗೆ ಒಂದಂತೂ ನಿಕ್ಕಿಯಾಗಿತ್ತು, ಏನೆಂದರೆ ದರ್ಶನ್ ಮತ್ತಾತನ ಪತ್ನಿ ವಿಜಯಲಕ್ಷ್ಮಿಯ ಸಂಬಂಧ ಹಳಸಿ ಎಷ್ಟೋ ದಿನಗಳಾಗಿವೆ. ಮುರಿದ ಮನಸ್ಸುಗಳು ಮತ್ತೆಂದೂ ಕೂಡಲಾರದ ಹಂತಕ್ಕೆ ಬಂದು ನಿಂತು ವರ್ಷವೇ ಕಳೆದಾಗಿದೆ. ಹೆಚ್ಚೂಕಮ್ಮಿ ಎರಡು ವರ್ಷಗಳ ಕಾಲ ಪತಿ-ಪತ್ನಿ ಪ್ರತ್ಯೇಕವಾಗಿರುತ್ತಾರೆಂದರೆ ಪರಸ್ಪರ ಮಾತುಕತೆಗೂ ಆಸಕ್ತಿ ಉಳಿದಿಲ್ಲವೆಂದರೆ ಅದು ಮತ್ತೆಂದಿಗೂ ಸರಿಹೋಗುವ ಸಂಬಂಧವಾಗಿ ಉಳಿದಿಲ್ಲ!


ಅಂಬಿಯ ಚೌಕಾಸಿ

ಉಳಿದಿದ್ದರೆ ಪತ್ನಿ ವಿಜಯಲಕ್ಷ್ಮಿಯಾದರೂ ಅರ್ಧ ಗಂಟೆ ಕಾಯಿಸಿಯೂ ಬಾಗಿಲೇಕೆ ತೆರೆಯುತ್ತಿರಲಿಲ್ಲ? ಗಂಡನ ಬಗ್ಗೆ ಸಣ್ಣದೊಂದು ವಿಶ್ವಾಸವಿದ್ದಿದ್ದರೂ ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವ ಮಟ್ಟಕ್ಕೆ ಬರುತ್ತಿರಲಿಲ್ಲ. ದರ್ಶನ್



ತನ್ನ ಪತ್ನಿಗೆ ಹೀನಾಯವಾಗಿ ಬೈದು ಅಸಹ್ಯದ ಬೈಗುಳ ವಾಟ್ಸ್‌ಪ್‌ಗಳಲ್ಲಿ ಹರಿದಾಡಿದ್ದು, ಅಪಾರ್ಟ್‌ಮೆಂಟಿನ ವಾಚ್‌ಮನ್ ವಿಜಯಲಕ್ಷ್ಮಿಯ ಮರ್ಜಿಯಿಲ್ಲದೆ ದರ್ಶನ್ ವಿರುದ್ಧ ಪೊಲೀಸರಿಗೆ ದೂರು ನೀಡುವುದು ಸಾಧ್ಯವೇ ಇಲ್ಲ' ಎಂಬುದು, ತಾನೇಕೆ ಬಾಗಿಲು ತೆಗೆಯಲಿಲ್ಲ ಎಂದು ಆಕೆ ಕೊಟ್ಟ ಕಾರಣಗಳು ಮತ್ತು ತನಗೊಬ್ಬ ಬಾಯ್‌ಫ್ರೆಂಡ್ ಇದ್ದಾನೆಂದು ದರ್ಶನ್ ಮಾಡಿದ ಆರೋಪಕ್ಕೆ ಆಕೆ ಕೊಟ್ಟ ಎದಿರೇಟು ಇತ್ಯಾದಿಗಳೆಲ್ಲವೂ ಮಾನಸಿಕವಾಗಿ ಗಂಡನ ವಿರುದ್ಧ ವಿಜಯಲಕ್ಷ್ಮಿ ತಿರುಗಿಬಿದ್ದಿದ್ದಾರೆಂದೇ ಅರ್ಥ. ಈಗಿದು 40 ಕೋಟಿಯ ದುಬಾರಿ ಡೈವೋರ್ಸ್ ಹಂತಕ್ಕೆ ಬಂದುನಿಂತಿದೆ.

ಒಂದು ಮೂಲದ ಪ್ರಕಾರ ಈಗಾಗಲೇ ಮಂತ್ರಿ ಅಂಬಿ ದರ್ಶನ್ ಪತ್ನಿ ವಿಜಯಲಕ್ಷ್ಮಿಯನ್ನು ಕರೆಸಿ ಒಂದು ಸುತ್ತು ಮಾತುಕತೆ ಮುಗಿಸಿದ್ದಾರೆ. ವಿಜಯಲಕ್ಷ್ಮಿಯ ಜೊತೆ ಆಕೆಯ ತಂಗಿ ಮತ್ತು ತಾಯಿಯನ್ನೂ ಕರೆಸಿಕೊಂಡ ಅಂಬಿ ಬುದ್ಧಿ ಹೇಳಿದ್ದಾರೆಂದೇ ಅಂಬಿ ಮನೆಯ ಮೂಲಗಳು ಖಚಿತಪಡಿಸುತ್ತಿವೆ. ಮಾರ್ಚ್ 12ರ ಶನಿವಾರ ತ್ಯಾಗರಾಜನಗರದ ಎಸಿಪಿ ಕಚೇರಿಗೆ ಮೈಸೂರಿನಿಂದಲೇ ನೇರವಾಗಿ ಬಂದಿದ್ದ ದರ್ಶನ್ ಅಲ್ಲಿ ಮುಚ್ಚಳಿಕೆ ಬರೆದುಕೊಟ್ಟದ್ದೇ ನೇರವಾಗಿ ಹೋಗಿದ್ದು ಅಂಬಿ ಮನೆಗೇ. ಆ ಹೊತ್ತಿಗಾಗಲೇ ದರ್ಶನ್ ಸಾಕಷ್ಟು ಮೆತ್ತಗಾಗಿದ್ದ ಎರಡನೇ ಬಾರಿ ತಾನು ಜೈಲುಪಾಲಾಗುವುದನ್ನು ತಪ್ಪಿಸಿದ್ದೇ ಅಂಬಿ ಎಂಬುದು ಆತನಿಗೆ ಮನದಟ್ಟಾಗಿತ್ತು, ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸರೇನಾದರೂ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ಕೊಟ್ಟ ದೂರಿಗೆ ಎಫ್‌ಐಆರ್ ದಾಖಲಿಸಿದ್ದರೆ ದರ್ಶನ್ ಸದ್ಯ ಜೈಲಿಂದ ಹೊರಬರುವುದು ಕಷ್ಟವಿತ್ತು.



ಇದನ್ನು ಚೆನ್ನಾಗೇ ಅರ್ಥೈಸಿಕೊಂಡಿದ್ದ ದರ್ಶನ್‌ಗೆ ಅಂಬಿಯನ್ನು ಮುಂದಿಟ್ಟುಕೊಂಡೇ ಪತ್ನಿ ವಿಜಯಲಕ್ಷ್ಮಿಯ ಹೆಸರಿನಲ್ಲಿದ್ದ ತನ್ನ ಆಸ್ತಿಯನ್ನೆಲ್ಲಾ ಮರುವಶಪಡಿಸಿಕೊಳ್ಳುವ ದುರಾಸೆ. ಪತ್ನಿ ವಿಜಯಲಕ್ಷ್ಮಿಯಿಂದ ಆತ ಮನಸು ಕಿತ್ತು ತುಂಬಾ ದಿನಗಳಾಗಿವೆ. 'ಸರಿಹೋಗಲ್ಲಾ, ಹೆಚ್ಚೂಕಮ್ಮಿ ಕೇಳಿದಷ್ಟು ಕೊಟ್ಟು ನೀಟಾಗಿ ಕೈತೊಳೆದುಕೊಂಡು ಬಿಡು. ಅದು ಬಿಟ್ಟು ಸುಮ್ಮನೇ ಬೀದಿರಂಪ ಮಾಡ್ಕೋಬೇಡ....' ಎಂದು ವರ್ಷದ ಹಿಂದೆಯೇ ಗೆಳೆಯ ಸುದೀಪ್ ತಲೆಗೆ ಐಡಿಯಾ ತುಂಬಿದ್ದ. 2011. ರ ಸೆಪ್ಟೆಂಬರ್ 9 ರಂದು ಮೊದಲ ಬಾರಿ ಜೈಲು ಕಂಡು ಪಡಬಾರದ ಹಿಂಸೆಪಟ್ಟು ಜೈಲಿಂದ ಬಂದ ನಂತರವಂತೂ ಪತ್ನಿ ವಿಜಯಲಕ್ಷ್ಮಿಯನ್ನು ಕಂಡರೇನೇ ದರ್ಶನ್‌ಗೆ ಪಿತ್ಥ ನೆತ್ತಿಗೇರುತ್ತಿತ್ತು.

ಎಲ್ಲವೂ ಆಸ್ತಿಗಾಗಿ?

ಇದೇ ಜಿದ್ದಿಗೆ ಬಿದ್ದ ದರ್ಶನ್ ಪತ್ನಿ ಮತ್ತು ಮಗುವನ್ನು ತನ್ನ ರಾಜರಾಜೇಶ್ವರಿನಗರದ ಬಂಗಲೆಯಿಂದ ಉಪಾಯವಾಗಿ ಹೊರಗಟ್ಟಿ ಬನಶಂಕರಿಯ ಪ್ರೆಸ್ಟೀಜ್ ಸೌತ್ ರಿಟ್ಜ್ ಅಪಾರ್ಟ್‌ಮೆಂಟಿಗೆ ಸಾಗಹಾಕಿದ್ದ. Out of Sight is out of mind ಎಂಬಂತೆ. ಪತ್ನಿ ವಿಜಯಲಕ್ಷ್ಮಿ ಬರುಬರುತ್ತಾ ದರ್ಶನ್‌ಗೆ ಫೋನ್ ಮಾಡುವುದನ್ನೇ ಬಿಟ್ಟುಬಿಟ್ಟಳು. ಇತ್ತಿಂದ ದರ್ಶನ್ ಏನಾದರೂ ಫೋನ್ ಮಾಡಿದನೆಂದರೆ ಎಷ್ಟು ಬೇಕೋ ಅಷ್ಟು ಮಾತಾಡಿ ಫೋನನ್ನು ಮಗ ವಿನೀಶ್ ಕೈಗಿಡುತ್ತಿದ್ದಳು. ಪತ್ನಿಯ ಹೆಸರಿಗೆ ಮಾಡಿಟ್ಟಿದ್ದ 65 ಕೋಟಿ ರೂಪಾಯಿಗಳ ಆಸ್ತಿಯ ಪಾಲೊಂದರ ಹೊರತಾಗಿ ಗಂಡಹೆಂಡಿರ ಮಧ್ಯೆ ಬೇರೆ ಯಾವುದೇ ಸಂಬಂಧವಿರಲಿಲ್ಲ. ಇದರ ಅತಿರೇಕವಾದದ್ದು ಮಾರ್ಚ್ 9ರ ಬುಧವಾರದಂದು. ಬಹುಶಃ ವಿಜಯಲಕ್ಷ್ಮಿಯೇನಾದರೂ ಅವತ್ತು ಬಾಗಿಲು ತೆಗೆದಿದ್ದರೆ ಆಕೆಯ ಯಾವ ಮೂಳೆ ಮುರಿಯುತ್ತಿತ್ತೋ. ಅದರ ಕೋಪವನ್ನು ದರ್ಶನ್ ಆಕೆಯ ಆಡಿ ಕಾರಿನ ಮೇಲೆ ಪ್ರಯೋಗಿಸಿದ್ದ. ಚಿಂದಿಯೆದ್ದ ಕಾರೇ ಆತನ ರಕ್ಕಸ ಮನಸ್ಥಿತಿಗೆ ಸಾಕ್ಷಿಯಾಗಿತ್ತು.

ಆದರೆ ದರ್ಶನ್‌ನ ಇಂಥ ಎಲ್ಲಾ ಪೈಶಾಚಿಕತೆಗೆ ಆತನ ಕುಡಿತವನ್ನೇ ಕಾರಣ ಮಾಡಿ ಕುಡಿದ ಮತ್ತಿನಲ್ಲಿ ಆತ ಮಾಡಿಕೊಂಡ ಅನಾಹುತವೆಂದು ವಿಷಯಾಲಾಪ ಮಾಡುವವರಿಗೆ ಒಂದು ಸಂಗತಿ ಗೊತ್ತಿರಲಿಕ್ಕಿಲ್ಲ. ಇದೆಲ್ಲದನ್ನೂ ಆತ ಪ್ರೀತಿಸಿ ಕೈಹಿಡಿದ, ಕಷ್ಟಕಾಲದಲ್ಲಿ ತನ್ನನ್ನು ಕಾಪಾಡಿದ ಪತ್ನಿಯ ಮೇಲಷ್ಟೇ ಏಕೆ ಎಸಗುತ್ತಿದ್ದಾನೆ?

ಕುಡಿದ ನಶೆಯಲ್ಲಿ ಮಾಡುವುದೇ ಆಗಿದ್ದರೆ ಬೇರೆ ಅನೇಕರಿಗೂ ಇದರ ಅನುಭವವಾಗಬೇಕಿತ್ತಲ್ಲವೆ?

ಅಂದರೆ ದರ್ಶನ್ ಕುಡಿಯುವುದೇ ಪತ್ನಿಯನ್ನು ಪೀಡಿಸಲು ಮತ್ತು ಪತ್ನಿಯನ್ನೇ ಏಕೆ ಪೀಡಿಸುತ್ತಾನೆಂದರೆ ಅದು ಆಕೆಯ ಹೆಸರಲ್ಲಿದ್ದ ಆಸ್ತಿಯ ಕಾರಣಕ್ಕೆ!

ಮೊದಮೊದಲು ತಾನು ದುಡಿದ ಬಹುತೇಕ ಸೊತ್ತನ್ನೆಲ್ಲ ದರ್ಶನ್ ತನ್ನ ಪತ್ನಿಯ ಹೆಸರಿಗೆ ಮಾಡಿದ್ದಕ್ಕೂ ಕಾರಣವಿತ್ತು. ಅದು ಇನ್‌ಕಂ ಟ್ಯಾಕ್ಸ್ ಇಲಾಖೆಯ ಮೇಲಿದ್ದ ಭೀತಿಗೆ. ಎಲ್ಲಿ ಆದಾಯ ತೆರಿಗೆ ಇಲಾಖೆ ತನ್ನ ಮೇಲೆ ಕಣ್ಣಿಡುತ್ತೋ ಎಂದೇ ಆಸ್ತಿಯನ್ನೆಲ್ಲ ತನ್ನ ಪತ್ನಿ ಹೆಸರಿಗೆ ವರ್ಗಾಯಿಸಿದ್ದ. ಮೈಸೂರಿನ ಟಿ. ನರಸೀಪುರ ರಸ್ತೆಯ ಆಲನಹಳ್ಳಿ ಪಕ್ಕದ ತೂಗುದೀಪ ಫಾರ್ಮ್ ಹೌಸ್ ತಂದೆಯ ಕಾಲಕ್ಕೆ ಖರೀದಿಸಿದ್ದು. ಅದನ್ನು ಅಭಿವೃದ್ಧಿಪಡಿಸಿದ್ದು ಬಿಟ್ಟರೆ ದರ್ಶನ್ ಅದಕ್ಕೆ ಮತ್ತಷ್ಟು ಭೂಮಿ ಖರೀದಿಸಿ ವಿಸ್ತರಿಸಿಯೂ ಇರಲಿಲ್ಲ. ಸರ್ಕಾರಿ ದಾಖಲೆಗಳಲ್ಲಿ ಅದಿನ್ನೂ ತಾಯಿ ಮೀನಾರ ಹೆಸರಲ್ಲೇ ಇದೆ. ಇದಲ್ಲದೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಒಂದನ್ನು ಕಟ್ಟಿಸಿ ಅದಕ್ಕೆ ತಾಯಿ ಮತ್ತು ಪತ್ನಿಯರನ್ನು ಪಾಲುದಾರರನ್ನಾಗಿಸಿದ್ದ. ನಂಜನಗೂಡು ಸಮೀಪ ಇಪ್ಪತ್ತೆಕರೆಯ ಮಾವಿನ ತೋಪು ಖರೀದಿಸಿ ಅದಕ್ಕೆ ತಮ್ಮ ದಿನಕರ್ ಮತ್ತು ಪತ್ನಿ ವಿಜಯಲಕ್ಷ್ಮಿಯನ್ನು ಜಂಟಿ ಒಡೆತನಕ್ಕೊಳಪಡಿಸಿದ್ದ.

65 ಕೋಟಿ?

ಇವಿಷ್ಟು ದರ್ಶನ್‌ನ ಮೈಸೂರಿನ ಸೊತ್ತುಗಳಾದರೆ ಇದರ ನಾಲ್ಕು ಪಟ್ಟು ಆಸ್ತಿ ಬೆಂಗಳೂರಿನಲ್ಲಿ ಖರೀದಿಸಿದ್ದ. ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ವಾರಿಯಲ್ ಬೇಕರಿ ಪಕ್ಕ 80x100 ಅಳತೆಯ ನಿವೇಶನದಲ್ಲಿ ಕಾಂಪ್ಲೆಕ್ಸ್ ಒಂದನ್ನು ಕಟ್ಟಿಸಿ ಅದನ್ನು ಪತ್ನಿ ವಿಜಯಲಕ್ಷ್ಮಿಯ ಹೆಸರಿಗೇ ಮಾಡಿದ್ದ. ತಿಂಗಳೊಂದಕ್ಕೆ ಇದರ ಬಾಡಿಗೆಯೇ ಎರಡು ಲಕ್ಷದಷ್ಟು ಬರುತ್ತಿತ್ತು, ಇವತ್ತಿಗೆ ಏನಿಲ್ಲವೆಂದರೂ ಇದು ಹತ್ತು ಕೋಟಿ ಬೆಲೆಬಾಳುತ್ತದೆ. ರಾಜರಾಜೇಶ್ವರಿ ನಗರದ ತನ್ನ ಬಂಗಲೆಯನ್ನೂ ತನ್ನ ಪತ್ನಿಯ ಹೆಸರಿಗೇ ಮಾಡಿದ್ದ. ಇದೂ ಕೂಡ ಹತ್ತರಿಂದ ಹನ್ನೆರಡು ಕೋಟಿ ಸೊತ್ತು. ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟಿನಲ್ಲಿ 100x 80 ಅಳತೆಯ ಭರ್ಜರಿ ನಿವೇಶನವೊಂದನ್ನು 2012 ರಲ್ಲೇ ಖರೀದಿಸಿದ್ದ, ದರ್ಶನ್ ಅದನ್ನೂ ಪತ್ನಿ ವಿಜಯಲಕ್ಷ್ಮಿಯ ಹೆಸರಲ್ಲೇ ನೋಂದಾಯಿಸಿದ್ದ. ಇವತ್ತಿಗದು ಕಮ್ಮಿಯೆಂದರೂ ಹನ್ನೆರಡು ಕೋಟಿಯ ಸೊತ್ತು. ಜೆಪಿನಗರದ 100x 60 ಸೈಟು, ಬನಶಂಕರಿಯ ಫ್ಲಾಟು, ಬನ್ನೇರುಘಟ್ಟ ರಸ್ತೆಯಲ್ಲಿ ಇತ್ತೀಚೆಗಷ್ಟೇ ಕಟ್ಟಿಸಿದ ಅಪಾರ್ಟ್‌ಮೆಂಟ್ ಇತ್ಯಾದಿಗಳೆಲ್ಲವನ್ನೂ ಪತ್ನಿ ವಿಜಯಲಕ್ಷ್ಮಿಯ ಹೆಸರಿಗೆ ಮಾಡಿಟ್ಟಿದ್ದ ದರ್ಶನ್ ಈ ಪೈಕಿ ಯಾವ್ಯಾವುದಕ್ಕೆ ತನ್ನ ಗಳಿಕೆಯ ಲೆಕ್ಕ ಕೊಟ್ಟಿದ್ದನೆ ಅಥವಾ ಬ್ಲಾಕ್‌ಮನಿ ಬಾಬತ್ತೆಂದು ಮುಚ್ಚಿಟ್ಟಿದ್ದನೋ ಗೊತ್ತಿಲ್ಲ.

ಅನ್ಯೋನ್ಯವಾಗೇ ಇದ್ದ ಸಂಸಾರದಲ್ಲಿ ಅನುಮಾನದ ಅಲೆಗಳೆದ್ದದ್ದು 2010 ರಲ್ಲಿ. ಅವಳು ನಿಖಿತಾ ತುಕ್ರಲ್. ಬೇರೆಲ್ಲ ಹೀರೋಯಿನ್‌ಗಳೊಂದಿಗೆ ಕಣ್ಣಾಮುಚ್ಚಾಲೆಗಷ್ಟೇ ಸೀಮಿತವಾಗಿದ್ದ ದರ್ಶನ್‌ನ ಮದೋನ್ಮಾದ ನಿಖಿತಾಳ ವಿಷಯದಲ್ಲಿ ಅತಿರೇಕದ ಹಂತ ತಲುಪಿದ್ದನ್ನು ವಿಜಯಲಕ್ಷ್ಮಿ ಸೂಕ್ಷ್ಮವಾಗೇ ಗಮನಿಸಿದ್ದಾಳೆ. ಮನೆಯಲ್ಲಿದ್ದ ಪತ್ನಿಗೆ ತನ್ನ ಶೂಟಿಂಗ್ ಐಲಾಟಗಳೇನೂ ಗೊತ್ತಾಗುವುದಿಲ್ಲ ಎಂದೇ ಭ್ರಮಿಸಿದ್ದ ದರ್ಶನ್‌ಗೆ ತನಗರಿವಿಲ್ಲದಂತೆ ಪತ್ನಿ ಬಾತ್ಮಿದಾರರನ್ನು ಬಿಟ್ಟಿದ್ದಾಳೆಂಬುದು ಹೇಗೆ ತಾನೇ ಗೊತ್ತಾಗಲು ಸಾಧ್ಯ?

ಯಾವತ್ತು ನಿಖಿತಾ ಸಂಗದ ವಿರುದ್ಧ ಮನೆಯಲ್ಲಿ ಪತ್ನಿಯ ಪ್ರತಿರೋಧ ಹೆಚ್ಚಾಯಿತೋ ದರ್ಶನ್ ತೀರ ಭಂಡಾಟಕ್ಕೆ ಬಿದ್ದವನೇ 'ಹೌದು ನಾನು ಗಂಡಸು. ಏನ್ ಬೇಕಾದ್ರೂ ಮಾಡ್ತೀನಿ. ತೆಪ್ಪಗೆ ಮನೆಯಲ್ಲಿ ಬಿದ್ದಿರಬೇಕು. ಇಲ್ಲಾಂದ್ರೆ ಆಸ್ತಿನೆಲ್ಲ ವಾಪಸ್ಸು ನನ್ನ ಹೆಸರಿಗೆ ಮಾಡು.....' ಎಂದು ಕುಡಿದು ಹುಚ್ಚನಂತೆ ಹಾವಳಿಗಿಳಿದಿದ್ದಾನೆ. ಅಲ್ಲಿಗೆ ಹಕೀಕತ್ತೇನೆಂಬುದು ಪತ್ನಿಗೆ ಅರ್ಥವಾಗಿದೆ. ಏನು ಬೇಕಾದ್ರೂ ಮಾಡ್ಕೋ ಆಸ್ತಿ ಬರೆದುಕೊಡಲ್ಲ ಎಂದಿದ್ದಾಳೆ. ಒಂದೆರಡು ಬಾರಿ ಮಗುವನ್ನೇ ಮುಗಿಸಿಬಿಡ್ತೀನಿ ಎಂದು ಹೆದರಿಸಲೆತ್ನಿಸಿದ್ದು, ಪತ್ನಿಯನ್ನು ಹೊಡೆಯಲೆಂದೇ ಕುಡಿಯುವುದು, ಪದೇಪದೇ ಪೀಡಿಸುವುದು ಮಾಡಿಬಿಟ್ಟರೆ ಹೆದರಿ ಆಸ್ತಿ ವರ್ಗಾಯಿಸಿಬಿಡುತ್ತಾಳೆಂಬುದು ಆತನ ಲೆಕ್ಕಾಚಾರವಾಗಿತ್ತು.

ಸಂದೇಶ್ ಸಂಧಾನ


ಅದೀಗ ಪತಿ-ಪತ್ನಿಯರನ್ನೇ ಬೇರ್ಪಡಿಸುವ ಹಂತಕ್ಕೆ, ಒಂದಲ್ಲ ಎರಡು ಸಾರಿ ಪೊಲೀಸ್ ಠಾಣೆಯ ಮೆಟ್ಟಲೇರುವ ಮಟ್ಟಕ್ಕೆ, ಹೊತ್ತಲ್ಲದ ಹೊತ್ತಲ್ಲಿ ದರ್ಶನ್ ಎಲ್ಲೆಲ್ಲಿಗೋ ನುಗ್ಗಿ ಹಾವಳಿಯಿಡುವ ಹಂತಕ್ಕೆ ಬಂದು ನಿಂತಿದೆ. ಹೆಚ್ಚೂಕಮ್ಮಿ ಎರಡು ವರ್ಷಗಳ ಕಾಲ ಪತಿ-ಪತ್ನಿ ಪರಸ್ಪರ ಮುಖವನ್ನೇ ನೋಡಲಾರದಷ್ಟು ಕಂದರದ ಆಳವಿದೆ. ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯಲ್ಲಿ ದೂರು ದಾಖಲಾದ ಸುದ್ದಿ ಬಂದಿದ್ದೇ ಮೈಸೂರಿಗೆ ಪರಾರಿಯಾಗಿ ಸಂದೇಶ್ ಪ್ರಿನ್ಸ್ ಹೋಟೆಲಿನಲ್ಲಿ ತಲೆಮರೆಸಿಕೊಂಡಿದ್ದ ದರ್ಶನ್ ಒಂದೆಡೆ ಅಂಬಿಯನ್ನೂ ಮತ್ತೊಂದೆಡೆ ಸಂದೇಶ್ ನಾಗರಾಜ್‌ರನ್ನೂ ಕಾಡಿಬೇಡಿ ದಮ್ಮಯ್ಯಗರೆದಿದ್ದಾನೆ. ಸದ್ಯ ಜೈಲು ಪಾಲಾಗುವುದೇನೋ ತಪ್ಪಿದೆಯಾದರೂ ಪತ್ನಿಯ ಹೆಸರಿಗಿರುವ ಆಸ್ತಿ ಮತ್ತೆ ತನ್ನ ಕೈ ಸೇರಬಹುದೆಂಬ ದರ್ಶನ್ ನಿರೀಕ್ಷೆ ದಿನೇದಿನೇ ಕ್ಷೀಣಿಸುತ್ತಿದೆ.

ಏನೇ ಆದರೂ ನಾನು ಆಸ್ತಿ ವರ್ಗಾಯಿಸುವುದಿಲ್ಲ, ಬೇಕಿದ್ದರೆ ಕೋರ್ಟಿಗೆ ಹೋಗಲಿ, ಕೋರ್ಟು ಏನು ತೀರ್ಮಾನ ಕೊಡುತ್ತೋ ಅದಕ್ಕೆ ನಾನು ತಲೆ ಬಾಗ್ತೀನಿ. ಅವನೀಗ ಹಿಂದಿನ ದರ್ಶನ್ ಆಗಿ ಉಳಿದಿಲ್ಲ, ನನ್ನ ಬಾಳನ್ನೇನೋ ಹಾಳು ಮಾಡಿದ್ದಾಯ್ತು, ನಾನೇನೂ ಬಿಟ್ಟಿಗೆ ಬಿದ್ದಿಲ್ಲ, ಅವನಿಂದ ಮಗು ಪಡೆದು ನಾನೇನು ಭಿಕ್ಷೆ ಬೇಡಬೇಕಾ? ಅವನು ಈ ಮಟ್ಟಕ್ಕೆ ಬರೋದಕ್ಕೆ ನಾನೂ ಕೂಡ ಕಾರಣ ಅಲ್ಲವಾ? ನ್ಯಾಯದ ಪ್ರಕಾರ ಆಸ್ತಿಯಲ್ಲಿ ನನ್ನದೂ ಪಾಲಿದೆಯಲ್ಲ; ಅಂದಮೇಲೆ ಯಾವ ಕಾರಣಕ್ಕೆ ನನ್ನ ಹೆಸರಿಗೆ ಮಾಡಿ ಈಗ ಯಾವ ಯಾವ ಕಾರಣಕ್ಕೆ ವಾಪಸ್ಸು ತನ್ನ ಹೆಸರಿಗೆ ಮಾಡು ಎನ್ನುವುದು? ದಿನಕ್ಕೊಬ್ಬಳ ಜೊತೆ ಚಕ್ಕಂದ ಆಡೋದಕ್ಕೆ ನನ್ನ ಹೆಸರಲ್ಲಿರೋ ಆಸ್ತಿ ಬರೆದುಕೊಡಬೇಕಾ?

40 ಕೋಟಿ?

ಇದು ವಿಜಯಲಕ್ಷ್ಮಿ ತನ್ನನ್ನು ಮನವೊಲಿಸಲು ಬಂದ ಸಂದೇಶ್ ನಾಗರಾಜ್‌ರನ್ನು ಕೇಳಿದ ಪ್ರಶ್ನೆ. ಈಗಾಗಲೇ ಒಂದು ಸುತ್ತು ಅಂಬಿಯೂ ಮಾತಾಡಿಸಿಯಾಗಿದೆ. 'ನೋಡಮ್ಮಾ ಏನೇ ಗಂಡಹೆಂಡತಿ ಸಮಸಮ ಅಂತ ಕಾನೂನು ಹೇಳಿದ್ರೂ ಧರ್ಮಕರ್ಮ ನೋಡಬೇಕಲ್ವಾ? ಅಷ್ಟೆಲ್ಲಾ ಆಸ್ತಿ ನಿನ್ನ ಹೆಸರಿಗೆ ಮಾಡವ್ನೆ ಅಂದಮೇಲೆ ನಿನ್ನನ್ನ ನಂಬಿದ ತಪ್ಪಿಗೆ ಇದೇನಾ ನಿನ್ನ ಬಹುಮಾನ?' ಎಂದೆಲ್ಲಾ ಅಂಬಿ ವಿಜಯಲಕ್ಷ್ಮಿಯನ್ನು ಕುಟುಕಿದರಂತೆ- ಇದರರ್ಥ ಕೊಟ್ಟಷ್ಟು ಈಸ್ಕೊಂಡು ಜಾಗ ಖಾಲಿ ಮಾಡು ಅಂತಲಾ?

ಬಹುಶಃ ಮುಂದಿನ ವಾರದ ಹೊತ್ತಿಗೆ ದರ್ಶನ್-ವಿಜಯಲಕ್ಷ್ಮಿ ಸಂಬಂಧದ ಭವಿಷ್ಯ ನಿರ್ಧಾರವಾಗಬಹುದು. ಸಂದೇಶ್ ನಾಗರಾಜ್ ಪ್ರತ್ಯೇಕವಾಗೇ ವಿಜಯಲಕ್ಷ್ಮಿಯ ತಾಯಿ ಮತ್ತು ತಂಗಿಯನ್ನು ಕಂಡು ಮಾತಾಡಿದ್ದಾರಂತೆ. ವಿಜಯಲಕ್ಷ್ಮಿಗೂ ಬುದ್ಧಿ ಹೇಳಿದ್ದೇನೆ ಎಂದು ತನ್ನ ಆಪ್ತರೊಬ್ಬರ ಬಳಿ ಸಂದೇಶ್ ಹೇಳಿಕೊಂಡಿದ್ದೂ ರಹಸ್ಯವಾಗುಳಿದಿಲ್ಲ, ಅಂಬಿ ಮನೆಯಲ್ಲಿ ಕಳೆದ ವಾರೆ ಪತಿ



ಪತ್ನಿಯರಿಬ್ಬರನ್ನೂ ಮುಖಾಮುಖಿ ಕೂರಿಸಿಕೊಂಡು ಮಾಡಿದ ಪಂಚಾಯ್ತಿಯ ಪೂರ್ಣ ಚಿತ್ರಣವೂ ಸಿಗುತ್ತಿಲ್ಲ. ಆದರೆ ವಿಜಯಲಕ್ಷ್ಮಿ ತನಗೆ ಕನಿಷ್ಠ 40 ಕೋಟಿಯಾದರೂ ಬೇಕೇಬೇಕೆಂದು ಪಟ್ಟು ಹಿಡಿದಿದ್ದಾಳೆಂಬುದು ಆಕೆಯ ವಿರುದ್ಧ ದರ್ಶನ್ ತೇಲಿಬಿಡುತ್ತಿರುವ ಕುಚೋದ್ಯವಾ ಗೊತ್ತಾಗುತ್ತಿಲ್ಲ.

ವಿಜಯಲಕ್ಷ್ಮಿಯ ಕೈಹಿಡಿದ ಮೇಲೆ ದರ್ಶನ್ ಗಳಿಸಿದ ಒಟ್ಟು ಮೊತ್ತ ಏನಿಲ್ಲವೆಂದರೂ ನೂರು ಕೋಟಿಗೂ ಅಧಿಕ. ಈ ಪೈಕಿ 65 ಕೋಟಿಯಷ್ಟು ವಿಜಯಲಕ್ಷ್ಮಿಯ ಹೆಸರಿಗಾದರೆ ಮಿಕ್ಕಂತೆ ಐವತ್ತು ಕೋಟಿಯಷ್ಟು ದರ್ಶನ್ ತನ್ನ ಹೆಸರಲ್ಲೇ ಖರೀದಿಸಿದ್ದಾನೆ, ತಮ್ಮ ದಿನಕರ್ ಹೆಸರಿನ ಔಟ್‌ಡೋರ್ ಯೂನಿಟ್, ತೂಗುದೀಪ್ ಹೆಸರಲ್ಲಿ ಚಿತ್ರ ನಿರ್ಮಾಣ ಕಂಪನಿ, ತಾಯಿ ಹೆಸರಲ್ಲಿ ಮೈಸೂರಿನ ಅಪಾರ್ಟ್‌ಮೆಂಟ್ ಇತ್ಯಾದಿ ಪತ್ನಿಯ ಹೊರತಾಗಿಯೂ ದರ್ಶನ್ ಮಾಡಿದ್ದಾನೆ. ಈ ಎಲ್ಲ ಆಸ್ತಿಯ ಮೇಲೆ ವಿಜಯಲಕ್ಷ್ಮಿಯೇನಾದರೂ ಪಾಲು ಕೋರಿ ದಾವೆ ಹೂಡಿದಳೆಂದರೆ ಅರ್ಧ ಸೊತ್ತು ಕೈಬಿಡುವುದಂತೂ ಶತಸ್ಸಿದ್ಧ. ಇದೆಲ್ಲ ಲೆಕ್ಕ ಹಾಕಿಯೇ ಬಂದಷ್ಟು ಲಾಭ ಹೋದಷ್ಟು ರೋಮ ಎಂಬ ನಿರ್ಧಾರಕ್ಕೆ ದರ್ಶನ್ ಬಂದಿರಬೇಕು. 40 ಕೋಟಿ ಕೊಟ್ಟು ಕೈತೊಳೆದುಕೊಂಡರೆ ರಗಳೆಯೂ ತಪ್ಪಿದಂತೆ ತನಗೆ ಬೇಕಾದ ಸುಂದರಿಯೂ ದಕ್ಕಿದಂತೆ ಎಂಬ ಮನಸ್ಥಿತಿಗೆ ದರ್ಶನ್ ಬಂದಿರಬೇಕು.

ಬಹುಶಃ ಇನ್ನೆರಡು ವಾರದಲ್ಲಿ ದರ್ಶನ್ ದಾಂಪತ್ಯ ಮತ್ತು ವಿಚ್ಛೇದನದ ಪರಿಹಾರದ ಮೊತ್ತವೂ ಸ್ಪಷ್ಟ ರೂಪ ಪಡೆಯಬಹುದು!

■ ರಾ. ಸೋಮನಾಥ್

ಭಾರತ್ ಮಾತಾ ಕಿ ಜೈ ಅಂದರೆ?



ವಾರಣಾಸಿಯ ಕಾಶಿ ವಿದ್ಯಾಪೀಠದಲ್ಲಿನ ಭಾರತಮಾತೆಯ ಮಂದಿರದಲ್ಲಿ ಭಾರತದ ನಕಾಶೆಯ ಉಬ್ಬುಚಿತ್ರವನ್ನೇ 'ಭಾರತಮಾತೆ' ಎಂದು ಕರೆಯಲಾಗುವುದು. ಶಿವಪ್ರಸಾದ ಗುಪ್ತಾ ಮತ್ತು ದುರ್ಗಾಪ್ರಸಾದ ಖತ್ರಿ ಅವರು ನಿರ್ಮಿಸಿದ ಈ ಮಂದಿರವನ್ನು ಮಹಾತ್ಮ ಗಾಂಧಿ ಅವರು 1936ರಲ್ಲಿ ಉದ್ಘಾಟನೆ ಮಾಡಿದರು. ಎಲ್ಲ ಧರ್ಮಗಳ ಜನರ ಮಂದಿರವಿದು ಎಂದು ಅವರು ಶ್ಲಾಘಿಸಿದರು.

"ನಮಿಸುವೆ ಭಾರತಿ ತಾಯಿಗೆ
ಶಿರಬಾಗಿ ತಲೆಬಾಗಿ ಮಮತೆಯ
ಮೂರುತಿ ನೀನೆಂದಾ।
ಪುಣ್ಯ ಬೇಕು ಈ ಭೂಮಿಯಲಿ
ಹುಟ್ಟಲು ಭಾಗ್ಯವಂತರು ನಾವೆಂದಾ॥
.. ..
ಮಹ್ಮದ್ ಶರಣರು ಪ್ರೀತಿ ಮಾಡುವ
ದಿಕ್ಕದು ಭಾರತ ದೇಶೆಂದಾ।
ಅರಬ್ ದೇಶದಲಿ ಹುಟ್ಟದೆ
ಮನಸಿಲ್ಲಾ ನನ್ನ ಮನಸು ಭಾರತವೆಂದಾ।
ಅಲಿನಬಿ ಅನ್ಸಾರಿಗಳೆಲ್ಲ ನೆಲೆಸಿದ
ಈ ದೇಶ ಬಲು ಚೆಂದಾ॥

ಮಾವಿಯಾ ಎಜೀದಾ ಕ್ರೂರಿ
ನರಹಂತಕರ ಭಯದಿ ಓಡಿದರು ಜನರೆಲ್ಲಾ।
ಆಶ್ರಯ ಕೊಟ್ಟಿತು ಭಾರತ ಭೂಮಿಗೆ
ಸಜ್ದಾಮಾಡಿರಿ ಮರಿಬ್ಯಾಡೆಂದಾ।
ಈ ಹಿಂದ್‌ನ ಭೂಮಿ ಬಲು ಚೆಂದಾ॥

ಅಕ್ಕ ಅಲ್ಲಮರು ಬಸವ ಅಮೀನರು
ಹುಟ್ಟಿದ ದ್ರಾವಿಡ ನಾಡೆಂದ।
ತಾಯಿಯ ಮಮತೆಯ ಸರ್ವಜ್ಞ
ಭೂಮಿಗೆ ತಲೆ ಬಾಗಿರಿ ಮರಿಬ್ಯಾಡೆಂದಾ।
ಈ ಕರುಣ ಭೂಮಿಯೆ ಗುಣವೆಂದ॥

ಸಾಲುಗುಂದಿಪುರ ಜನ್ಮಭೂಮಿಯ
ಈ ಭವ್ಯ ಭಾರತ ದೇಶೆಂದ।
ಗುರುಪೀರಾ ಖಾದರಿ ಹುಟ್ಟಿದ
ಭೂಮಿಗೆ ಸಿದ್ಧಪರ್ವತದ ಕೂಸೆಂದ।
ಈ ಪುಣ್ಯಭೂಮಿಯೆ ಸ್ವರ್ಗೆಂದಾ॥"

- ಗುರು ಖಾದರಿಪೀರಾ

ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಸಾಲಗುಂದಾ ಗ್ರಾಮದ ಕನ್ನಡದ ಮೊದಲ ಸೂಫಿ ಕವಿ ಗುರು ಖಾದರಿಪೀರಾ (1822-1896) ಅವರು 175 ವರ್ಷಗಳಷ್ಟು ಹಿಂದೆ ಬರೆದ ಕವನವಿದು. ಆಗ ಭಾರತ ಇನ್ನೂ ಬ್ರಿಟಿಷ್ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟಿದ್ದಿಲ್ಲ. ಈಸ್ಟ್ ಇಂಡಿಯಾ ಕಂಪನಿ ಸರ್ಕಾರ ಇಡೀ ದೇಶವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವಲ್ಲಿ ತಲ್ಲೀನವಾಗಿತ್ತು. ಇಂಥ ಸಂದರ್ಭದಲ್ಲಿ ಈ ಸೂಫಿ ಸಂತ ದೇಶಪ್ರೇಮ ವ್ಯಕ್ತಪಡಿಸಿದ್ದು ನಮಗಿಂದು ದಾರಿದೀಪವಾಗಬೇಕಿದೆ.

19ನೇ ಶತಮಾನದಲ್ಲಿ ಭಾರತ ಅನೇಕ ಮಹಾರಾಜರು, ರಾಜರು ಮತ್ತು ಪಾಳೆಯಪಟ್ಟುಗಳಿಂದ ಕಿಕ್ಕಿರಿದು ತುಂಬಿತ್ತು. ಆ ಕಾಲದಲ್ಲೇ ಈ ಸೂಫಿ ಸಂತ ಭಾರತದ ಬಗ್ಗೆ ವ್ಯಕ್ತಪಡಿಸಿದ ರೀತಿ ಅನನ್ಯವಾಗಿದೆ. ಭಾರತಮಾತೆ ಅವರಿಗೆ ಮಮತೆಯ ಮೂರ್ತಿಯಾಗಿ ಕಾಣುತ್ತಿದ್ದಾಳೆ. ಇಂಥ ತಾಯಿಯನ್ನು ಪಡೆದ ನಾವು ಭಾಗ್ಯವಂತರು ಎಂದು ಅವರು ಹರ್ಷೋದ್ಗಾರ ತೆಗೆಯುತ್ತಾರೆ. ಭವ್ಯ ಭಾರತ ದೇಶಕ್ಕೂ ತಮ್ಮ ಹುಟ್ಟಿದ ಹಳ್ಳಿ ಸಾಲಗುಂದಿಪುರಕ್ಕೂ ಸಂಬಂಧ ಕಲ್ಪಿಸುವ ರೀತಿ ಭಾವಪೂರ್ಣವಾಗಿದೆ. ತಮ್ಮ ಜನ್ಮಭೂಮಿಯಾದ ಸಾಲಗುಂದಿಪುರದ ಭವ್ಯಭಾರತವನ್ನು ಪುಣ್ಯಭೂಮಿ ಎಂದು ಕೊಂಡಾಡುತ್ತಾರೆ.

ಅಕ್ಕ ಮಹಾದೇವಿ, ಅಲ್ಲಮಪ್ರಭುಗಳು, ಬಸವಣ್ಣನವರು ಮತ್ತು ವಿಜಯಪುರದ ಮಹಾನ್ ಸೂಫಿ ಖ್ವಾಜಾ ಅಮೀನುದ್ದೀನ ಅವರಂಥ ಮಹಾಮಹಿಮರು ಜನ್ಮತಾಳಿದ ಈ ಭೂಮಿಗೆ ತಲೆಬಾಗಲು ಮರೆಯಬೇಡಿರೆಂದು ಖಾದರಿಪೀರಾ ಅವರು ಮನವಿ ಮಾಡುತ್ತಾರೆ.

ಮುಹಮ್ಮದ್ ಪೈಗಂಬರರ ಅಳಿಯ ಅಲಿ ಅವರು ಖಲಿಫಾ (ಆಡಳಿತಾಧಿಕಾರಿ) ಆಗಿದ್ದ ಸಂದರ್ಭದಲ್ಲಿ ಅವರೊಂದಿಗೆ ಮುಹಾವಿಯಾ ಭಿನ್ನಾಭಿಪ್ರಾಯ ಹೊಂದಿದ್ದರು. ಅಲಿ ಅವರ ನಂತರ ಮುಹಾವಿಯಾ ಕ್ರಿಸ್ತ ಶಕ 679 ರಿಂದ 683 ವರೆಗೆ ಖಲೀಫಾ ಆದರು. ನಂತರ ಅವರು ಪ್ರಜಾತಂತ್ರಕ್ಕೆ ವಿರುದ್ಧವಾಗಿ ತಮ್ಮ ಮಗ ಯಜೀದನನ್ನು ಖಲೀಫಾ ಮಾಡಿದರು. ಆತ ಇಸ್ಲಾಮಿ ಪ್ರಜಾಪ್ರಭುತ್ವದ ತತ್ವಗಳನ್ನು ಗಾಳಿಗೆ ತೂರಿ ಸರ್ವಾಧಿಕಾರಿಯಾದ. ಅಲ್ಲಿಗೆ ಖಿಲಾಫತ್ ವ್ಯವಸ್ಥೆ ಸ್ಥಗಿತಗೊಂಡಿತು. ಅಲಿ ಮತ್ತು ಫಾತಿಮಾರ ಮಕ್ಕಳಾದ ಹಸನ್ ಮತ್ತು ಹುಸೇನ್ ನೇತೃತ್ವದಲ್ಲಿ ಜನ ಯಜೀದನ ಸೈನ್ಯದ ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ಇರಾಕ್‌ನ ಕರ್ಬಲಾ ಪ್ರದೇಶದಲ್ಲಿ ಹೋರಾಡಿದರು. ಆ ಯುದ್ಧದಲ್ಲಿ ಹುಸೇನ್ ಹುತಾತ್ಮರಾದರು. ಯುದ್ಧದಲ್ಲಿ ಯಜೀದನ ಸೈನ್ಯ ಮುನ್ನಡೆ ಸಾಧಿಸಿತು. ಆ ವಿಷಮ ಸಂದರ್ಭದಲ್ಲಿ ಅನೇಕರು ಯಜೀದನ ಕ್ರೂರ ಸೈನ್ಯದಿಂದ ತಪ್ಪಿಸಿಕೊಂಡು ಭಾರತದ ಕಡೆಗೆ ಧಾವಿಸಿದರು. ಭಾರತ ಅವರಿಗೆ ಆಶ್ರಯ ಕೊಟ್ಟಿತು. ಅಂಥ ಭಾರತ ಭೂಮಿಗೆ ತಲೆ ಹಚ್ಚಿ ನಮಸ್ಕರಿಸಿರಿ ಎಂದು ಖಾದರಿ ಪೀರಾ ಅವರು ಇತಿಹಾಸವನ್ನು ನೆನಪಿಸುತ್ತ ಹೇಳುತ್ತಾರೆ.

ಮುಹಮ್ಮದ್ ಪೈಗಂಬರರು ಪ್ರೀತಿಸಿದ ಭಾರತ ದೇಶವಿದು. "ಅರಬ್ ದೇಶದಲಿ ಹುಟ್ಟದೆ ಮನಸಿಲ್ಲಾ ನನ್ನ ಮನಸು ಭಾರತವೆಂದಾ" ಎಂದು ಪೈಗಂಬರರು ಹೇಳಿರುವುದಾಗಿ ಅವರು ಪೈಗಂಬರರ ಹದಿಸ್ (ವಚನ) ಆಧಾರದ ಮೇಲೆ ತಿಳಿಸಿದ್ದಾರೆ. ಇಂಥ ಭಾರತ ದೇಶವನ್ನು ಸರ್ವರೂ ಗೌರವಿಸಬೇಕು ಎಂದು ಅವರು ಸೂಚಿಸಿದ್ದಾರೆ.

19ನೇ ಶತಮಾನದ ಕೊನೆಯ ಅವಧಿಯಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ 'ಭಾರತಮಾತಾ' ಪರಿಕಲ್ಪನೆ ಮೂಡಿಬಂದಿತು. 1873ರಲ್ಲಿ ಕಿರಣಚಂದ್ರ ಬ್ಯಾನರ್ಜಿ ಅವರ ನಾಟಕ 'ಭಾರತಮಾತಾ' ಮೊದಲಬಾರಿಗೆ ಪ್ರದರ್ಶನಗೊಂಡಿತು. 1882ರಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯ ಬರೆದ 'ಆನಂದಮಠ' ಕಾದಂಬರಿಯಲ್ಲಿ 'ವಂದೇ ಮಾತರಂ' ಸ್ತುತಿ ಪ್ರಕಟವಾಯಿತು. ನಂತರ ಅಬನೀಂದ್ರನಾಥ ಟಾಗೋರ್ ಅವರು ಭಾರತಮಾತೆಯ ಚಿತ್ರ ಬಿಡಿಸಿದರು. ತದನಂತರ ತಮಿಳು ಕವಿ ಸುಬ್ರಹ್ಮಣ್ಯ ಭಾರತಿ ಅವರು ಭಾರತಮಾತೆಯ ಕುರಿತು ಬರೆದರು. 'ಭಾರತಮಾತೆಗೆ ಜಯವಾಗಲಿ ಎಂದರೆ ಭಾರತದ ಜನಸಮುದಾಯಕ್ಕೆ ಜಯವಾಗಲಿ' ಎಂದು ಜವಾಹರಲಾಲ ನೆಹರೂ ಅವರು ವ್ಯಾಖ್ಯಾನಿಸಿದರು. ಆದರೆ ಇವರೆಲ್ಲರಿಗಿಂತ ಮೊದಲೇ ಕನ್ನಡದಲ್ಲಿ ಗುರು ಖಾದರಿಪೀರಾ ಅವರು ಬರೆದದ್ದು ಹೆಮ್ಮೆಯ ವಿಚಾರವಾಗಿದೆ.

ಮೊದಲ ಹುತಾತ್ಮ

18ನೇ ಶತಮಾನದಲ್ಲೇ ಫಕೀರ ಮಜ್ನು ಶಾ ಎಂಬ ಸೂಫಿಸಂತ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಹೋರಾಟ ಪ್ರಾರಂಭಿಸಿದ. ತನ್ನ 300 ಅನುಯಾಯಿಗಳನ್ನು ಒಗ್ಗೂಡಿಸಿ ಕ್ರಿಸ್ತಶಕ 1763ರಲ್ಲೇ ಬ್ರಿಟಿಷರ ವಿರುದ್ಧ ಬಂಡಾಯದ ಧ್ವಜ ಹಾರಿಸಿದ. ಆಗ ಆತನ ಬಲಗೈ ಬಂಟನಾಗಿದ್ದವನು ಭವಾನಿ ಪಾಠಕ್ ಎಂಬ ಸನ್ಯಾಸಿ. ಮಜ್ನು ಶಾ ಮತ್ತು ಭವಾನಿ ಪಾಠಕ ಅವರು ಒಂದಾಗಿ ರೈತರಲ್ಲಿ ಸ್ವಾತಂತ್ರ್ಯದ ಪ್ರಜ್ಞೆ ತುಂಬಿದರು. ಸಂಸ್ಕೃತಿ, ಧರ್ಮ ಮತ್ತು ಭಾವೈಕ್ಯದ ಮಹತ್ವವನ್ನು ತಿಳಿಸಿದರು.

ಮಹಾನ್ 'ಕಮಾಂಡರ್ ಇನ್ ಚೀಫ್' ಮಜ್ನು ಶಾ ಸಮರ್ಥ ಸಂಘಟಕನಾಗಿದ್ದ. ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಹೋರಾಡುತ್ತ ಮುನ್ನಡೆದ. ಭವಾನಿ ಪಾಠಕ, ದೇವಿ ಚೌಧುರಾಣಿ, ಚಿರಾಗ್ ಅಲಿ, ಕೃಪಾನಾಥ, ನೂರುಲ್ ಮುಹಮ್ಮದ, ಪೀತಾಂಬರ ಮತ್ತು ಮಜ್ನು ಶಾ ತಮ್ಮ ಮೂಸಾ ಶಾ ಮುಂತಾದವರು ಆತನ ವೀರಸಂಗಾತಿಗಳಾಗಿದ್ದರು.

ಮಜ್ನು ಶಾ ಕ್ರಿಸ್ತಶಕ 1766ರಲ್ಲಿ ಮೆಕೆಂಜಿ ನೇತೃತ್ವದ ಬ್ರಿಟಿಷ್ ಸೈನ್ಯವನ್ನು ಸೋಲಿಸಿದ. 1769ರಲ್ಲಿ ನಡೆದ ಯುದ್ಧದಲ್ಲಿ ಕಮಾಂಡರ್ ಕೀಥ್‌ನ ಹತ್ಯೆಯಾಯಿತು. 1771ರಲ್ಲಿ ಲೆಫ್ಟಿನೆಂಟ್ ಟೇಲರ್‌ನ ಸೈನ್ಯಕ್ಕೆ ಚಳ್ಳೆಹಣ್ಣು ತಿನ್ನಿಸಿದ. 1776ರಲ್ಲಿ ನಡೆದ ಯುದ್ಧದಲ್ಲಿ ಮತ್ತೆ ಬ್ರಿಟಿಷ್ ಸೈನ್ಯವನ್ನು ಸೋಲಿಸಿದ. ಆಗ ನೂರಾರು ಮಂದಿ ಬ್ರಿಟಿಷ್ ಸೈನಿಕರು ಸತ್ತು ಲೆಫ್ಟಿನೆಂಟ್ ರಾಬರ್ಟ್‌ಸನ್ ತೀವ್ರ ಗಾಯಗೊಂಡ. 1786ನೇ ಡಿಸೆಂಬರ್ 29ರಂದು ಮಜ್ನು ಶಾ, ಬಗುರಾ ಜಿಲ್ಲೆಯ ಮುಂಗ್ರಾ ಗ್ರಾಮದಲ್ಲಿ ಅನಿರೀಕ್ಷಿತವಾಗಿ ಘರ್ಷಣೆಗೊಂಡು ಬ್ರಿಟಿಷ ಸೈನ್ಯವನ್ನು ಚಕಿತಗೊಳಿಸಿದ. ಆ ಸಂದರ್ಭದಲ್ಲಿ ಮಜ್ನು ಶಾ ಗಾಯಗೊಂಡ. ಆದರೆ ಎದೆಗುಂದದೆ ದಿಟ್ಟಗತ್ತಿನೊಂದಿಗೆ ತನ್ನ ಕುದುರೆ ಓಡಿಸಿದ. ನಂತರ ತೀವ್ರಗಾಯಗಳಿಂದಾಗಿ ಬಂಗಾಲದ ಮಾಖನಪುರದಲ್ಲಿನ ಗ್ರಾಮವೊಂದರಲ್ಲಿ ಅಸುನೀಗಿದ. ಮಿಡ್ನಾಪುರದಲ್ಲಿ ಆ ಸ್ವಾತಂತ್ರ್ಯವೀರನ ಸಮಾಧಿ ಅನಾಥವಾಗಿ ಉಳಿದಿದೆ. ಆತನ ವೀರಮರಣದ ನಂತರ ತಮ್ಮ ಮೂಸಾ ಶಾ ಹೋರಾಟವನ್ನು ಮುಂದುವರಿಸಿದ. ಹೀಗೆ ಇವರೆಲ್ಲ ಭಾರತಮಾತೆಯನ್ನು ಪ್ರೀತಿಸಿದರು.

ಎರಡು ನೂರು ವರ್ಷಗಳ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಹಸ್ರಾರು ಮಂದಿ ಹಿಂದೂ ಮುಸ್ಲಿಂ ಮುಂತಾದ ಧರ್ಮಗಳ ಸಹಸ್ರಾರು ಜನರು ಹುತಾತ್ಮರಾಗಿದ್ದಾರೆ. ಆರ್‌ಎಸ್‌ಎಸ್ 1925ರಲ್ಲೇ ಜನ್ಮ ತಾಳಿದರೂ ಆ ಸಂಘಟನೆಯ ಇತಿಹಾಸದಲ್ಲಿ ಒಬ್ಬ ಹುತಾತ್ಮನ ಹೆಸರು ಕೂಡ ಕಂಡುಬರುವುದಿಲ್ಲ!

ಆರ್‌ಎಸ್‌ಎಸ್ ಮೂಲದ ಜನಸಂಘ ಮತ್ತು ಅದರ ಹೊಸ ರೂಪವಾದ ಭಾರತೀಯ ಜನತಾ ಪಕ್ಷಗಳು ಸ್ವಾತಂತ್ರ್ಯಾನಂತರ ಜನ್ಮತಾಳಿವೆ. ಇವರಿಗೆಲ್ಲ ತ್ಯಾಗಬಲಿದಾನಗಳ ಬಗ್ಗೆ ಹೇಳಿಕೊಳ್ಳಲು ಏನೂ ಇಲ್ಲ.

ಭಗತ್ ಸಿಂಗ್ ಹಾಗೂ ಅವರ ಸಂಗಾತಿಗಳಾದ ರಾಜಗುರು ಮತ್ತು ಸುಖದೇವ ಅವರನ್ನು 1931ನೇ ಮಾರ್ಚ್ 23ರಂದು ಬ್ರಿಟಿಷ್ ಸರ್ಕಾರ ಗಲ್ಲಿಗೇರಿಸಿತು. ಈ ಹುತಾತ್ಮರಾರೂ ಇವರ ಗುಂಪಿಗೆ ಸೇರಿದವರಲ್ಲ. ಗಲ್ಲಿಗೇರುವ ಕೆಲವೇ ಕ್ಷಣಗಳ ಮೊದಲು ಭಗತ್ ಸಿಂಗ್ ಅವರು ಕಾಮ್ರೇಡ್ ಲೆನಿನ್ ಅವರ 'ದ ಸ್ಟೇಟ್ ಅಂಡ್ ರೆವಲ್ಯೂಶನ್' ಪುಸ್ತಕವನ್ನು ಓದುವುದರಲ್ಲಿ ತಲ್ಲೀನರಾಗಿದ್ದರು!

ಸಂಘ ಪರಿವಾರದವರು ತ್ರಿವರ್ಣ ಧ್ವಜ ಹಿಡಿದ ಭಾರತ ಮಾತೆಯ ಬಗ್ಗೆ ಚಿಂತಿಸುವುದಿಲ್ಲ. ಭಾರತ ಮಾತೆಯ ಕೈಯಲ್ಲಿ ತಮ್ಮ ಸಂಘಟನೆಯ ಭಗವಾಧ್ವಜ ಕೊಟ್ಟು ಜೈ ಎನ್ನುತ್ತಾರೆ. ರಾಷ್ಟ್ರವಾದ ಹಿಟ್ಲರ್ ಮತ್ತು ಮುಸೊಲಿನಿ ಅಂಥವರನ್ನು ಸೃಷ್ಟಿಸುತ್ತದೆ. ರಾಷ್ಟ್ರಪ್ರೇಮ ಗಾಂಧೀಜಿ ಮತ್ತು ಖಾನ್ ಅಬ್ದುಲ್ ಗಫಾರ್ ಖಾನ್ ಅಂಥವರನ್ನು ಸೃಷ್ಟಿಸುತ್ತದೆ. ರಾಷ್ಟ್ರವಾದಿಗಳು ಮತ್ತೊಂದು ಧರ್ಮವನ್ನು, ಜನಾಂಗವನ್ನು ಮತ್ತು ದೇಶವನ್ನು ದ್ವೇಷಿಸುವುದರಲ್ಲಿ ಪರಿಣತಿ ಪಡೆಯುತ್ತಾರೆ. ಬಹುತ್ವದ ರಕ್ಷಕರಾದ ರಾಷ್ಟ್ರಪ್ರೇಮಿಗಳು ತಮ್ಮ ದೇಶದ ಬಗ್ಗೆ ಪ್ರೀತಿಯನ್ನೂ ಮತ್ತೊಂದು ದೇಶದ ಬಗ್ಗೆ ಗೌರವವನ್ನೂ ಹೊಂದಿರುತ್ತಾರೆ. ಹಿಂದೂ ರಾಷ್ಟ್ರೀಯತೆ ಮತ್ತು ಮುಸ್ಲಿಂ ರಾಷ್ಟ್ರೀಯತೆಯ ಚಿಂತನೆಗಳು ಭಾರತ ರಾಷ್ಟ್ರೀಯತೆಗೆ ಮಾರಕವಾಗಿವೆ ಎಂಬುದರ ಬಗ್ಗೆ ರಾಷ್ಟ್ರಪ್ರೇಮಿಗಳಿಗೆ ಅರಿವಿದೆ.

'ಮಾನವೀಯತೆಯ ಆದರ್ಶಗಳಿಗಿಂತ ದೇಶ ದೊಡ್ಡದು ಎಂಬುದನ್ನು ಕಲಿಸುವ ಶಿಕ್ಷಣದ ವಿರುದ್ಧ ಹೋರಾಡುವುದರ ಮೂಲಕ ನನ್ನ ದೇಶಬಾಂಧವರು ತಮ್ಮ ನಿಜವಾದ ಭಾರತವನ್ನು ಪಡೆಯುವರು' ಎಂದು ರವೀಂದ್ರನಾಥ ಟಾಗೋರರು ಹೇಳಿದ್ದಾರೆ.

ಅಸಾದುದ್ದೀನ್ ಓವೈಸಿ

ತರುಣ ಪೀಳಿಗೆಯಲ್ಲಿ ದೇಶಾಭಿಮಾನ ಮೂಡಿಸುವುದಕ್ಕಾಗಿ 'ಭಾರತ ಮಾತಾ ಕಿ ಜೈ' ಘೋಷಣೆಯನ್ನು ಜನಪ್ರಿಯಗೊಳಿಸುವ ಕುರಿತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಅವರ ಕರೆಯನ್ನು ಎಐಎಂಐಎಂ ಪಕ್ಷದ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಉದಗೀರ್‌ನಲ್ಲಿ ಕಳೆದ ಫೆಬ್ರುವರಿ 13ರಂದು ನಡೆದ ರ್‍ಯಾಲಿಯೊಂದರಲ್ಲಿ ತಿರಸ್ಕರಿಸಿದರು. ಅವರು ಮೋಹನ ಭಾಗವತಗೆ ಉತ್ತರ ಕೊಡಲು ಹೋಗಿ ಭಾರತದ ಅಸ್ಮಿತೆಯನ್ನೇ ಕಡೆಗಣಿಸಿದರು. ಆ ಮೂಲಕ ದೇಶದಲ್ಲಿ ತಪ್ಪು ಸಂದೇಶ ರವಾನೆ ಮಾಡಿದರು. ಭಾರತಮಾತೆ ಸಂವಿಧಾನದಲ್ಲಿ ಇರಲಿಕ್ಕಿಲ್ಲ. ಆದರೆ ಜನಮಾನಸದಲ್ಲಿ ಆತ್ಮಗೌರವದ ಪ್ರತಿಮೆಯಾಗಿ ರೂಪುಗೊಂಡಿದ್ದಾಳೆ. ಭಾರತಮಾತೆ ಒಂದು ಮೂರ್ತಿ ಅಲ್ಲ, ಒಂದು ಚಿತ್ರವಲ್ಲ. ಈ ನೆಲದ ಚರಾಚರವೆಲ್ಲದರ ಒಟ್ಟುರೂಪ ಎಂಬ ಕಾವ್ಯಸತ್ಯವನ್ನು ಓವೈಸಿಗೆ ತಿಳಿಸಿ ಹೇಳುವವರು ಯಾರು?

ಭಾರತಮಾತೆ ದೇಶದ ಯಾವುದೇ ಒಂದು ಜನಾಂಗದ ಅಥವಾ ಸಿದ್ಧಾಂತದ ಮಾತೆ ಅಲ್ಲ. ಭಾರತಮಾತೆ ಭಾರತೀಯರನ್ನು ಮಾತ್ರ ಹಡೆದಿಲ್ಲ. ಸಾಗರವನ್ನು, ಹಳ್ಳ ಕೊಳ್ಳ ನದಿಗಳನ್ನು, ಹಿಮಾಲಯವನ್ನು, ಬೆಟ್ಟ ಗುಡ್ಡ, ಮರುಭೂಮಿ, ಫಲವತ್ತಾದ ಭೂಮಿ, ಸಸ್ಯಲೋಕ, ಪಕ್ಷಿಲೋಕ ಮತ್ತು ಪ್ರಾಣಿಲೋಕವನ್ನೂ ಹಡೆದಿದ್ದಾಳೆ. ಅವರು 'ಬಹುರತ್ನಾ ವಸುಂಧರಾ' [illegible]

⇨16

ಈ ಧರ್ಮವ್ಯಾಕೊ ಈ ಜಾತಿಯಾಕೊ

ಈ ಧರ್ಮವ್ಯಾಕೊ ಈ ಜಾತಿಯಾಕೊ।
ಮೊದಲಿಗೆ ಮಾನವ ನೀನಾಗು ಸಾಕು॥

ಕರುಣೆಯೆ ನಿಜಧರ್ಮ ತಿಳಿದರೆ ಸಾಕು; ಪ್ರೀತಿಯೆ ನಿಜಪೂಜೆ ಈ ಭೇದವ್ಯಾಕೊ।
ಸ್ನೇಹದಿ ನೀ ಸನಿಹ ಬರಲಿಲ್ಲವ್ಯಾಕೊ; ಮೊದಲಿಗೆ ಮಾನವ ನೀನಾಗು ಸಾಕು॥

ತಿಳಿಯದೆ ಏನೇನು ನೀ ಮಾಡಿ ಕೆಟ್ಟಿ; ದೇವರ ಹೆಸರ್‍ಹೇಳಿ ನೀನೇ ತಿಂದಿಟ್ಟಿ।
ನಿರಾಕಾರ ನಿರಾಹಾರ ಇಲ್ಲದವನಿಗ್ಯಾಕೊ; ಕಲ್ಲಿಗೆ ಎಡೆ ಮಾಡಿ ಕೆಡಿಸುವದ್ಯಾಕೊ॥

ಮಾನವರೆಲ್ಲರೊಂದೆ ಎಂದ್ಹೇಳುವದ್ಯಾಕೊ; ನಾಲ್ಕು ವರ್ಣದ ಭೇದ ಬಿಡು ನೀ ಸಾಕು।
ಮಾನವನೆ ನಿಜಧರ್ಮ ತಿಳಿದರೆ ಸಾಕೊ; ಸತ್ಯವೆ ಶಿವರೂಪ ನೀನಾಗಬೇಕು॥

ಹಸಿದ ಹೊಟ್ಟೆಗೆ ಹಿಟ್ಟು ಕೊಡಲಿಲ್ಲವ್ಯಾಕೊ; ಕಲ್ಲುದೇವರಿಗೆಂದು ಎಡೆ ಮಾಡುವದ್ಯಾಕೊ।
ಬೇಡುವವನಿಗೆ ನೀಡು ಕೆಡಿಸುವದ್ಯಾಕೊ; ಉಡುವ ತಿನ್ನುವ ವಸ್ತು ನೀ ಸುಡುವದ್ಯಾಕೊ॥

ಈ ಗೊಳ್ಳು ಧರ್ಮ ಈ ಜೊಳ್ಳು ಜಾತಿ; ಪ್ರೀತಿ ತಿಳಿಯದೆ ನೀನು ಹೀಂಗ್ಯಾಕ ಸಾಯ್ತಿ।
ಈ ಕ್ರೋಧವ್ಯಾಕೊ ಈ ಭೇದ ಸಾಕೊ; ಮೊದಲಿಗೆ ಮಾನವ ನೀನಾಗು ಸಾಕು॥

ಕೈಯೊಳಗಿನ ಗಂಟೆ ನೋಡಲಿಲ್ಲವ್ಯಾಕೊ; ಆರತಿ ಬೆಳಕಲ್ಲಿ ಶಿವ ಕಾಣಲಿಲ್ಯಾಕೊ।
ನೀ ದೇವನಾಗಿರುವಿ ತಿಳಿದರೆ ಸಾಕೊ; ಕಣ್ಣುಮುಚ್ಚಿ ಬೆಕ್ಕಿನಂತೆ ಹಾಲು ಕುಡಿಯುವದ್ಯಾಕೊ॥

ಪುರಸಾಲಗುಂದೊಳಗೆ ಕೂಡಲಿಲ್ಲವ್ಯಾಕೊ; ತಿಳಿದು ಮತಿದರೊಳಗೆ ಬೆರಿಲಿಲ್ಲವ್ಯಾಕೊ।
ಗುರುಪೀರಾ ಖಾದರಿಯ ದಯದೊಂದೆ ಸಾಕೊ; ಪ್ರೀತಿಯೆ ನಿಜಧರ್ಮ ತಿಳಿದೆಡುವುದ್ಯಾಕೊ॥

- ಶ್ರೀಗುರು ಖಾದರಿ ಪೀರಾ


ಮೋದಿ ಜೆರಾಕ್ಸ್

ಅವನು ಬಂದಿದ್ದ;
ಕಣ್ಣ ಕೊನೆಯಲ್ಲಿ ಶತಮಾನಗಳಿಂದ ಸ್ರವಿಸಿ
ಹೆಪ್ಪುಗಟ್ಟಿದ ನೆತ್ತರು-ಕಂಬನಿಯ ಕಲೆ.
ಎದೆಯಾಳದಲ್ಲಿ ಭೋರ್ಗರೆದು ಹರಿವ ನೋವು ಕಾವೇರಿಯ ಸೆಲೆ.

ಕೇಳಿದ್ದ;
ಬುದ್ಧ ಗೊತ್ತೆ ಬಸವ ಗೊತ್ತೆ
ಮಾರ್ಕ್ಸ್ ಗೊತ್ತೆ ಮಾವೋ ಗೊತ್ತೆ
ಬದುಕ ಗುತ್ತಿಗೆ ಹಡೆದವರ,
ಉಪ್ಪರಿಗೆ ಮನೆ ಸುಪ್ಪತ್ತಿಗೆ ಮೇಲೆ,
ಒಪ್ಪ ಓರಣಕ್ಕೆ ಎರವಾದವರ ಗೊತ್ತೆ?
ಕಣ್ಣು ಕೆಂಪು ನಕ್ಷತ್ರ.

ನೊರೆಯುಕ್ಕಿ ಚೆಲ್ಲಿದ ಕಳ್ಳಿನ ಹುಳಿ ಗಮಲು,
ಗಾಳಿಯಲ್ಲಿ ಗಕ್ಕನೆ ನುಗ್ಗಿ ಬಂದಿತ್ತು.
ಕರ್ಕಶ ಕೆಮ್ಮು; ಒದ್ದೆ ಗನ್ ಪೌಡರ್; ಸುಪ್ತ ಸನಾತನತೆ.
ಜತೆಗೆ ಸಾವು ಕಾಣುವ ಮುಂದೆ ಸತ್ತವರ ಆತ್ಮಕತೆ.

ಅಂದು ಹೋದವ ಮತ್ತೆಂದೋ ಬಂದಿದ್ದ,
ಕಾಮೂ, ಸಾರ್ತ್ರೆ, ಕಾಫ್ಕಾ,
ವಾನ್‌ಗಾ, ಡಾಲಿಗಳ ಹೊತ್ತು ತಂದಿದ್ದ.
ಗಾಂಧಿ, ಸೂಕಿ, ಮಂಡೇಲ ಮಾತ ಪೆಂಡಾಲಿನುದ್ದಕ್ಕೂ.
ಹೇಳಿದ್ದ;
ಬೆನ್‌ಹರ್ ನೋಡಿದ್ದೀರಾ?
ಮಾತು ಮೆತ್ತಗಿತ್ತು; ತಲೆಯೆತ್ತಿ ನೋಡಿದೆ,
ಎದೆಯಾಳದಲ್ಲಿ ಭೋರ್ಗರೆದು ಹರಿವ ನೋವು ಕಾವೇರಿಯ ಸೆಲೆ,
ತುಸು ನುಸುಳಿದ ಆರ್ದ್ರತೆ, ಮಾರ್ದವತೆ,
ಮೆಸ್ಸಲಾ ಹೇಳುತ್ತಾನೆ, "ಗೆಳೆಯ ಬೆನ್‌ಹರ್, ಧರ್ಮದ ಹುಚ್ಚು ಬಿಟ್ಟುಬಿಡು;
ಜಗತ್ತಿನ ಕೇಂದ್ರ ರೋಮ್, ರೋಮನ್ ಕುಲ ಸರ್ವಶ್ರೇಷ್ಠ; ನೀನು ನನ್ನ ಜತೆಗಿರು"
ಮೆಲ್ಲನೆ ನಕ್ಕ ಬೆನ್‌ಹರ್ ಮತ್ತಷ್ಟು ಮೆಲ್ಲನೆ, ಸುಳಿವ ತಂಗಾಳಿಗೆ
ಮಾತಿನ ಕಾಠಿಣ್ಯ ಒಂದಿನಿತೂ ತಾಕದಂತೆ ಮೆಲ್ಲನೆ,



ಉಸುರುತ್ತಾನೆ, "ಕುಲಶ್ರೇಷ್ಠತೆಯ ಮಾತು ಒಂದು ವ್ಯಸನದ ಮಾತು;
ಆತ್ಮಕ್ಕೆ ತಗಲಿದ ರೋಗದ ಮಾತು; ಅದು ಕೊಳಕು, ಪಾಪ, ಶಾಪ;
ನಿನ್ನ ಜೊತೆ ನಾನಿರಲಾರೆ,
ನನ್ನ ಕೂಡೆ ದೇವನಿದ್ದಾನೆ, ನನ್ನ ಕೂಡೆ ಸರ್ವಶಕ್ತ ದೇವನಿದ್ದಾನೆ."

ಇದೆಲ್ಲ ಹಳೆಯ ಮಾತು ಬಿಡಿ;
ಅವ ಮೊನ್ನೆ ಬಂದಿದ್ದ
ಮೊನ್ನೆ ಬಂದಿದ್ದಾತ ತೀರಾ ಬದಲಾಗಿದ್ದ
ಹೇಳಿದ,
ಮೊದಮೊದಲಿನ ಫೋಟೋ ಕಾಪಿ ತೆಗೆಯುವ ಯಂತ್ರ ಬಹಳ ತಮಾಷೆಯಾಗಿ
ಅಂಚಿನಲ್ಲಿದ್ದ ಅಕ್ಷರ ಮಾಯವಾಗುತ್ತಿತ್ತು;
ಭಾವಚಿತ್ರಕ್ಕೆ ಮಸಿ ಚೆಲ್ಲಿ ಬಗ್ಗಡವಾಗುತ್ತಿತ್ತು.
ಎಲ್ಲೆಂದರಲ್ಲಿ ಬೇಡವೆಂದರೂ ಉದ್ದಕ್ಕೂ ಕಪ್ಪುಗೆರೆ
ವಾಕ್ಯದುದ್ದಕ್ಕೂ ಅಪಾರ್ಥ,
ತಪ್ಪು ಕಲ್ಪನೆಯ, ತಪ್ಪು ವಿಶ್ಲೇಷಣೆಯ ಕಣ್ಣಿನ ಪೊರೆ;

ಈಗ ನೋಡಿ ಎಲ್ಲ ನಿಚ್ಚಳ; ಸಪ್ತವರ್ಣಗಳಲ್ಲಿ
ಎಲ್ಲವೂ ಅಚ್ಚುಕಟ್ಟು ಸ್ಪಷ್ಟ, ನಿಖರ, ಪ್ರಖರ;
ನಿಜ, ಇರುವುದಕ್ಕಿಂತಲೂ ಕೊಂಚ ಹೆಚ್ಚು ಚಂದ;
ಹರಿದ ಕೆಟ್ಟ ಕನಸಿನ ಚಾದರದೆಡೆಯಿಂದ
ಬಾನಂಗಳದ ಮಿನುಗು ನಕ್ಷತ್ರಲೋಕ,
ಬದುಕಿನ ವರ್ಣವೈವಿಧ್ಯ ದೃಗೋಚರ.

ನೋಡಿದೆ;
ಅವನ ಕಣ್ಣ ಕೊನೆಯಲ್ಲಿ ಶತಮಾನಗಳಿಂದ ಸ್ರವಿಸಿ
ಹೆಪ್ಪುಗಟ್ಟಿದ ನೆತ್ತರು-ಕಂಬನಿಯ ಕಲೆ,
ಎದೆಯಾಳದಲ್ಲಿ ಭೋರ್ಗರೆದು ಹರಿವ ನೋವು ಕಾವೇರಿಯ ಸೆಲೆ,
ಅದು ಇನ್ನೂ ಅಲ್ಲೇ ಇತ್ತು; ಸ್ಪಷ್ಟವಾಗಿ ನಿಚ್ಚಳವಾಗಿ;
ಅದೆಲ್ಲ ಮರೆತಂತೆ ಸಂತಸದ ನಗು ಬಣ್ಣದ ಪರದೆ ಅದರ ಮೇಲೆ.

■ ಕೆ.ಆರ್. ವಿದ್ಯಾಧ

ಕನ್ಹಯ್ಯನ ಕನವರಿಕೆಗಳು

ರೋಹಿತ ಹೇಮುಲ ಮೈಮೇಲೆ ಬಂದಾಗ
ಕನವರಿಸುತ್ತಿದ್ದಾನೆ ಕನ್ಹಯ್ಯ ಕುಮಾರ
ನೆಮ್ಮದಿಯ ನಾಳೆ ನಮಗೆ ಬೇಕೆಂದು
ಈ ಭರತ ಭೂಮಿ ನಮ್ಮದೆಂದು


ಅಚ್ಚ ದ್ರಾವಿಡ ರೂಪ
ನಸುಗೆಂಪು ಮೈಬಣ್ಣ
ತಿದ್ದಿತೀಡಿದ ಗಡ್ಡಮೀಸೆ
ಭರವಸೆಯ ಯುವಕ
ಕಂಡವರ ಕಣ್‌ಪುಳಕ
ಬ್ರಹ್ಮಾಂಡ ಬಾಯ್ದೆರೆದು
ಎದ್ದು ನಿಂತಿದ್ದಾನಿವನು
ಭುವಿಯಿಂದ ಬಾನಂಗಳಕೆ

ನೆಹರು ವಿಶ್ವವಿದ್ಯಾಲಯದ
ಕ್ಯಾಂಪಸಿನಲಿ ಈ ಯುವ ನಾಯಕ
ಬಲಗೈ ಬಿಗಿಮುಷ್ಟಿ ತೋರು ಬೆರಳೆತ್ತಿ
ಮೇಲೆ ವೇಮುಲ ನಕ್ಷತ್ರ ತೋರಿ;

ಗೆಳತಿಯರೇ ಗೆಳೆಯರೇ,
ಭರತ ಭೂಮಿ ನಮ್ಮದು
ನಾವು ಅದರ ಮಕ್ಕಳು
ನಾವು ಮನುಜರು
ಕಿಕ್ಕಿರಿದು ಉದ್ಘೋಷಿಸುತ್ತಿದೆ
ಕನ್ಹಯ್ಯನ ಬೆಂಬಲ ಪಡೆ
ಭಾರತ್ ಮಾತಾಕಿ ಜೈ

ನಾವು ದೇಶದ್ರೋಹಿಗಳಲ್ಲ
ನಾವು ಭಯೋತ್ಪಾದಕರಲ್ಲ
ನಾವು ನಕ್ಸಲರೂ ಅಲ್ಲ ಅಲ್ಲ
ನಿಮ್ಮ ಆಪಾದನೆ ತರವಲ್ಲ
ಹಸಿವು ಬಡತನ ನಿರುದ್ಯೋಗ

ಅಸಹಿಷ್ಣುತೆ ವಿರುದ್ಧ
ನಮ್ಮ ಹೋರಾಟ



ದನಿಯಿಲ್ಲದವರಿಗೆ ದನಿ ಕೊಡಲು
ಶ್ರಮಜೀವಿಗಳಿಗೆ ಬಲ ತುಂಬಲು
ನಮ್ಮ ಹೋರಾಟ

ಸಾಮಾಜಿಕ ಅನ್ಯಾಯದ ವಿರುದ್ಧ
ಹಕ್ಕು ಮಂಡಿಸಲು
ನಮ್ಮ ಹೋರಾಟ
ಬಹುಭಾಷೆಯ ಬಹು ಸಂಸ್ಕೃತಿ
ಬಹುರಾಷ್ಟ್ರೀಯತೆ
ನಮ್ಮ ನಾಡು

ಸರ್ವಜನಾಂಗದ ಶಾಂತಿಯ ತೋಟದ
ಮಾಲಿಗಳು ನಾವು
ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಕೊನೆಗೊಂಡಿತೊ ಓರ್ರೋರ್ವರ

ಗರ್ವದ ಕಾಲ, ಇದು ಸರ್ವರ ಕಾಲ
ಜನತಂತ್ರಕ್ಕೆ ಜಯವಾಗಲಿ
ಸರ್ವೋದಯ ಕೈಸಾರಲಿ

ಯುವವಾಣಿಯ ಆವೇಶದ
ಕವಿವಾಣಿಯ ಕೇಳಿ:
ಕಂಪಿಸುತ್ತಿದೆ ಕೆಂಪುಕೋಟೆ
ಪಿಸುಗುಟ್ಟುತ್ತಿವೆ ಗುಡಿ ಚರ್ಚು
ಮಸೀದಿಗಳು
ದಿಗಿಲುಗೊಳ್ಳುತ್ತಿವೆ ಸಿರಿವಂತರ
ಸೌಧಗಳು
ನಾವು ಸಮ ನಿಮಗೆಂದು ಮಾತೆತ್ತಿದರೆ
ದೇಶದ್ರೋಹಿ, ಟೆರರಿಸ್ಟೆಂದು
ಹಾರುತ್ತಿದೆ ಕೇಸರಿಯ ಬಾವುಟ ಪಟಾಪಟ
ಹಿಂದೆ ಬದ್ದಿದ್ದಾರೆ ಕಣ್ಗಾವಲಿನ ಭಟರು

ಕೊಡುವುದೆಲ್ಲವ ಕೊಟ್ಟು ಬರಿಗೈಯಲ್ಲಿ
ರಣರಂಗದ ನಡುವೆ ತೊಳಲುತ್ತಿದ್ದಾನೆ ಕರ್ಣ
ಇನ್ನೆಷ್ಟು ದಿನ ಇನ್ನೆಷ್ಟು ಯುಗ
ಸಹನೆ ಸಂಯಮ ನಮಗೆ?
ಒಲೆ ಹೊತ್ತಿ ಉರಿವಾಗ ಕಾವವರು ಯಾರು?

ಮಾಡದಪರಾಧಕ್ಕೆ ಸಹಿಯ ಬೇಡುವರವರು
ಆತ್ಮಹತ್ಯೆಗೆ ನಮ್ಮ ದೂಡುವರು ಕಡೆಗೆ?
ನಿಮ್ಮ ವೇದ ಪುರಾಣ ಕಾವ್ಯ
ಕಟ್ಟುಕತೆ ನಿಮಗೇ ಇರಲಿ
ಶರಣ ಸಂತ ಸೂಫಿ ಪೂರ್ವಜರ
ಸೊಲ್‌ವಚನ ನಮಗೆ ಸಾಕು

ಹಸಿರು ನೆಲದಲ್ಲಿ ರಕ್ತ ಚೆಲ್ಲಾಟ ಬೇಡ
ಮಾಡದಿರಿ ನಾಡನ್ನು ಬೇಳೆಯಂತೆ
ಕೂಡಿರಲಿ ಅದು ಹಿಡಿಗಾಳಿನಂತೆ
ಚೆಂಡು ನಿಮ್ಮ ಕಣದಲ್ಲಿದೆ
ಬೇಗ ನಿರ್ಧರಿಸಿ
ಇಂತು:
ವೇಮುಲನು ಮೈಮೇಲೆ ಬಂದಾಗ
ಕಾಮ್ರೇಡ್ ಕನ್ಹಯ್ಯ ಕನವರಿಸುತ್ತಿದ್ದಾನೆ
ಈ ಬುದ್ಧ ಭೂಮಿ ನಮ್ಮದೆಂದೂ
ನೆಮ್ಮದಿಯ ನಾಳೆ ನಮಗೆ ಬೇಕೆಂದೂ

* ರೋಹಿತ ವೇಮುಲ:
ಹೈದರಾಬಾದಿನ ಕೇಂದ್ರೀಯ ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿ ನಾಯಕ. ವಿ.ವಿ.ಯು ದೇಶ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾನೆಂದು ಆಪಾದನೆ ಮಾಡಿ ಡಿಬಾರ್ ಮಾಡಿತು. ಖಿನ್ನತೆಗೊಳಗಾದ ಅವನು 'ನಕ್ಷತ್ರಲೋಕಕ್ಕೆ ಹೋಗುತ್ತೇನೆ' ಎಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ.
* ಈ ಪದ್ಯ : 2016ರ ಹೊಸತು ಮುಖಪುಟ ವಿನ್ಯಾಸದಿಂದ ಪ್ರೇರಿತ

■ ಪ್ರೊ. ಶಿವರಾಮಯ್ಯ

ಸುಳ್ಳು ಹೇಳುವ ಚೆಡ್ಡಿಗಳಿಗೊಂದು ಸವಾಲ್



ಒಂದು ಪತ್ರ

ಪುತ್ತೂರು ಮಹಾಲಿಂಗೇಶ್ವರ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲಾಧಿಕಾರಿ ಇಬ್ರಾಹಿಂರ ಹೆಸರಿರುವ ಬಗ್ಗೆ ಗಲಾಟೆ ಮಾಡುತ್ತಿರುವ ಸಂಘ ಪರಿವಾರದವರು ಅಂದಿನ ಕಾಲದ ತುಳುನಾಡಿನಲ್ಲಿಯೂ ಇದ್ದಿದ್ದರೆ ಏನಾಗು ತ್ತಿತ್ತು ಊಹಿಸಿ. ಮುಸ್ಲಿಮನಾದ ಬಪ್ಪಬ್ಯಾರಿ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ ಕಟ್ಟುವ ಕಾಲದಲ್ಲಿ ಈಗಿನಂತೆ ಭಜರಂಗಿಗಳು ಇದ್ದಿದ್ದರೆ ಆಗ ಅವರು ಬಪ್ಪಬ್ಯಾರಿಯನ್ನು ಬಹಿಷ್ಕರಿಸಿ ಅವನ ಹಣ ಕಸಿದು ತಾವೇ ದೇವಸ್ಥಾನ ಕಟ್ಟಿಸಿ ಅಲ್ಲಿ ಕೇವಲ ವೈಷ್ಣವ ಬ್ರಾಹ್ಮಣರಿಗೆ ಮಾತ್ರ ಗರ್ಭಗುಡಿಯೊಳಗೆ ಪ್ರವೇಶ ಎಂದು ಭಜರಂಗಿಗಳು ಬೋರ್ಡ್ ಹಾಕುತ್ತಿದ್ದರು. ಉಡುಪಿ ಮಠಾಧೀಶರನ್ನು ಕರೆಸಿ ದೇವಳದ ಗೊಮ್ಮಟಕ್ಕೆ ಏರಿಸಿ ಕುಡ್ಲೇವ್ ಕುಡ್ಲೆವ್ ಎಂದು ಕೂಗಿಸುತ್ತಿದ್ದರು. ಹುಂಬ ಶೂದ್ರರೆಲ್ಲಾ ಭಾರಿ ಕಾಣಿಕೆ ಕೊಟ್ಟು ತಾವೂ ಜೈ ಜೈ ಎಂದು ಬೊಬ್ಬೆ ಹಾಕುತ್ತಿದ್ದರು.

ಕರಾವಳಿಯ ಭೂತಾರಾಧನೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ಆದರೆ ಹಿಂದಿನ ಕಾಲದ ಈ ಭೂತ-ದೈವಗಳ ಕತೆಗಳೂ ಕೋಮುಸೌಹಾರ್ದ ಸಾರುತ್ತವೆ ಎಂಬುದನ್ನೂ ಈಗಿನ ಸಮಯದಲ್ಲಿ ಜಗತ್ತಿಗೆ ಸಾರಬೇಕಾದ ಪರಿಸ್ಥಿತಿ ಬಂದಿದೆ. ಹಿಂದೂ ಶೂದ್ರರು ಆಳವಾಗಿ ನಂಬುವ ಬೊಬ್ಬರ್ಯ ಎಂಬ ಭೂತದ ಮುಸ್ಲಿಂ ತಂದೆಯು ಬೊಬ್ಬರ್ಯನ ಹಿಂದೂ ಬಂಟ ಜಾತಿಯ ತಾಯಿ ದುಗ್ಗಿ ಶೆಡ್ತಿಯನ್ನು ಪ್ರೇಮಿಸಿದ್ದರಿಂದ ಬೊಬ್ಬರ್ಯ ಹುಟ್ಟಿದ್ದು. ಆಗಿನ ಕಾಲದಲ್ಲಿ ಇಲ್ಲಿಯ ತುಳುವ ಕೃಷಿಕ-ವ್ಯಾಪಾರಿ ಜನಾಂಗಗಳಲ್ಲಿ ಇದು ಸಾಮಾನ್ಯವಾಗಿತ್ತಂತೆ. ಒಂದು ವೇಳೆ ಆಗ ಕೇಸರಿ ಪಡೆಗಳು ಇದ್ದಿದ್ದರೆ ಅವರು ಇದು 'ಲವ್ ಜೆಹಾದ್' ಎಂದು ಬೊಬ್ಬೆ ಹಾಕಿ ದುಗ್ಗಿಶೆಟ್ಟಿ ಮತ್ತು ಅರಬಿಗೆ ಹೊಡೆದು ಅವರನ್ನು ಪೊಲೀಸ್ ಸ್ಟೇಷನ್ನಿಗೆ ಎಳೆದುಕೊಂಡು ಹೋಗುತ್ತಿದ್ದರು. ಅಲ್ಲಿ ಪೊಲೀಸರು ಅವರ ತಂದೆ ತಾಯಿಂಗಳನ್ನು (ಬೊಬ್ಬರ್ಯನ ಅಜ್ಜ-ಅಜ್ಜಿಯರನ್ನು) ಕರೆಸಿ ಅವರಿಂದ ಮುಚ್ಚಳಿಕೆ ಬರೆಸಿ ಅವರಿಗೆ ವಾರ್ನಿಂಗ್ ಕೊಟ್ಟು ಕಳುಹಿಸುತ್ತಿದ್ದರು. ಹಾಗಾದಾಗ ಬೊಬ್ಬರ್ಯ ದೈವ ಹುಟ್ಟುತ್ತಲೇ ಇರಲಿಲ್ಲ ಅಲ್ಲವೇ!!

ಟಿಪ್ಪು ಸುಲ್ತಾನನ ಕಾಲದಲ್ಲಿ ಸಂಘಿಗಳು ಇದ್ದಿದ್ದರೆ ಅವರು ದಿವಾನ್ ಪೂರ್ಣಯ್ಯ ಟಿಪ್ಪುವಿನ ನೌಕರಿಯಿಂದ ಹೊರಬರಬೇಕೆಂದು ಒತ್ತಾಯಿಸುತ್ತಿದ್ದರು. ಪೂರ್ಣಯ್ಯ ಟಿಪ್ಪುವಿನ ಮಂತ್ರಿಗಿರಿ ತೊರೆಯದಿದ್ದರೆ ಆಗ ಈ ಪೂರ್ಣಯ್ಯ ಬ್ರಾಹ್ಮಣನಲ್ಲ ಅವನು ಮುಸ್ಲಿಮರಿಗೆ ಹುಟ್ಟಿದವನು ಎಂದು ಅಪಪ್ರಚಾರ ಮಾಡುತ್ತಿದ್ದರು. ಒಂದು ವೇಳೆ ಸಂಘಿಗಳ ಮಾತು ಕೇಳಿ ದಿವಾನ್ ಪೂರ್ಣಯ್ಯ ಟಿಪ್ಪು ವಿರುದ್ಧ ಬ್ರಿಟಿಷರಿಗೆ ಗುಟ್ಟಾಗಿ ಸಹಾಯ ಮಾಡಿದ್ದರೆ ಬ್ರಿಟಿಷರು ತಮ್ಮ ಒಬ್ಬ ನಂಬಿಗಸ್ಥನಿಗೆ ಧರ್ಮಸ್ಥಳವನ್ನು ಧಾರೆಯೆರೆದು ಕೊಟ್ಟಂತೆಯೇ ಪೂರ್ಣಯ್ಯನಿಗೂ ಒಂದು ಲಾಭದಾಯಕ ಹಿಂದೂ ದೇವಸ್ಥಾನ ಧಾರೆಯೆರೆದು ಕೊಡುತ್ತಿದ್ದರು. ಹಾಗಾಗಿದ್ದರೆ ಪೂರ್ಣಯ್ಯನ ಈಗಿನ ಬ್ರಾಹ್ಮಣ ವಂಶಜರು ಧರ್ಮಸ್ಥಳದ ಜೈನ ವಂಶಜರಂತೆ ಹಿಂದೂ ಶೂದ್ರರಿಂದ ಕೋಟ್ಯಾಂತರ ಹಣ ಬಾಚುತ್ತಿದ್ದರು ಮತ್ತು ಆ ಹಣದಿಂದ ಕೇಸರಿ ಪಡೆಗಳನ್ನೂ ಸಾಕುತ್ತಿದ್ದರು ಜತೆಗೆ ರಾಜಕಾರಣಿಗಳನ್ನೂ ಖರೀದಿಸುತ್ತಿದ್ದರು.

ಶೈವ ಬ್ರಾಹ್ಮಣರಾಗಿದ್ದ ಮರಾಠಾ-ಪೇಶ್ವೆಗಳು ಟಿಪ್ಪುವಿನ ಸಮಯದಲ್ಲಿ ಶೃಂಗೇರಿ ಮಠವನ್ನು ಲೂಟಿಗೈದರು. ಆಗ ಕೇಸರಿ ಪಡೆಗಳು ಇದ್ದಿದ್ದರೆ ಅವರು ಕರ್ನಾಟಕದ ಎಲ್ಲಾ ಹಿಂದೂ ದೇವಸ್ಥಾನಗಳನ್ನು ಲೂಟಿಗೈಯ್ಯಲು ಪೇಶ್ವೆಗಳಿಗೆ ಸಹಾಯ ಮಾಡುತ್ತಿದ್ದರು. ಕಾರಣ ಬ್ರಾಹ್ಮಣರು ಏನೇ ಕೆಟ್ಟ ಕೆಲಸ ಮಾಡಿದರೂ ಅದಕ್ಕೆ ದೈವೀಪ್ರೇರಣೆಯಿರುತ್ತದೆ ಹಾಗೂ ಪವಿತ್ರ ಉದ್ದೇಶವಿರುತ್ತದೆ ಎಂಬ ಮೂರ್ಖ ನಂಬಿಕೆ ಪೆದ್ದ ಶೂದ್ರರಲ್ಲಿ ಆಗಲೂ ಇತ್ತು ಈಗಲೂ ಇದೆ. ನಮ್ಮ ಕರಾವಳಿಯ ದುರದೃಷ್ಟವೆಂದರೆ ಇಲ್ಲಿಯ ಎಲ್ಲಾ ಶೈವ/ಶಾಕ್ತ ದೇವಸ್ಥಾನಗಳು ವೈಷ್ಣವ ಅರ್ಚಕರ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದಿವೆ. ಶೈವ/ಶಾಕ್ತ ದೇವರನ್ನು ಪೂಜಿಸಿ ಗಳಿಸಿದ ದಕ್ಷಿಣೆಯಿಂದಲೇ ಈ ವೈಷ್ಣವ ಅರ್ಚಕರು ಕೋಟ್ಯಾಧೀಶರಾಗಿದ್ದರೂ ಅವರು ತಾವೇ ಪೂಜಿಸುವ ಶೈವ/ಶಾಕ್ತ ದೇವರ ತೀರ್ಥ-ಪ್ರಸಾದ ಅಪ್ಪಿತಪ್ಪಿಯೂ ಸೇವಿಸುವುದಿಲ್ಲ ಹಾಗೂ ಜೀವ ಹೋದರೂ ಹಣೆಗೆ ವಿಭೂತಿ ಧರಿಸುವುದಿಲ್ಲ. ನಿಜವಾಗಿ ಅವರು ಶಿವ ಗಣಪತಿ ಸುಬ್ರಹ್ಮಣ್ಯ ದುರ್ಗೆ ಮುಂತಾದ ಶೈವ/ಶಾಕ್ತ ದೇವರನ್ನು ಪೂಜಿಸುವಾಗ ಹೂವಿನ ಅಲಂಕಾರದ ನಡುವೆ ತಮ್ಮ ವಿಷ್ಣು ಸಾಲಿಗ್ರಾಮ ಇಟ್ಟು ಅದಕ್ಕೆ ಅಗ್ರಪೂಜೆ ಸಲ್ಲಿಸಿ ಅದರ ತೀರ್ಥ ಪ್ರಸಾದ ಸೇವಿಸುತ್ತಾರೆ. ಆದರೆ ದೂರದಲ್ಲಿ ನಿಂತಿರುವ ಭಕ್ತರಿಗೆ ಮಾತ್ರ ಅದು ಶೈವ ದೇವರ ತೀರ್ಥ-ಪ್ರಸಾದವನ್ನು ಅರ್ಚಕರು ಸೇವಿಸಿದಂತೆ ಭಾಸವಾಗುತ್ತದೆ. ಈ ರೀತಿ ಮಾನವರಿಗೆ ಮಾತ್ರವಲ್ಲ ದೇವರಿಗೂ ಅರ್ಚಕರು ಮೋಸ ಮಾಡುತ್ತಾರೆ. ಅರ್ಚಕರು ದೇವರ ಗರ್ಭಗುಡಿಯೊಳಗೆಯೇ ಶೈವ ದೇವರಿಗೆ ಮಾಡುವ ಈ ಹೀನ ಅವಮಾನ ಸಂಘ ಪರಿವಾರದವರು ಸಹಿಸುತ್ತಾರೆ, ಆದರೆ ನಿರ್ಜೀವ ಆಮಂತ್ರಣ ಪತ್ರಿಕೆಯಲ್ಲಿ ಮುಸ್ಲಿಂ ಜಿಲ್ಲಾಧಿಕಾರಿಯ ಸಣ್ಣ ಹೆಸರು ಮಾತ್ರ ಅವರಿಂದ ಸಹಿಸಲಾಗುತಿಲ್ಲ. ಇದಕ್ಕಿಂತ ಹುಂಬ ಅಸಹಿಷ್ಣುತೆ ಬೇರಾವುದಿದೆ.

ಮುಸ್ಲಿಂ ಜಿಲ್ಲಾಧಿಕಾರಿಯ ಹೆಸರು ಆಹ್ವಾನ ಪತ್ರಿಕೆಯಲ್ಲಿ ಇರುವುದರಿಂದ ಅವರು ದೇವರ ಅಂಕುರ ಪ್ರಸಾದ ಸೇವಿಸಲು ಸಿದ್ದರಿರುವರೇ ಎಂದು ಚಾಲೆಂಜ್ ಹಾಕುವ ಸಂಘಿಗಳೇ ನೀವೇ ಹೇಳಿ - ನಿಮ್ಮ ಪೇಜಾವರಶ್ರೀಗಳು, ಸುಬ್ರಹ್ಮಣ್ಯ ಮಠಾಧೀಶರು ಮತ್ತು ಕಟೀಲು ದೇವಿ ಅರ್ಚಕರು ತಮ್ಮ ಹಣೆಗೆ ವಿಭೂತಿ ಬಳಿದುಕೊಂಡು ತಮ್ಮ ಸೊಂಟದಲ್ಲಿರುವ ಸಾಲಿಗ್ರಾಮ ಮುಟ್ಟದೇ ಪುತ್ತೂರು ಮಹಾಲಿಂಗೇಶ್ವರನ ಅಥವಾ ದುರ್ಗಾದೇವಿಯ ತೀರ್ಥ-ಪ್ರಸಾದ ಸೇವಿಸಲು ತಯಾರಿರುವರೇ? ಇದು ಸಾಧ್ಯ ಆಗಬಹುದಾದರೆ ಡಿಸಿ ಇಬ್ರಾಹಿಂರ ಹೆಸರನ್ನು ಆ ದೇವಳದ ಆಮಂತ್ರಣ ಪತ್ರಿಕೆಯಿಂದ ತೆಗೆದುಹಾಕಲು ಯಾರದೇ ಅಭ್ಯಂತರ ಇರಲಾರದು. ಈ ಚಾಲೆಂಜ್ ಉಡುಪಿ ಮತ್ತು ಸುಬ್ರಹ್ಮಣ್ಯ ಮಠಾಧೀಶರು ಹಾಗೂ ಎಲ್ಲಾ ಶೈವ ದೇವಳದ ವೈಷ್ಣವ ಅರ್ಚಕರು ಸ್ವೀಕರಿಸಲು ಸಿದ್ಧರಿರುವರೇ?

- ವೀರಪ್ಪ ದಿ ನಾಯ್ಕ್, ಮಂಗಳೂರು



ಬ್ಯಾಂಕ್‌ಗಳ ದರೋಡೆ

02

ವೈಯಕ್ತಿಕ ಹೊಣೆಗಾರರಾಗಿರುವುದಿಲ್ಲ. ಖಾಸಗಿ ಕಂಪನಿಗಳ ಅಧ್ಯಕ್ಷ ಅಥವಾ ನಿರ್ದೇಶಕರಿಗೆ ಕಂಪನಿ ಕಾಯ್ದೆ 1956ರನ್ವಯ ಕಂಪನಿಯ ನಿರ್ವಹಣೆ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಹೊಣೆಗಾರಿಕೆ ನಿಯಮಿತ ದಲ್ಲಿದೆ. ಅದೇ ಉದ್ದೇಶದಿಂದ, ಬಹುಪಾಲು ಜನರು ಪ್ರೈವೇಟ್ ಲಿಮಿಟೆಡ್ ಕಂಪನಿ ಪ್ರಾರಂಭಿಸಿ ಸಾಲ ಪಡೆಯುವ ಹವಣಿಕೆ ಹೊಂದಿರುತ್ತಾರೆ.

ಬ್ಯಾಂಕುಗಳಲ್ಲಿ ದುರುದ್ದೇಶದ ಸಾಲ ಪಡೆಯುವ ಪದ್ಧತಿ ಹೇಗಿದೆ ಎಂದರೆ ಸಾಲಕ್ಕಾಗಿ ಕಂಪನಿಯ ಬ್ಯಾಲನ್ಸ್ ಶೀಟ್‌ನೊಂದಿಗೆ ಯೋಜನಾ ವರದಿ ತಯಾರಿಸಿ ಸಲ್ಲಿಸಿರುತ್ತಾರೆ. ಇವೆಲ್ಲವೂ ಅತಿಶಯದಿಂದ ಕೂಡಿರುತ್ತವೆ. ಈ ಯೋಜನಾ ವರದಿ ಮತ್ತು ಸಾಲದ ಮೊತ್ತದ ಮೇಲೆ ಬ್ಯಾಂಕ್‌ನ ವ್ಯವಸ್ಥಾಪಕರು ಸಾಲ ಮಂಜೂರಾತಿ ಮಾಡುತ್ತಾರೆ. ಸಾಲದ ಮೊತ್ತ ಹೆಚ್ಚಾದಲ್ಲಿ ಪ್ರಾದೇಶಿಕ ವ್ಯವಸ್ಥಾಪಕರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಬ್ಯಾಂಕ್ ಬೋರ್ಡ್‌ನ ಹಂತದಲ್ಲಿ ಸಾಲ ಮಂಜೂರಾತಿ ಆಗುತ್ತದೆ. ಯೋಜನಾ ವರದಿಯ ವಿಶ್ಲೇಷಣೆಯಲ್ಲಿ ಗೋಲ್‌ಮಾಲ್ ವ್ಯವಹಾರ ಪ್ರಾರಂಭಿಸುತ್ತಾರೆ.

ಇಲ್ಲಿ ರಂಜಕತೆ ಮತ್ತು ಅತಿಶಯಕ್ಕೆ ಮಿತಿಯಿಲ್ಲ. ಕೃಷಿ ಸಾಲಕ್ಕೆ ರೈತನಿಗೆ ಕೃಷಿ ಭೂಮಿ ಇರಲೇಬೇಕು ಆದರೆ ಒಂದು ಹೊಸ ಯೋಜನೆ ಪ್ರಾರಂಭಿಸುವ ಉದ್ಯಮಿಗೆ ಆಡಿಟರ್‌ರವರು ತಯಾರಿಸಿರುವ ಯೋಜನಾ ವರದಿ ಬ್ಯಾಂಕುಗಳಿಗೆ ಬೈಬಲ್ ಇದ್ದಂತೆ. ಅದೇ ಶ್ಯೂರಿಟಿ ಕೂಡಾ. ಕೃಷಿ ಸಾಲದ ಮರುಪಾವತಿಗೆ ಕಂತುಗಳನ್ನು ಬ್ಯಾಂಕಿನವರು ನಿರ್ಧರಿಸಿರುತ್ತಾರೆ. ಸಾಲದ ಮರುಪಾವತಿ ಅವಧಿ, ಕಂತು ಮತ್ತು ಮೊತ್ತವನ್ನು ಉದ್ಯಮಿಗಳೇ ನಿರ್ಧರಿಸಿರುತ್ತಾರೆ. ಸಾಲ ಪಡೆದ ಕಂಪನಿ ಸಕಾಲದಲ್ಲಿ ಸಾಲದ ಕಂತನ್ನು ಪಾವತಿಸಿಲ್ಲವೆಂದರೆ ಪಾವತಿಗಾಗಿ ಕಂತುಗಳನ್ನು ಬದಲಾಯಿಸುತ್ತಾರೆ. ಸಾಲ ಪಾವತಿಸದಿದ್ದರೂ, ಮತ್ತೊಂದಿಷ್ಟು ಸಾಲ ಮಂಜೂರು ಮಾಡಿ ಬಡ್ಡಿ ಕಟ್ಟಿದ್ದಾರೆಂದು ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಂಡು ಸಾಲದ ಮೊತ್ತ ಹೆಚ್ಚು ಮಾಡುತ್ತಾರೆ. ವಿಜಯ ಮಲ್ಯ ಕೇಸ್‌ನಲ್ಲಿ ಆದದ್ದು ಕೂಡಾ ಇದೇ. ಅಂತಿಮವಾಗಿ ನಷ್ಟ ತೋರಿಸಿ BIFR (Board for Industrial Financial Reconstruction) ಮುಂದೆ ಅರ್ಜಿ ಗುಜರಾಯಿಸಿ ನ್ಯಾಯಾಲಯದ... ಸಾಲ ಕೇಳದಂತೆ ಮಾಡುತ್ತಾರೆ. ಪ್ರಭಾವಿ ಕಾರ್ಪೊರೇಟ್ ಕುಳಗಳು ಸಾಲದ ಕಂತನ್ನು ಪಾವತಿಸದೇ ಅನುತ್ಪಾದಕ ಆಸ್ತಿ ಅಥವಾ ಎನ್‌ಪಿಎ ಎಂದು ಘೋಷಿಸಲು ಬ್ಯಾಂಕು ಆಡಳಿತ ಮಂಡಳಿಯ ಮೇಲೆ ಒತ್ತಡ, ಪ್ರಚೋದನೆಗೈದು ಸಾಲಮನ್ನಾ ಮಾಡಿಸಿಕೊಳ್ಳುತ್ತಾರೆ. ಇದೊಂದು ಲೂಟಿಕೋರರ ವಿಷಚಕ್ರ. ಇಲ್ಲಿ ಕಾರ್ಪೊರೇಟ್ ಕುಳಗಳು ಮತ್ತು ಬ್ಯಾಂಕುಗಳು ಸಮಾನ ಪಾಲುದಾರರು.

ಎನ್‌ಪಿಎಯಿಂದಾಗುತ್ತಿರುವ ತೊಂದರೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಬ್ಯಾಂಕ್‌ನಲ್ಲಿ ಷೇರು ಹೊಂದಿರುವ ಮಧ್ಯಮವರ್ಗದ ಹೂಡಿಕೆದಾರರಿಗೆ ಆದಾಯದಲ್ಲಿ ಕಡಿತ.
2. ಷೇರುದಾರರ ಆದಾಯದ ಮೇಲೆ ಹೊಡೆತ.
3. ಉತ್ತಮ ಯೋಜನೆಗಳಿಗೆ ಸಂಪನ್ಮೂಲದ ಕೊರತೆ. ರೂ. 19 ಟ್ರಿಲಿಯನ್ ಮೌಲ್ಯದ ಯೋಜನೆಗಳು ವಿವಿಧ ಹಂತಗಳಲ್ಲಿ ವಿಲೇವಾರಿಗೆ ಕಾದುಕೂತಿವೆ.
4. ಬ್ಯಾಂಕುಗಳ ಲಾಭಾಂಶದಲ್ಲಿ ಇಳಿಕೆ.
5. ಬ್ಯಾಂಕ್ ಆಸ್ತಿಯ ಅಪಮೌಲ್ಯ.
6. ಎನ್‌ಪಿಎ ಜಾಸ್ತಿಯಾದಂತೆ ಬ್ಯಾಂಕ್‌ನ ಒಟ್ಟಾರೆ ಆಸ್ತಿಯ ತಳಹದಿ ಕೊಚ್ಚಿ ಹೋಗಲು ಪ್ರಾರಂಭಿಸುತ್ತದೆ.
7. ಬ್ಯಾಂಕುಗಳು ಇದೇ ಪರಿಸ್ಥಿತಿಯಲ್ಲಿ ಮುಂದುವರಿದರೆ 2008 ರಲ್ಲಿ ಅಮೆರಿಕದಲ್ಲಿ ಆದಂತೆ ಆರ್ಥಿಕ ಕುಸಿತಕ್ಕೆ ದೇಶ ಸಿಲುಕುವ ಸಾಧ್ಯತೆ ನಿಚ್ಚಳವಾಗಿದೆ.

ಎನ್‌ಪಿಎಯನ್ನು ಕಡಿಮೆ ಮಾಡಲು ಮತ್ತು ಪ್ರಭಾವ ತಪ್ಪಿಸಲು ಬ್ಯಾಂಕ್‌ಗಳು ಕೆಳಗಿನಂತೆ ಕ್ರಮವಹಿಸಬಹುದಾಗಿದೆ.

1. **The Securitisation and Reconstruction of Financial Assets and Enforcement of Security interst Act 2002** ರಡಿ ಅನುತ್ಪಾದಕ ಸಾಲಗಳನ್ನು ವಸೂಲು ಮಾಡಲು 3 ಮಾರ್ಗಗಳಿವೆ.

2. **Asset Reconstruction** - ಆಸ್ತಿಗಳ ಪುನರ್‌ನಿರ್ಮಾಣ

3. **Enforcement of Security without the intervention of the court.** ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗೆ Security ಜಾರಿಗೊಳಿಸುವುದು. ಇದು ಎನ್‌ಪಿಎ ಒಂದು ಲಕ್ಷಕ್ಕಿಂತ ಜಾಸ್ತಿ ಇದ್ದ ಸಂದರ್ಭದಲ್ಲಿ ಈ ಕಾಯ್ದೆಯಡಿ ಕ್ರಮ ಜರುಗಿಸಲು ಅವಕಾಶವಿದೆ.

2. ಲೋಕ ಅದಾಲತ್‌ಗಳಲ್ಲಿ ಎನ್‌ಪಿಎ ಮೊತ್ತ ಐದು ಲಕ್ಷದವರೆಗಿನ ಪ್ರಕರಣಗಳಲ್ಲಿ ಆರ್‌ಬಿಐ ಮಾರ್ಗಸೂಚಿಯಂತೆ ಲೋಕ ಅದಾಲತ್ ಮೂಲಕ ವ್ಯಾಜ್ಯ ಪರಿಹರಿಸಿಕೊಳ್ಳಬಹುದಾಗಿದೆ.

3. ರಾಜಿ ಸಂಧಾನ :10 ಕೋಟಿ ಮೊತ್ತದವರೆಗಿನ ಎನ್‌ಪಿಎ ಪ್ರಕರಣಗಳಲ್ಲಿ ಸುಸ್ತಿದಾರ ಮತ್ತು ಸಾಲ ನೀಡಿದ ಬ್ಯಾಂಕ್ ನಡುವೆ ರಾಜಿಸಂಧಾನ ಮೂಲಕ ಇತ್ಯರ್ಥಪಡಿಸಲು ಅವಕಾಶವಿದೆ.

4. ಸಾಲ ವಸೂಲಾತಿ ಟ್ರಿಬ್ಯೂನಲ್‌ಗಳು **Debt Recovery tribunal**ಗಳ ರಚನೆಗೆ ಲೋಕಸಭೆಯಲ್ಲಿ 1993ರಲ್ಲಿ ಕಾಯ್ದೆ ಮೂಲಕ ಜಾರಿ ಮಾಡಿದ್ದು, 10 ಲಕ್ಷ ಮೇಲಿನ ಸಾಲ ವಸೂಲಾತಿಗಾಗಿ. ಸರಕಾರ ಕಳೆದ ತಿಂಗಳು ಹೊಸದಾಗಿ 6 ಟ್ರಿಬಿನಲ್‌ಗಳನ್ನು ರಚಿಸಲು ಆದೇಶ ಹೊರಡಿಸಿದೆ.

ಸಾಲ ವಸೂಲಾತಿ ಮಾಡಲು ಕಾನೂನಿನ ವ್ಯಾಪ್ತಿಯಲ್ಲಿ ಅವಕಾಶವಿದ್ದರೂ ಕೂಡ ಇಚ್ಛಾಶಕ್ತಿಯ ಕೊರತೆ ಕಾರಣದಿಂದ ಸಾಲ ವಸೂಲಾತಿ ಆಗುತ್ತಿಲ್ಲ, ಎನ್‌ಪಿಎ ಏರುತ್ತಿದೆ.

ನಾಲ್ಕು ವರುಷಗಳ ಹಿಂದೆ ಸುಸ್ತಿದಾರರ ಬಗ್ಗೆ ಜಾಹೀರಾತು ನೀಡಲಾಗುತ್ತಿತ್ತು. 2011 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಎಂಭತ್ತು ಸಾವಿರ ಸಾಲ ಪಡೆದು ರೂ.52264/- ಬಾಕಿ ಉಳಿಸಿಕೊಂಡಿದ್ದ ಸುಸ್ತಿದಾರ ಮಹಿಳೆ ಬಗ್ಗೆ ಪ್ರಕಟಣೆ ನೀಡಿದ್ದರು. ಆದರೆ ಆಕೆ ಉದ್ದೇಶಪೂರ್ವಕ ಸುಸ್ತಿದಾರಳಾಗಿರಲಿಲ್ಲ. ಕೆನರಾ ಬ್ಯಾಂಕ್ ತನ್ನ ಹೋರ್ಡಿಂಗ್ಸ್‌ಗಳಲ್ಲಿ ಸಣ್ಣ ಪುಟ್ಟ ವ್ಯಾಪಾರಸ್ಥ ಸುಸ್ತಿದಾರರ ವಿವರ ಪ್ರಕಟಿಸಿತ್ತು.

ಆದರೆ ಈಗ ಆ ಎದೆಗಾರಿಕೆ ಯಾರಲ್ಲೂ ಕಾಣುತ್ತಿಲ್ಲ. ಪತ್ರಿಕೆಗಳಲ್ಲಿ ಸುಸ್ತಿದಾರರ ಹೆಸರು ಅಥವ ಭಾವಚಿತ್ರ ಕೂಡ ಕಾಣುತ್ತಿಲ್ಲ. ಈಗ ಸುಸ್ತಿದಾರರ ಮಾಹಿತಿಯನ್ನು ಆರ್‌ಬಿಐ ಕಾಯ್ದೆಯಡಿ ರಹಸ್ಯವಾಗಿಡಲಾಗಿದೆ. 2011ರಲ್ಲಿ ಕೇಂದ್ರ ಮಾಹಿತಿ ಆಯೋಗವು ಮಾಹಿತಿ ಹಕ್ಕು ಕಾಯ್ದೆಯಡಿ ಮೊದಲ 100 ಸುಸ್ತಿದಾರ ಕೈಗಾರಿಕೋದ್ಯಮಿಗಳ ವಿವರ ನೀಡುವಂತೆ ಆರ್‌ಬಿಐಗೆ ಆದೇಶಿಸಿತ್ತು. ಆದರೂ ಆರ್‌ಬಿಐ ಅದಕ್ಕೆ ಸೊಪ್ಪು ಹಾಕದ ಕಾರಣ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಲೇರಿದೆ. ಖ್ಯಾತ ವಕೀಲ ಪ್ರಶಾಂತ ಭೂಷಣ್‌ರವರ ಪ್ರಯತ್ನ ಪ್ರಶಂಸನೀಯ.

ದಿನಾಂಕ 16.2.2016 ರಂದು ಸಾರ್ವಜನಿಕ ಹಿತಾಸಕ್ತಿ ಪ್ರಕರಣದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸುಪ್ರೀಂಕೋರ್ಟ್‌ನ ನಡೆ ಕೊಂಚ ವಿಶ್ವಾಸ ಮೂಡಿಸಿದೆ. 500 ಕೋಟಿಗಿಂತ ಹೆಚ್ಚು ಎನ್‌ಪಿಎ ಹೊಂದಿರುವ ಕಂಪನಿಗಳ ಮಾಹಿತಿಯನ್ನು 15 ದಿನದೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಆರ್‌ಬಿಐಗೆ ನಿರ್ದೇಶಿಸಿದೆ. ಸಂವಿಧಾನದ ಕಾನೂನಿನಂತೆ ಎಲ್ಲರೂ ಸಮಾನರು. ಕೆಲವರು ಹೆಚ್ಚು ಸಮಾನರು. ಸುಸ್ತಿದಾರರ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ನಿರ್ದೇಶನ ನೀಡಿದ್ದು ಈ ನಾಣ್ನುಡಿಗೆ ಸಾಕ್ಷಿಯಂತಿದೆ.

ಮಲ್ಯ ದೇಶಬಿಟ್ಟು ಹೋಗದಂತೆ ತಡೆಯಬೇಕೆಂದು ಮಲ್ಯ ದೇಶ ಬಿಟ್ಟು ಹೋದ ಮೇಲೆ, ಬ್ಯಾಂಕ್‌ಗಳ ಸಮೂಹ ಸುಪ್ರೀಂಕೋರ್ಟ್‌ನಲ್ಲಿ ದಾವೆ ಸಲ್ಲಿಸಿವೆ. ಎನ್‌ಪಿಎ ನಿಖರ ಮೊತ್ತದ ಬಗ್ಗೆ ಯಾರು ಚಕಾರವೆತ್ತಿಲ್ಲ. 8.3.2016 ರಂದು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಮಲ್ಯ ತನ್ನ ಒಟ್ಟಾರೆ ಎನ್‌ಪಿಎ ರೂ. 11 ಲಕ್ಷ ಕೋಟಿ ಇದೆ. ತಾನು ಸಣ್ಣ ಮೀನು. ಉದ್ದೇಶಪೂರ್ವಕ ಸುಸ್ತಿದಾರನಲ್ಲ, ತನಗಿಂತ ಹೆಚ್ಚಿನ ಮೊತ್ತದ ಸುಸ್ತಿದಾರರು ನೆಮ್ಮದಿಯಿಂದ ಇದ್ದಾರೆ ಎನ್ನುವುದು ಸಮಸ್ಯೆಯ ತೀವ್ರತೆಯನ್ನು ತೋರಿಸುತ್ತದೆ.

ಜೆಎನ್‌ಯುನಲ್ಲಿ ಧರಣಿ ನಿರತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವೆಚ್ಚವಾಗುವ ತೆರಿಗೆ ಹಣದ ಬಗ್ಗೆ ಬೊಬ್ಬೆಯಿಡುವ ಸ್ವಯಂಘೋಷಿತ ರಾಷ್ಟ್ರೀಯವಾದಿಗಳು, ಕೋಟಿಗಟ್ಟಲೆ ಕೊಳ್ಳೆಹೊಡೆದ ಉದ್ಯಮಿಗಳ ಬಗ್ಗೆ ಏನಂತಾರೋ ಕಾಣೆ. ವಿದ್ಯಾಭ್ಯಾಸ ಸಾಲಕ್ಕೆ ಶ್ಯೂರಿಟಿ ಬೇಕು. ದೇಶಕ್ಕೆ ಅನ್ನ ನೀಡುವ ರೈತನಿಗೆ ಆದ್ಯತಾ ವಲಯ ಕೃಷಿಗೆ ಸಾಲ ನಿರಾಕರಿಸಲು ಬ್ಯಾಂಕ್‌ಗಳಿಗೆ ನೂರಾರು ಸಕಾರಣಗಳುಂಟು. ಆದರೆ ಹೆಚ್ಚಿನ ಮೌಲ್ಯಕ್ಕೆ ಬ್ಯಾಲೆನ್ಸ್‌ಶೀಟ್, ಯೋಜನಾ ವರದಿ ತಯಾರಿಸುವ ಕಾರ್ಪೊರೇಟ್ ಕುಳಗಳಿಗೆ ಸಾಲ ನೀಡಲು ಬ್ಯಾಂಕ್‌ಗಳಲ್ಲಿ ಸ್ಪರ್ಧೆ ಇರುವುದು ಈ ದೇಶದ ಆರ್ಥಿಕಸ್ಥಿತಿಯ ವಾಸ್ತವಕ್ಕೆ ಹಿಡಿದ ಕನ್ನಡಿ.

ಕೃಷಿ, ಗುಡಿಗಾರಿಕೆ, ಕುಶಲಕರ್ಮಿಗಳಿಗೆ ಸಾಲದ ನೆರವು ಒದಗಿಸಲು ರಾಷ್ಟ್ರೀಕರಣಗೊಂಡ ಬ್ಯಾಂಕ್‌ಗಳು ಈ ಉದ್ದೇಶಕ್ಕೆ ತಿಲಾಂಜಲಿ ನೀಡಿವೆ. ಇದು ಭವಿಷ್ಯದ ಕರಾಳ ದಿನಗಳ ಮುನ್ನೋಟವಾಗಿದೆ. ರೈತರ ಸಾಲಮನ್ನಾದ ಬಗ್ಗೆ ವಾಕರಿಕೆ ತೋರಿಸುವ ಕೇಂದ್ರ ಸರ್ಕಾರ ಪ್ರಸ್ತುತ ಬಜೆಟ್‌ನಲ್ಲಿ-ಪ್ರಜೆಗಳ ನ್ಯಾಯದ ರೂ. 25,000 ಕೋಟಿ ಬ್ಯಾಂಕ್‌ಗಳ ಪುನಶ್ಚೇತನಕ್ಕೆ ನೀಡಿದೆ ಈಗಿನ ಬನಿಯಾ ಸರ್ಕಾರ.

ದೇಶದ 77 ಕೋಟಿ ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಸರಕಾರಿ ವರದಿಯಂತೆ ಶೇಕಡಾ 52 ರಷ್ಟು ಕೃಷಿ ಕುಟುಂಬಗಳು ಸಾಲದ ಸುಳಿಗೆ ಸಿಲುಕಿವೆ. ಪ್ರತಿ ಕೃಷಿ ಕುಟುಂಬದ ಮೇಲೆ ರೂ. 47,000 ಸಾಲ ಇದೆ. ಎರಡಂಕಿ ದಾಟದ ಬೆರಳೆಣಿಕೆಯ ಉದ್ಯಮಿಗಳಿಗೆ ಲಕ್ಷಾಂತರ ಕೋಟಿ ಸಾಲಮನ್ನಾ ಮಾಡುವ ಸರಕಾರಕ್ಕೆ ಸಾಲದ ಸುಳಿಯಲ್ಲಿ ಸಿಲುಕಿರುವ 77 ಕೋಟಿ ಕೃಷಿಕರು ಕಣ್ಣಿಗೆ ಕಾಣಿಸುತ್ತಿಲ್ಲ. ಕಾರ್ಪೊರೇಟ್ ಕುಳಗಳ ಲಕ್ಷಾಂತರ ಕೋಟಿ ಸಾಲ ಮನ್ನಾ ಜೊತೆಗೆ ಬ್ಯಾಂಕುಗಳ ಪುನಶ್ಚೇತನಕ್ಕೆ ಕೇಂದ್ರ ಸರಕಾರ ಈ ಸಾರಿಯ ಬಜೆಟ್ಟಿನಲ್ಲಿ ರೂ. 25,000 ಕೋಟಿ ನೀಡಿದೆ. 2009ರಿಂದ ಇದುವರೆಗೆ 1.2 ಲಕ್ಷ ಕೋಟಿ ನೀಡಿದೆ. ಕೃಷಿ ಕ್ಷೇತ್ರಕ್ಕೆ ಈ ಸಾರಿಯ ಬಜೆಟ್ಟಿನಲ್ಲಿ 36,000 ಕೋಟಿ ನಿಗದಿಪಡಿಸಿದೆ. ಇದು ದೇಶದ ಪ್ರತಿ ರೈತರಿಗೆ ದಿನವೊಂದಕ್ಕೆ ರೂ. 1.50 ನೀಡಿದಂತೆ.

ದೇಶದಲ್ಲಿ ಶೇಕಡ 53 ರಷ್ಟು ಆಸ್ತಿಯ ಮಾಲೀಕತ್ವ ಶೇಕಡ ಒಂದರಷ್ಟು ಜನಸಂಖ್ಯೆಯ ಹಿಡಿತದಲ್ಲಿದೆ. ಬ್ಯಾಂಕುಗಳ ರಾಷ್ಟ್ರೀಕರಣ ಬಹುಜನರ ಉದ್ಧಾರಕ್ಕೆ ಬದಲು 44 ಕಾರ್ಪೊರೇಟ್ ಕುಳಗಳ ಉದ್ಧಾರಕ್ಕೆ ನಿಂತಿದೆ. ಸರ್ಕಾರ ನಡೆಯುತ್ತಿರುವುದು ಕಾರ್ಪೊರೇಟ್‌ಗಳಿಗಾಗಿ, ಕಾರ್ಪೊರೇಟ್‌ಗಳಿಂದ, ಕಾರ್ಪೊರೇಟ್‌ಗೋಸ್ಕರ ಎಂದು ಪ್ರಜಾಪ್ರಭುತ್ವವನ್ನು ಅಣಕಿಸಿದಂತಿದೆ.

■ ಚಿರಂತನ್ ಪಿ

'ಭಾರತ್ ಮಾತಾ ಕಿ ಜೈ': ದೇಶಭಕ್ತಿಯ ಮತ್ತೊಂದು ಮಾಪಕ?


ಇವತ್ತು ಭಾರಿ ಸದ್ದುಗದ್ದಲದೊಂದಿಗೆ ದೇಶದ ಉದ್ದಗಲಕ್ಕೂ ವ್ಯಾಪಿಸಿರುವ 'ದೇಶಭಕ್ತ', 'ದೇಶ ವಿರೋಧಿ' ಕುರಿತ ಬಿರುಸಿನ ಚರ್ಚೆಗಳ ಮೂಲ ನಾಗಪುರ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದರ ಹಿಂದೆ 'ಹಿಂದೂರಾಷ್ಟ್ರ' ಸ್ಥಾಪನೆಯನ್ನು ವಿರೋಧಿಸುವವರನ್ನೆಲ್ಲ ಸ್ಪಷ್ಟವಾಗಿ ಗುರುತಿಸಿ ಪ್ರತ್ಯೇಕಿಸುವ ಉದ್ದೇಶವಿರುವುದನ್ನು ಗುರುತಿಸಬಹುದು. ಇದಕ್ಕೆ ಮೋದಿ ಸರ್ಕಾರದ ಹಸಿರು ನಿಶಾನೆ ಸಿಕ್ಕಿರುವುದರ ಬಗ್ಗೆ ಅಂತೂ ಯಾವ ಅನುಮಾನವೂ ಬೇಡ. ದಿನಗಳೆದಂತೆ ಕಾವೇರುತ್ತಿರುವ ಚರ್ಚೆಗಳ ನಡುವೆ ಯಾರು ದೇಶಪ್ರೇಮಿ, ಯಾರು ಅಲ್ಲ ಎಂಬುದನ್ನು ಗುರುತಿಸಲು ಇನ್ನೊಂದು ಮಾನದಂಡವನ್ನು ಘೋಷಿಸಲಾಗಿದೆ. ಇದನ್ನು ಪ್ರಾರಂಭಿಸಿರುವುದೂ ಅದೇ ಗುಂಪು. ಮಾರ್ಚ್ 3ರಂದು ಮಾತನಾಡಿದ ಆರೆಸ್ಸೆಸ್ ಸರಸಂಘಚಾಲಕ ಮೋಹನ ಭಾಗವತ್, ಭಾರತೀಯ ಯುವಜನತೆಗೆ "ಭಾರತ್ ಮಾತಾ ಕಿ ಜೈ" ಘೋಷಣೆಯನ್ನು ಕಲಿಸುವ ಅಗತ್ಯವಿದೆ ಎಂದಿದ್ದಾರೆ. ಇದನ್ನೇ ಮುಂದುವರಿಸಿರುವ ಅನುಪಮ್ ಖೇರ್‌ರಂತಹ ಕಟ್ಟರ್ ಮೋದಿ ಭಕ್ತರು ಯಾರು "ಭಾರತ್ ಮಾತಾ ಕಿ ಜೈ" ಎಂದು ಕೂಗುವುದಿಲ್ಲವೊ ಅಂಥವರನ್ನೆಲ್ಲ "ದೇಶ ವಿರೋಧಿ"ಗಳೆಂದು ಪರಿಗಣಿಸಬೇಕೆಂದು ಫತ್ವಾ ಹೊರಡಿಸಿದ್ದಾರೆ! ಉಷ್ಣಾಂಶ, ರಕ್ತದೊತ್ತಡ, ಮಧುಮೇಹ ಮುಂತಾದವುಗಳಿಗೆ ನಾನಾ ಮಾಪಕಗಳಿರುವ ಹಾಗೆ ದೇಶಭಕ್ತಿಯನ್ನು ಅಳೆಯುವ ಮಾಪಕಗಳನ್ನು ಕಂಡುಹಿಡಿಯುವ ಮೂಲಕ 'ಅಪರೂಪದ ಸಾಧನೆ' ಮಾಡಿರುವ ಇವರಿಗೆ ನಾಳೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ಬಂದರೆ ಸೋಜಿಗವಿಲ್ಲ!

ಭಾರತವನ್ನು ತಾಯಿಯೆಂದು ಕರೆದು ಆಕೆಯನ್ನು ಓರ್ವ ಕರುಣಾಮಯಿ ಹಿಂದೂ ದೇವತೆ ಎಂಬುದಾಗಿ ಕಲ್ಪಿಸಿದಾತ ಬಂಗಾಳಿ ಲೇಖಕ ಬಂಕಿಂಚಂದ್ರ ಚಟ್ಟೋಪಾಧ್ಯಾಯ. ಅವರು 1875ರಲ್ಲಿ ಬರೆದ 'ಆನಂದ ಮಠ' ಪುಸ್ತಕದಲ್ಲಿ ಮುಸ್ಲಿಂ ಆಡಳಿತಗಾರರನ್ನು ದೇಶದ ವೈರಿಗಳಂತೆ ಚಿತ್ರಿಸಲಾಗಿದೆ. ಅದರಲ್ಲಿದ್ದ ಹಿಂದೂ ದೇವತೆ ದುರ್ಗೆಯನ್ನು ಸ್ತುತಿಸುವ 'ವಂದೇ ಮಾತರಂ' ಹಾಡನ್ನು ರಾಷ್ಟ್ರಗೀತೆಯಾಗಿಸಬೇಕೆಂದು ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್ ಕೂಗೆಬ್ಬಿಸಿದಾಗ ರವೀಂದ್ರನಾಥ ಠಾಕೂರ್ ಅದನ್ನು ಬಲವಾಗಿ ವಿರೋಧಿಸಿದರು. ನಂತರದ ಬೆಳವಣಿಗೆಯೊಂದರಲ್ಲಿ ವಾರಾಣಸಿ, ಹರಿದ್ವಾರ ಮತ್ತು ಮಹಾರಾಷ್ಟ್ರದ ದೌಲತಾಬಾದ್ ಕೋಟೆಗಳಲ್ಲಿ ಹತ್ತು ಕೈಗಳ ಭಾರತ ಮಾತೆಯ ಮಂದಿರಗಳು ಸ್ಥಾಪಿಸಲ್ಪಟ್ಟವು. ಗಾಂಧಿ ಕೂಡ ಜನಗಣಮನವೆ ನಮ್ಮ ರಾಷ್ಟ್ರಗೀತೆ ಆಗಬೇಕೇ ಹೊರತು ವಂದೇ ಮಾತರಂ ಅಲ್ಲ ಎಂಬ ದೃಢ ನಿಲುವನ್ನು ಹೊಂದಿದ್ದರು. ಗಾಂಧಿ ಹಂತಕ ನತ್ತೂರಾಂ ಗೋಡ್ಸೆ ತಾನೇಕೆ ಗಾಂಧಿಯನ್ನು ಕೊಂದೆ ಎಂಬುದಕ್ಕೆ ಕೊಟ್ಟಿರುವ ಹಲವು ಕಾರಣಗಳಲ್ಲಿ ಇದೂ ಒಂದು. ನ್ಯಾಯಶಾಸ್ತ್ರದ ವಿಷಯಕ್ಕೆ ಬಂದರೆ ಭಾರತದ ಸಂವಿಧಾನ ಜನಗಣಮನವನ್ನು ರಾಷ್ಟ್ರಗೀತೆ ಎಂಬುದಾಗಿ ಮತ್ತು ವಂದೇ ಮಾತರಂಅನ್ನು ರಾಷ್ಟ್ರಕವನ ಎಂಬುದಾಗಿ ಗುರುತಿಸುತ್ತದೆ; ಆದರೆ ಇವುಗಳನ್ನು ಕಡ್ಡಾಯವಾಗಿ ಹಾಡಬೇಕೆಂದು ಒತ್ತಾಯಿಸುವುದು ಸಂವಿಧಾನ ನೀಡುವ ಧಾರ್ಮಿಕ ಸ್ವಾತಂತ್ರ್ಯದ (ವಿಧಿ 25) ಉಲ್ಲಂಘನೆ ಎಂದು ಸರ್ವೋಚ್ಚ ನ್ಯಾಯಾಲಯ ಹಲವು ವರ್ಷಗಳ ಹಿಂದೆಯೇ ತೀರ್ಪು ನೀಡಿದೆ.

ಮೋಹನ್ ಭಾಗವತರ ಹೇಳಿಕೆಗೆ ತಕ್ಷಣ ಪ್ರತಿಕ್ರಿಯಿಸಿದ ಎಂಐಎಂ ಪಕ್ಷದ ಮುಖಂಡ ಅಸಾದುದ್ದೀನ್ ಒವೈಸಿ 'ಈ ಘೋಷಣೆ ಕೂಗುವಂತೆ ಚೂರಿ ಹಿಡಿದು ಬೆದರಿಸಿದರೂ ತಾನು ಜಗ್ಗಲಾರೆ...... ತಾನು "ಜೈ ಹಿಂದ್" ಎನ್ನಲು ಸಿದ್ಧ' ಎಂದಿದ್ದಾರೆ. ತದನಂತರ ಎಂಐಎಂನ ಶಾಸಕ ವಾರಿಸ್ ಪಠಾಣ್ ಇದನ್ನೇ ಮಹಾರಾಷ್ಟ್ರ ಸದನದಲ್ಲಿ ಪುನರುಚ್ಚರಿಸಿದಾಗ ದೊಡ್ಡ ಕೋಲಾಹಲವೆದ್ದಿತು. ಈ ಸಂದರ್ಭದಲ್ಲಿ ಶಿವಸೇನಾ ಶಾಸಕ ಗುಲಾಬ್‌ರಾವ್ ಪಾಟೀಲ ಎಂಬಾತ "ಏ ನಾಯಿಗಳಿರಾ, ಈ ದೇಶದಲ್ಲಿ ಇರಬೇಕೆಂದಿದ್ದರೆ 'ವಂದೇ ಮಾತರಂ' ಹಾಡಲೇಬೇಕು" ಎಂದು ಅಪ್ಪಣೆ ಕೊಡಿಸಿದ್ದಾರೆ. ಇಡೀ ಸಮುದಾಯವನ್ನು ಉದ್ದೇಶಿಸಿ ಮಾಡಿದಂತಿರುವ ಈ ಹುಕುಮಿನ ಬಗ್ಗೆ ಮಾಧ್ಯಮಗಳು, ಅದರಲ್ಲೂ ವಿಶೇಷವಾಗಿ ಟಿಆರ್‌ಪಿ ಬೆಂಬತ್ತಿರುವ ಖಾಸಗಿ ಟಿವಿ ವಾಹಿನಿಗಳು, ತಲೆಕೆಡಿಸಿಕೊಂಡಂತಿಲ್ಲ. ಒವೈಸಿ ಮತ್ತಾತನ ಪಕ್ಷದ ಕೋಮುವಾರು ಅಜೆಂಡಾವನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಹಾಗೆ ನೋಡಿದರೆ ಎಂಐಎಂ ಮತ್ತು ಆರೆಸ್ಸೆಸ್ ಒಂದೇ ನಾಣ್ಯದ ಎರಡು ಮುಖಗಳು ಎನ್ನಬಹುದು. ಕೋಮು ವಿಷವನ್ನು ಹರಡುವುದರಿಂದ ಎರಡಕ್ಕೂ ರಾಜಕೀಯ ಲಾಭ ಇದೆ. ಕೆಲವೊಮ್ಮೆ ಇವೆರಡರ ನಡುವೆ ಹೊಂದಾಣಿಕೆ ನಡೆದಿರುವ ಆರೋಪಗಳೂ ಇವೆ. ಪಠಾಣರನ್ನು ಸದನದಿಂದ ಅಮಾನತುಗೊಳಿಸಿ ಕಲಾಪಗಳಿಂದ ಹೊರಗಿಡುವ ನಿರ್ಧಾರವನ್ನು ಎನ್‌ಸಿಪಿ ಮತ್ತು ಕಾಂಗ್ರೆಸ್ ಕೂಡ ಬೆಂಬಲಿಸಿರುವುದು ಇವೆರಡು ಪಕ್ಷಗಳ ಸೈದ್ಧಾಂತಿಕ ದೌರ್ಬಲ್ಯದ ಸೂಚಕವಾಗಿದೆ.







ಇವತ್ತು ನಮಗೆಲ್ಲಾ ದೇಶಭಕ್ತಿಯ ಪಾಠ ಹೇಳಹೊರಟಿರುವ ಇದೇ ಚೆಡ್ಡಿ ಪಡೆಗಳು ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರ ಎಂಜಲಿಗೆ ಕೈಯೊಡ್ಡಿ ಅವರ ಸೇನೆಗೆ ಭಾರತೀಯ ಯುವಕರನ್ನು ಭರ್ತಿ ಮಾಡಿಕೊಟ್ಟು "ದೇಶಭಕ್ತಿ" ಮೆರೆದ ಕತೆ ಇತಿಹಾಸದ ಪುಟಗಳಲ್ಲಿ ದಾಖಲಿಸಲ್ಪಟ್ಟಿದೆ. ಇಂದು ದೇಶಪ್ರೇಮದ ಗುತ್ತಿಗೆ ವಹಿಸಿಕೊಂಡವರಂತೆ ಆಡುತ್ತಿರುವ ಇವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತೋರಿದ ವಿದೇಶಭಕ್ತಿಯ ಕತೆಯನ್ನು ದೇಶಾದ್ಯಂತ ಬಿತ್ತರಿಸಬೇಕಾಗಿದ್ದ ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಹೆಚ್ಚಿನವು ಯಾಕೊ ಸುಮ್ಮನಾಗಿವೆ. ತೀರಾಕ್ಷುಲ್ಲಕ ವಿಚಾರಗಳ ಬಗ್ಗೆ ತಥಾಕಥಿತ ಚರ್ಚೆಗಳನ್ನು ದಿನಗಟ್ಟಳೆ ಆಯೋಜಿಸುವ ದೃಶ್ಯ ಮಾಧ್ಯಮಗಳೂ ಗಪ್‌ಚುಪ್ ಎನ್ನುತ್ತಿಲ್ಲ. ಇದಕ್ಕೆ ಕಾರಣ ದಾಳಿಯ ಭಯವೊ ಅಥವಾ ಜಾಹೀರಾತು ಸ್ತಂಭನೆಯ ಭಯವೊ ಅಥವಾ ಕೇಸರೀಕರಣವೊ ಗೊತ್ತಿಲ್ಲ.


ಹಿಂದೂ ರಾಷ್ಟ್ರವನ್ನು ಹೇರಹೊರಟಿರುವವರ ಬಲೆಗೆ ಬಿದ್ದ ವಿಶ್ವ ಸೂಫಿ ವೇದಿಕೆ ಮತ್ತು ಜಾವೆದ್ ಅಖ್ತರ್‌ರಂಥವರು "ಭಾರತ್ ಮಾತಾ ಕಿ ಜೈ" ಎಂದು ಕೂಗಿ ತಮ್ಮ "ದೇಶಭಕ್ತಿ"ಯನ್ನು ಸಾರಿ ಕೃತಕೃತ್ಯರಾಗಿದ್ದಾರೆ. ಪರಿಣಾಮವಾಗಿ ಮುಸ್ಲಿಮರನ್ನು "ಒಳ್ಳೆ ಮುಸ್ಲಿಮರು" ಮತ್ತು "ಕೆಟ್ಟ ಮುಸ್ಲಿಮರು" ಎಂದು ವರ್ಗೀಕರಿಸಿ ಸಮುದಾಯದೊಳಗೆ ಒಡಕು ಮೂಡಿಸಲು ಯತ್ನಿಸುತ್ತಿರುವ ಸಂಘ ಪರಿವಾರಕ್ಕೆ ಇಂಥವರಿಂದ ಆನೆಬಲ ಬಂದಂತಾಗಿದೆ. ಮುಸ್ಲಿಮರನ್ನು ವಿಭಜಿಸುತ್ತಿರುವುದಕ್ಕೆ ಇತ್ತೀಚಿನ ನಿದರ್ಶನವೆಂದರೆ ಉರ್ದು ಲೇಖಕರು ಹಾಗೂ ಸಂಪಾದಕರ ಮೇಲೆ ಹೇರಲಾಗಿರುವ ನಿಯಂತ್ರಣಗಳು. ಅವರೆಲ್ಲ ಈಗ ಮಾನವ ಸಂಪನ್ಮೂಲ ಇಲಾಖೆಯಡಿ ಕಾರ್ಯ ನಿರ್ವಹಿಸುವ 'ರಾಷ್ಟ್ರೀಯ ಉರ್ದು ಭಾಷಾಭಿವೃದ್ಧಿ ಮಂಡಳಿ' (ಎನ್‌ಸಿಪಿಯುಎಲ್) ಸಗಟು ಖರೀದಿ ಮಾಡುವ ಪುಸ್ತಕಗಳಲ್ಲಿ ಸರಕಾರ ಮತ್ತು ಪ್ರಭುತ್ವ ವಿರೋಧಿ ಅಂಶಗಳಿಲ್ಲವೆಂದು ಘೋಷಿಸಿ ಅದಕ್ಕೆ ಇಬ್ಬರು ಸಾಕ್ಷಿಗಳ ಸಹಿ ಪಡೆದು ಕಳುಹಿಸಿಕೊಡಬೇಕಾಗಿದೆ. ಇಲ್ಲವಾದರೆ ಕಾನೂನು ಕ್ರಮ ಎದುರಿಸಬೇಕಾಗಿ ಬರಬಹುದೆಂಬ ಎಚ್ಚರಿಕೆಯನ್ನೂ ನೀಡಲಾಗಿದೆ.

ಜಾವೆದ್ ಅಖ್ತರ್ ಇದುವರೆಗೂ ಸಾಹಿತಿಗಳಿಂದ ಪ್ರಶಸ್ತಿ ವಾಪಸಾತಿ, ಜೆಎನ್‌ಯು ವಿವಾದ, ತಿರುಚಿದ ವಿಡಿಯೊ, ನ್ಯಾಯವಾದಿಗಳ ದುಂಡಾವರ್ತನೆ ಮುಂತಾದ ಪ್ರಮುಖ ವಿಚಾರಗಳ ಬಗ್ಗೆ ತುಟಿಬಿಚ್ಚಿದಂತಿಲ್ಲ. ಸೂಫಿಗಳ ವಿಷಯಕ್ಕೆ ಬಂದರೆ ಅಂದು ಮೊಗಲ್ ಆಡಳಿತಗಾರರ ಆಧ್ಯಾತ್ಮಿಕ ಗುರುಗಳಾಗಿದ್ದ ಸೂಫಿಗಳೆಂದೂ ಅಧಿಕಾರಸ್ಥರಿಗೆ ನಿಕಟವರ್ತಿಗಳಾಗಿರಲಿಲ್ಲ. ಕೆಲವು ಸೂಫಿ ಸಂತರು ಆಳರಸರಿಂದ ದೂರ ಉಳಿದರೆ ಇನ್ನು ಕೆಲವರು ಆಳರಸರಿಗೆ ನ್ಯಾಯಸಮ್ಮತತೆ ತಂದುಕೊಟ್ಟಿದ್ದರು. ಸೂಫಿ ಸಂತ ಹಜರತ್ ನಿಜಾಮುದ್ದೀನ್ ಔಲಿಯಾರ ಕಾಲದಲ್ಲಿ ದಿಲ್ಲಿಯಲ್ಲಿ ಎಂಟು ಮಂದಿ ಸುಲ್ತಾನರ ರಾಜ್ಯಭಾರ ನಡೆದಿದೆ. ಆದರೆ ಆ ಸಂತ ಯಾರೊಬ್ಬರನ್ನೂ ತನ್ನ ಬಳಿ ಬಿಟ್ಟುಕೊಳ್ಳುತ್ತಿರಲಿಲ್ಲ. ಉದಾಹರಣೆಗೆ ಸುಲ್ತಾನ ಜಲಾಲುದ್ದೀನ್ ಖಿಲ್ಜಿ ಮಾರುವೇಷದಲ್ಲಿ ತನ್ನನ್ನು ಭೇಟಿ ಮಾಡಲಿರುವ ವಿಷಯ ತಿಳಿದುಬಂದಾಗ ಊರು ತೊರೆದು ಬೇರೆಲ್ಲಿಗೋ ಹೋಗಿದ್ದರು. ಸೂಫಿ ವೇದಿಕೆಯ ವರ್ತನೆಯನ್ನು ಟೀಕಿಸಿರುವ ಅಮೆರಿಕದ ಇಸ್ಲಾಮಿಕ್ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಒಮಿದ್ ಸಾಫಿ "ಧಾರ್ಮಿಕ ಗುರುಗಳು ಸಾಮ್ರಾಜ್ಯಶಾಹಿಗೆ ಮಣಿಯುವ ಬದಲು ದುರ್ಬಲರ ಪರವಾಗಿ ಧ್ವನಿ ಎತ್ತಬೇಕು; ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು" ಎಂದಿದ್ದಾರೆ.

"ಭಾರತ್ ಮಾತಾ ಕಿ ಜೈ" ಹೇಳುವುದರಿಂದ ಧರ್ಮಕ್ಕೆ ಯಾವುದೇ ತೊಡಕಿಲ್ಲ; ಅದು ಕೇವಲ ದೇಶಪ್ರೇಮದ ಸಂಕೇತ ಎನ್ನುವವರು ಕೆಲವೊಂದು ವಿಷಯಗಳನ್ನು ಮರೆತಿದ್ದಾರೆ. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಂಡ ನಾವು ನಮಗೊಂದು ಸಂವಿಧಾನವನ್ನು ಕೊಟ್ಟುಕೊಂಡ ತರುವಾಯವೆ ನಮ್ಮ ದೇಶ ಒಂದು ಪ್ರಜಾತಾಂತ್ರಿಕ ಗಣತಂತ್ರವೆಂದು ಗುರುತಿಸಿಕೊಂಡಿದೆ. ಸಂವಿಧಾನದಲ್ಲಿ ಇತರ ಹಲವಾರು ವಿಷಯಗಳ ಜೊತೆ ಪ್ರತಿಯೋರ್ವ ಭಾರತೀಯ ಪ್ರಜೆಯ ಹಕ್ಕು ಮತ್ತು ಕರ್ತವ್ಯಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಹಾಗಾಗಿ ಯಾರು ತಮ್ಮ ಹಕ್ಕುಗಳನ್ನು ಚಲಾಯಿಸುವುದರೊಂದಿಗೆ ಕರ್ತವ್ಯಗಳನ್ನು ಪಾಲಿಸುತ್ತಾರೊ, ಯಾರು ಸಂವಿಧಾನದ ಜಾತ್ಯತೀತತೆಯ ಆಶಯವನ್ನು ಕೃತಿರೂಪಕ್ಕಿಳಿಸುತ್ತಾರೊ, ಯಾರು ಜಾತಿ ಪದ್ಧತಿಯನ್ನು ವಿರೋಧಿಸುವುದರೊಂದಿಗೆ ಅದನ್ನು ಹೋಗಲಾಡಿಸಲು ಧನಾತ್ಮಕ ಪ್ರಯತ್ನಗಳನ್ನು ಮಾಡುತ್ತಾರೊ ಅವರೆ ನಿಜಾರ್ಥದಲ್ಲಿ ದೇಶವನ್ನು ಪ್ರೀತಿಸುವವರು. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಭಾರತವನ್ನು ಪ್ರೀತಿಸುವುದೆಂದರೆ ಭಾರತದ ಸಂವಿಧಾನಕ್ಕೆ ಗೌರವ, ಅಭಿಮಾನ, ನಿಷ್ಠೆ ತೋರುವುದು ಎಂದರ್ಥ. ಬರೀ ಪತಾಕೆ ಪ್ರದರ್ಶನ ಮತ್ತು ಘೋಷಣೆಗಳೆಂದೂ ದೇಶಪ್ರೇಮವನ್ನು ಸಂಕೇತಿಸಲಾರವು.

ಭಾರತೀಯ ಹಿಂದೂ ಸಮಾಜದ ಕಟು ವಾಸ್ತವ ಏನೆಂದರೆ ಅಲ್ಲಿ ಸ್ತ್ರೀಯರ ಮೇಲೆ ಅತ್ಯಧಿಕ ದೌರ್ಜನ್ಯ ಎಸಗುವವರು ಕುಟುಂಬಸ್ಥರು ಮತ್ತು ಪರಿಚಯಸ್ಥರೆ ಆಗಿರುತ್ತಾರೆ. ಮಹಿಳಾ ಹೋರಾಟಗಾರ್ತಿ ಕಮಲಾ ಭಾಸಿನ್ ಪ್ರಕಾರ ಶೇಕಡಾ 80ರಷ್ಟು ಮಹಿಳಾ ದೌರ್ಜನ್ಯ ಪ್ರಕರಣಗಳು ಮನೆಯೊಳಗೆ ನಡೆಯುತ್ತವೆ. ಅದೂ ಸಮೀಪದ ಸಂಬಂಧಿಗಳಿಂದ. ವರದಕ್ಷಿಣೆ ಸಾವು; ಭ್ರೂಣಹತ್ಯೆ; ಮಕ್ಕಳ ಮೇಲೆ ಅತ್ಯಾಚಾರ; ಅಪ್ರಾಪ್ತ ವಯಸ್ಕರ ಮೇಲೆ ಅತ್ಯಾಚಾರ; ಮರ್ಯಾದಾ ಹತ್ಯೆ; ಸ್ವಾತಂತ್ರ್ಯ ಸಮಾನತೆಗಳ ನಿರಾಕರಣೆ ಇವೆಲ್ಲವೂ ಪುರುಷಪ್ರಧಾನ ಭಾರತೀಯ "ಸಂಸ್ಕೃತಿ"ಯ ಭಾಗವೇ ಆಗಿವೆ. ಉದಾಹರಣೆಗೆ ಬಿಜೆಪಿ ಆಡಳಿತದ ಛತ್ತೀಸ್‌ಗಢದಲ್ಲಿ ಏನಾಗುತ್ತಿದೆ ನೋಡಿ. ಅಲ್ಲಿ 3000 ಸರಕಾರಿ ಶಾಲೆಗಳನ್ನು ಮುಚ್ಚಲಾಗಿದ್ದು ಆ ಪೈಕಿ ಶೇಕಡಾ 60ಕ್ಕೂ ಹೆಚ್ಚು ಬಾಲಕಿಯರ ಶಾಲೆಗಳಾಗಿವೆ. ಅಷ್ಟಕ್ಕೂ ಇವರಲ್ಲಿ ಹೆಚ್ಚಿನವರು ಆದಿವಾಸಿಗಳು ಮತ್ತು ದಲಿತರು. ಒಂದು ಕಡೆಯಲ್ಲಿ ಭಾರತ ಮಾತೆಗೆ ಜೈಕಾರ ಇನ್ನೊಂದು ಕಡೆ ಭಾರತೀಯ ನಾರಿಯ ದಮನವೆ ಹಿಂದೂತ್ವವಾದಿಗಳ ಅಸಲಿ ಸಂಸ್ಕೃತಿಯಾಗಿದೆ. ಭಾರತೀಯ ಪುರುಷರು ಭಾರತಾಂಬೆಯ ಹೆಣ್ಮಕ್ಕಳ ಮೇಲೆ ಇಷ್ಟೊಂದು ಶೋಷಣೆ, ದಮನ, ದೌರ್ಜನ್ಯ ಅತ್ಯಾಚಾರಗಳನ್ನು ನಡೆಸುತ್ತಿರುವ ವಾಸ್ತವ ಕಣ್ಣೆದುರೆ ಇದ್ದರೂ ತಪ್ಪನ್ನೆಲ್ಲ ಬೇರೊಬ್ಬರ ಮೇಲೆ ಹೊರಿಸುವ ಮೋಹನ ಭಾಗವತರ ಕುತಂತ್ರದ ಹೇಳಿಕೆ ಹೇಗಿದೆ ನೋಡಿ. "ಭಾರತಮಾತೆ"ಯ ತಥಾಕಥಿತ ಪೂಜಕರ ಗುರು ಭಾಗವತ ಮಹಾಶಯರ ಪ್ರಕಾರ ಅತ್ಯಾಚಾರಗಳು ನಡೆಯುತ್ತಿರುವುದು ಭಾರತದಲ್ಲಿ ಅಲ್ಲವಂತೆ, ಇಂಡಿಯಾದಲ್ಲಿ ಅಂತೆ! ವಾಸ್ತವವಾಗಿ ಇವರುಗಳು ವೈವಾಹಿಕ ಅತ್ಯಾಚಾರವನ್ನು ಅಪರಾಧವೆಂದು ಘೋಷಿಸಲು ಒಪ್ಪದವರು, ಮಹಿಳೆಯರನ್ನು ವೇಶ್ಯೆಯರೆಂದು ಕರೆಯುವ ಮಂತ್ರಿಗಳನ್ನು ಹೊಂದಿರುವವರು, ಸ್ವಾತಂತ್ರ್ಯದ ಹೆಸರಲ್ಲಿ ಬಟ್ಟೆ ಬಿಚ್ಚಿ ಬತ್ತಲಾಗಿ ಎನ್ನುವವರು, ಮುಸ್ಲಿಂ ಮಹಿಳೆಯ ಹೊಟ್ಟೆ ಸೀಳಿ ತ್ರಿಶೂಲದಿಂದ ಭ್ರೂಣವನ್ನು ಚುಚ್ಚಿ ಮೇಲೆತ್ತಿ ಕೇಕೆ ಹಾಕುತ್ತ ಸಂಭ್ರಮಿಸುವವರು, ಸಂವಿಧಾನದ ಜಾತ್ಯತೀತತೆಯನ್ನು ಧಿಕ್ಕರಿಸುವವರು, ಹೆಣ್ಣನ್ನು ಕೀಳಾಗಿ ಪರಿಗಣಿಸುವ ಮನುಸ್ಮೃತಿಯನ್ನೆ ಜಾರಿಗೆ ತರಲಿಚ್ಛಿಸುವವರು, ಸಂವಿಧಾನದ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ನಂತರ ಯಾವುದೇ ಹಿಂಜರಿಕೆ ಇಲ್ಲದೆ ಅದನ್ನು ಉಲ್ಲಂಘಿಸುವ ಜನಪ್ರತಿನಿಧಿಗಳನ್ನು ಸಾಕುವವರು. ಇಂಥವರು ಈಗ "ಭಾರತ್ ಮಾತಾ ಕಿ ಜೈ" ಘೋಷಣೆ ಕೂಗದವರನ್ನು ನೇಣುಗಂಬಕ್ಕೇರಿಸಲು ಹೊರಟಿದ್ದಾರೆ! ಇದಕ್ಕಿಂತ ದೊಡ್ಡ ವಿಪರ್ಯಾಸ ಯಾವುದಿದೆ?

ಹೀಗಿರುವಾಗ ಸಂಘ ಪರಿವಾರದ ಮಿಕ್ಕೆಲ್ಲ ಘೋಷಣೆಗಳಂತೆ "ಭಾರತ್ ಮಾತಾ ಕಿ ಜೈ" ಕೂಡ ಒಂದು ದುರುದ್ದೇಶಪೂರಿತ ಪೊಳ್ಳು ಘೋಷಣೆ ಎಂಬುದು ಸ್ಪಷ್ಟವಿದೆ. ಅದರ ಹಿಂದೆ ಎರಡು ಉದ್ದೇಶಗಳಿವೆ. ಒಂದು, ಸಮಾಜದ ಧ್ರುವೀಕರಣ ಮತ್ತು ಶ್ರೇಣೀಕರಣ. ಎರಡು, ಧರ್ಮಾಧಾರಿತ ಹಿಂದೂ ರಾಷ್ಟ್ರದ ಸ್ಥಾಪನೆಗೆ ಪ್ರತಿರೋಧವನ್ನು ಹತ್ತಿಕ್ಕುವುದು. ಇದು, ತಮ್ಮದೆ ಸರ್ವಶ್ರೇಷ್ಠ ಜನಾಂಗ ಎಂದುಕೊಳ್ಳುವವರು ಸಮಾಜದ ಮೇಲೆ ತಮ್ಮ ಸರ್ವಾಧಿಕಾರವನ್ನು ಹೇರಲೆತ್ನಿಸುವ ಫ್ಯಾಸಿಸ್ಟ್ ತಂತ್ರಗಾರಿಕೆಯಲ್ಲದೆ ಇನ್ನೇನೂ ಅಲ್ಲ. ಹಿಂದೂತ್ವವಾದಿಗಳ ಈ ವಿನಾಶಕಾರಿ ರಾಜಕಾರಣವನ್ನು ಸಂಪೂರ್ಣವಾಗಿ ತಿರಸ್ಕರಿಸುವ ಬಹುಸಂಖ್ಯಾತ ಸಜ್ಜನ ಹಿಂದೂಗಳೆಲ್ಲರೂ ಒಗ್ಗಟ್ಟಾಗಿ ಭಾರತವನ್ನು ಏಕಧರ್ಮೀಯ, ಏಕಸಂಸ್ಕೃತಿಯ, ಏಕನಾಯಕತ್ವದ ನಾಡಾಗಿ ಪರಿವರ್ತಿಸಲು ಹೊರಟಿರುವ ಸಂಘ ಪರಿವಾರದ ಪ್ರಯತ್ನಗಳನ್ನು ಹತ್ತಿಕ್ಕಬೇಕಾಗಿದೆ.



---

13 ← ಭಾರತಮಾತಾ

ನದಿಗಳು ಬತ್ತುತ್ತಿವೆ, ರಸಗೊಬ್ಬರ ಮತ್ತು ಕೀಟನಾಶಕಗಳಿಂದ ಭೂಮಿ ವಿಷಮಯವಾಗುತ್ತಿದೆ, ಅರಣ್ಯಗಳು ನಾಶವಾಗುತ್ತಿವೆ, ಪಕ್ಷಿಗಳು ಸಾಯುತ್ತಿವೆ, ವನ್ಯಜೀವಿಗಳಿಗೆ ವಸತಿ ಇಲ್ಲದಂತಾಗುತ್ತಿದೆ. ವಾಯು ಮಲಿನಗೊಂಡಿದ್ದು ಜನಸಮುದಾಯ ವಿವಿಧ ರೋಗಗಳಿಂದ ಬಳಲುತ್ತಿದೆ. ಅಂತರ್ಜಲ ಕುಸಿಯುತ್ತಿದೆ. ಜಲಮಾಲಿನ್ಯ ವಾಯುಮಾಲಿನ್ಯ ಭೂಮಾಲಿನ್ಯ, ಆಕಾಶಮಾಲಿನ್ಯ ಹೀಗೆ ಎಲ್ಲ ತೆರನಾದ ಅವ್ಯವಸ್ಥೆಯಿಂದಾಗಿ ಭೂಮಿಯ ತಾಪಮಾನ ಹೆಚ್ಚುತ್ತಿದೆ. ಈಗಾಗಲೇ 1.5 ಸೆಲಿಸಿಯಸ್‌ನಷ್ಟು ಹೆಚ್ಚಾಗಿದೆ. ಇದು 5 ಸೆಲಿಸಿಯಸ್ಸಿನಷ್ಟು ಹೆಚ್ಚಾದರೆ ಜಗತ್ತು ಸರ್ವನಾಶದ ಕಡೆಗೆ ಮುನ್ನುಗ್ಗುವುದರಲ್ಲಿ ಸಂಶಯವಿಲ್ಲ, ಆಗ ವಿಶ್ವಮಾತೆಯ ಮಗಳಾದ ಭಾರತಮಾತೆಯ ಪಾಡೇನಾಗಬಹುದು?

ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳಿಂದಾಗಿ ಭಾರತ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಅವಕಾಶವಾದಿಗಳು, ಕೋಮುವಾದಿಗಳು, ಮೂಲಭೂತವಾದಿಗಳು, ಆತಂಕವಾದಿಗಳು ಮತ್ತು ಉಗ್ರಗಾಮಿಗಳಿಂದಾಗಿ ಅಮಾಯಕ ಹಿಂದು, ಮುಸ್ಲಿಂ ಮತ್ತು ಇನ್ನಿತರ ಧರ್ಮಗಳ ಜನಸಮುದಾಯ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುವ ಸ್ಥಿತಿ ತಲುಪುತ್ತಿದೆ! ಇಂಥ ಸಂದರ್ಭದಲ್ಲಿ 'ಭಾರತಮಾತಾ ಕಿ ಜೈ' ಎಂದು ಘೋಷಿಸುವುದೆಂದರೆ, ನಮ್ಮ ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳ ಸುಲಿಗೆಯಿಂದ, ಅರಣ್ಯಗಳ್ಳರಿಂದ, ಭ್ರಷ್ಟಾಚಾರಿಗಳಿಂದ, ಭೂಗಳ್ಳರಿಂದ, ಜಾತಿವಾದಿಗಳಿಂದ, ಕೋಮುವಾದಿಗಳಿಂದ, ಉಗ್ರಗಾಮಿಗಳಿಂದ. ಮತ್ತು ಮತಾಂಧರಿಂದ ರಕ್ಷಿಸುವುದು ಎಂದೇ ಅರ್ಥವಾಗುತ್ತದೆ.


ರಾಷ್ಟ್ರವಾದ ಮತ್ತು ಕೋಮುವಾದ ಒಂದೇ ನಾಣ್ಯದ ಎರಡು ಮುಖಗಳು. ಅಂತೆಯೆ ಕೋಮುವಾದಿಗಳ ರಾಷ್ಟ್ರವಾದದ ಬಗ್ಗೆ ಬಹಳ ಮಾತನಾಡುತ್ತಾರೆ. ಅವರ ಹುಸಿ ರಾಷ್ಟ್ರವಾದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೇ ಬಯಲಾಗಿದೆ. ಅವರು ಸ್ವಾಮಿ ವಿವೇಕಾನಂದ ಅವರು ಬಗ್ಗೆ ಬಹಳ ಮಾತನಾಡುತ್ತಾರೆ. ಆದರೆ 'ಇಸ್ಲಾಂನ ವಾಸ್ತವದ ಸಹಾಯವಿಲ್ಲದೆ ವೇದಾಂತದ ಸಿದ್ಧಾಂತಗಳು ನಿರುಪಯುಕ್ತ. ನಮ್ಮ ಮಾತೃಭೂಮಿಗಾಗಿ ಇಸ್ಲಾಮಿನ ದೇಹ ಮತ್ತು ವೇದಾಂತದ ಮೆದುಳು ಅವಶ್ಯವಿದೆ. ಎರಡು ಮಹಾನ್ ವ್ಯವಸ್ಥೆಗಳಾದ ಹಿಂದೂ ಮತ್ತು ಇಸ್ಲಾಂ ಕೂಡಿದಾಗ ಮಾತ್ರ ಭವಿಷ್ಯದಲ್ಲಿ ಭಾರತ ಪರಿಪೂರ್ಣತೆಯನ್ನು ಸಾಧಿಸುವುದು' ಎಂದು ಸ್ವಾಮಿ ವಿವೇಕಾನಂದ ಅವರು ಹೇಳಿದ್ದಾರೆ.

ಕೋಮುವಾದಿಗಳು ಭಗತ್ ಸಿಂಗ್ ಬಗ್ಗೆ ಬಹಳ ಹೇಳುತ್ತಾರೆ. ಆದರೆ ಭಗತ್ ಸಿಂಗ್ ಅವರು ಕೋಮುವಾದಕ್ಕೆ ತದ್ವಿರುದ್ಧವಾಗಿದ್ದರು. 'ನಾನೇಕ ನಾಸ್ತಿಕ?' ಎಂಬ ಪುಸ್ತಿಕೆಯನ್ನೂ ಅವರು ಬರೆದಿದ್ದಾರೆ. ಭಗತ್ ಸಿಂಗ್ ದೃಷ್ಟಿಯಲ್ಲಿ ಭಾರತ ಎಂದರೆ ಅನ್ನ ಬಟ್ಟೆ ಮತ್ತು ಹಸಿವಿನಿಂದ ಬಳಲುತ್ತಿರುವ ಕೋಟ್ಯಂತರ ಜನರು.

ಆರ್‌ಎಸ್‌ಎಸ್ ಸ್ಥಾಪಕ ಡಾ. ಹೆಡಗೆವಾರ್ ಅವರು ಡಾ. ಬಿ.ಎಸ್. ಮೂಂಜೆ ಅವರನ್ನು ಫ್ಯಾಸಿಸ್ಟ್ ಇಟಲಿಗೆ ಕಳುಹಿಸಿದರು. 1931ರಲ್ಲಿ ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸ್ಸೋಲಿನಿಯನ್ನು ಡಾ. ಮೂಂಜೆ ಭೇಟಿ ಮಾಡಿದರು. ಫ್ಯಾಸಿಸ್ಟ್ ಪಾರ್ಟಿ ದೇಶದ ಯುವಕರಿಗೆ ಕೊಡುತ್ತಿದ್ದ ತರಬೇತಿಯಿಂದ ಮೂಂಜೆ ಬಹಳ ಪ್ರಭಾವಿತರಾದರು. ನಂತರ ಆ ತರಬೇತಿಯನ್ನೇ ಆರ್‌ಎಸ್‌ಎಸ್‌ನಲ್ಲಿ ಭಟ್ಟಿ ಇಳಿಸಿದರು! ಇಂಥವರಿಗೆ ವಿವೇಕಾನಂದರಂಥವರಾಗಲಿ, ಭಗತ್ ಸಿಂಗ್‌ರಂಥವರಾಗಲಿ ಅರ್ಥವಾಗಲು ಸಾಧ್ಯವೆ?

ಭಾರತದ ಪ್ರಜಾಪ್ರಭುತ್ವಕ್ಕೆ ಫ್ಯಾಸಿಸ್ಟ್ ಶಕ್ತಿಗಳು ಮಾರಕವಾಗಿವೆ ಎಂಬುದನ್ನು ಭಾರತೀಯರು ಎಷ್ಟು ಬೇಗ ಅರ್ಥ ಮಾಡಿಕೊಳ್ಳುವರೊ ಅಷ್ಟು ಬೇಗ ಭಾರತಕ್ಕೆ ಒಳಿತಾಗುವುದು.

ಬೋಲೋ ಭಾರತ ಮಾತಾ ಕಿ ಜೈ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಕ್ಕನ ಬೆತ್ತಲೆ

ಯೇಸು ಮಗುವಿನ ಮುಗ್ಧತೆಯನ್ನು ಕಂಡಿದ್ದ. ಆ ಮುಗ್ಧತೆಯಲ್ಲಿ ನಿರ್ವಂಚನೆಯನ್ನು ಕಂಡಿದ್ದ. ಒಳಗೊಂದು ಹೊರಗೊಂದು ಇಲ್ಲದೆ ಕಪಟರಹಿತವಾಗಿರುವುದನ್ನು ಕಂಡಿದ್ದ. ಭಕ್ತಿಯಲ್ಲಿ ಕಪಟತನ ಮಾಡಬೇಡಿರೆಂದು ಹೇಳಿದ್ದ. ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಗಳೆರಡಕ್ಕೂ ಒತ್ತು ನೀಡಿದ್ದ. ಬೋಧನೆ ಅಂತೇನೇನೋ ಮಾಡಿಕೊಂಡಿರದೇ ಆಗಿನ ವಿದ್ಯಮಾನಗಳಿಗೆ ಪ್ರತಿಸ್ಪಂದಿಸುತ್ತಾ ಅದಕ್ಕೆ ಅನುಗುಣವಾಗಿ ತನ್ನ ಒಳದೃಷ್ಟಿಯಿಂದ ಕಂಡುಕೊಂಡಂತಹ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದ. ಅವುಗಳನ್ನೇ ಜನ ಬೋಧನೆ ಎಂದು ಕರೆದರು. ಬೆಟ್ಟದ ಮೇಲಿನ ಪ್ರಬೋಧನೆಯಂತೂ ಆಗಿನ ಸಮಾಜದಲ್ಲಿ ಪರಿಸಾಯರು, ಅಂದರೆ ಯಹೂದಿಗಳ ಪುರೋಹಿತರು ಧರ್ಮದ ದಂಧೆಯಲ್ಲಿ ತೊಡಗಿರುವುದನ್ನು ನೇರಾನೇರ ಖಂಡಿಸುವುದೇ ಆಗಿದ್ದರೂ, ಬಹಳ ಸಾತ್ವಿಕವಾಗಿ, ಭಯವುಳ್ಳ ದೇವರ ಬಗ್ಗೆ ಪ್ರೀತಿಯನ್ನು ಉಂಟುಮಾಡುವ ಹಾಗೆ ಇತ್ತು. ಇದರಿಂದ ಯೇಸುವಿನ ಬೆಟ್ಟದ ಮೇಲಿನ ಪ್ರಬೋಧನೆಯು ಬಹಳ ಜನಪ್ರಿಯವಾಯ್ತು. ಆ ಜನಪ್ರಿಯತೆಗೆ ಮುಖ್ಯ ಕಾರಣವೆಂದರೆ, ಅವನು ಸಾಂಪ್ರದಾಯಕ ಪರಿಸಾಯರಂತೆ ಮಾತಾಡಿರಲಿಲ್ಲ. ಬದಲಾಗಿ ತನ್ನದೇ ಆದಂತಹ ಹೊಸ ದೃಷ್ಟಿಕೋನದಿಂದ ನೋಡುತ್ತಾ ಅದೇ ವಿಷಯಗಳನ್ನು ಹಂಚಿಕೊಂಡಿದ್ದ. ಹಾಗಾಗಿ ಅವನಲ್ಲೇನೋ ವಿಶೇಷವಿದೆ ಎಂದೇ ಅವನ ಸುತ್ತ ಜನ ನೆರೆಯುತೊಡಗಿದರು. ಅವನ ಮಾತುಗಳನ್ನು ಕೇಳತೊಡಗಿದರು. ಮಗುವಿನ ಮುಗ್ಧತೆ ಎಂದರೆ ಅತ್ಯಂತ ಮುಕ್ತ ಮತ್ತು ಪಾರದರ್ಶಕವಾದಂತಹ ಮನಸ್ಥಿತಿಯನ್ನು ಹೊಂದಿರುವುದು. ಆದರೆ ಮಹಾವೀರನು ಇದನ್ನು ಬರಿಯ ಮನಸ್ಸಿಗೆ ಮಾತ್ರವೇ ಸೀಮಿತಗೊಳಿಸದೇ ಅದನ್ನು ದೇಹಭಾವಕ್ಕೂ ವಿಸ್ತರಿಸಿದ. ಆದ್ದರಿಂದಲೇ ವರ್ಧಮಾನನಾದ ಅವನು ಮಹಾ-ವೀರ ಎಂದೆನಿಸಿದ್ದು. ಆದರೆ ಆಧ್ಯಾತ್ಮದ ಬೋಧನೆಗಳನ್ನೂ ಆಗಿನಿಂದಲೂ ಪುರುಷರೇ ಮಾಡಿಕೊಂಡು ಬಂದಿದ್ದರು. ಸ್ತ್ರೀಯರಿಗೆ ಅಧಿಕಾರವಾಣಿಯಿಂದ ಬೋಧಿಸುವಂತಹ ಆಧ್ಯಾತ್ಮದ ಪೀಠವೇನೂ ದೊರಕಿರಲಿಲ್ಲ. ಅವಳು ಮಾನಸಿಕವಾಗಿ ಮುಕ್ತಳಾಗಿ ತನ್ನ ಆಧ್ಯಾತ್ಮಿಕ ಅನುಭೂತಿಯನ್ನು ಅಭಿವ್ಯಕ್ತಪಡಿಸಲು ಅಥವಾ ಬೋಧನೆ ಮಾಡಲು ಅವಕಾಶವೇನೂ ಇಲ್ಲದಿರುವಾಗ ಇನ್ನು ಅವಳು ಪಾರ್ಶ್ವನಾಥ, ಬಾಹುಬಲಿ, ಮಹಾವೀರರಂತೆ ದಿಗಂಬರಳಾಗಲು ಆಧ್ಯಾತ್ಮಿಕ ಸಮಾಜದಲ್ಲೂ ಕೂಡ ಅಂತಹ ಅವಕಾಶವೇನೂ ಕಲ್ಪಿತವಾಗಿರಲಿಲ್ಲ. ಜೈನರಲ್ಲೂ ಕೂಡ ಪುರುಷರಿಗಷ್ಟೇ ದಿಗಂಬರರಾಗಿರುವಂತಹ ಹಕ್ಕು ದೊರಕಿತ್ತು.

ದಿಗಂಬರ ಸಾಧುಗಳು

ಅಂದಹಾಗೆ ಭಾರತದಲ್ಲಿ ತಂತ್ರಸಾಧಕರ, ಅಘೋರಿಗಳ, ನಾಗಸಾಧುಗಳ ನಗ್ನದೇಹದ ಪರಂಪರೆಯೇ ಇದ್ದರೂ ದಿಗಂಬರ ಸನ್ಯಾಸಿನಿಯರ ಉಲ್ಲೇಖ ಬೆರಳೆಣಿಕೆಯಷ್ಟು ಕಡಿಮೆಯೇ. ಕಾಶ್ಮೀರದ ಲಲ್ಲೇಶ್ವರಿಯದೊಂದು ಪ್ರಸ್ತಾಪವಾದರೆ ಮತ್ತೊಂದು ಅಕ್ಕಮಹಾದೇವಿಯದು. ಶೂನ್ಯಪೀಠಾಧ್ಯಕ್ಷ ಅಲ್ಲಮನು ಅಕ್ಕನ ವೈರಾಗ್ಯವನ್ನು ಪರೀಕ್ಷಿಸಲೋಸುಗ 'ಮುದ್ರೆಯನ್ನು ಮುಚ್ಚಿಕೊಂಡಿದ್ದೀ ಯೆಂದು' ಕೆಣಕಿದನು ಎಂಬಂತಹ ಅಕ್ಕ ಮತ್ತು ಅಲ್ಲಮನ ಸಂಭಾಷಣೆಯ ವಿವರಗಳನ್ನು ನಾವು ಹೊಂದಿರುವುದಾದರೂ, ಅವಳು ಭೌತಿಕವಾಗಿ ಬೆತ್ತಲಾಗಿರಲೇ ಇಲ್ಲ ಎನ್ನುವುದೇ ಸರಿ. ಅವಳು ಕೌಶಿಕನರಮನೆಯಲ್ಲಿ ಅವನಿಟ್ಟ ಬಟ್ಟೆಯನ್ನು ಬಿಟ್ಟು ಹೊರಟಳೆಂದರೆ, ಬಟ್ಟೆ ಎಂಬುದು ದಾರಿ ಎಂಬ ಅರ್ಥವೇ ಹೊರತು ತೊಟ್ಟ ಬಟ್ಟೆಯೇನಲ್ಲ ಎಂಬುದು ಅದರರ್ಥ. ಎಂ.ಎಂ.ಕಲ್ಬುರ್ಗಿಯವರು ಕೂಡ ತಮ್ಮದೊಂದು ಲೇಖನದಲ್ಲಿ ಸವಿಸ್ತಾರವಾಗಿ ಈ ಮಾತಿಗೆ ಪುಷ್ಟಿಕೊಡುವಂತೆ ಹೇಳುತ್ತಾರೆ. ಒಂದು ಹೆಣ್ಣು ತನ್ನ ಸಹಜ ಸ್ವಭಾವವಾದ ಸಂಕೋಚವನ್ನು ಬಿಟ್ಟು, ಅಂತಹ ಕಾಲದಲ್ಲಿ ಬಟ್ಟೆಯನ್ನು ಕಿತ್ತೊಗೆದು ನಗ್ನಳಾಗಿರಲು ಸಾಧ್ಯವಿಲ್ಲ, ಶರಣ ಶರಣೆಯರ ವಚನಗಳಲ್ಲಿ ಅದರ ಉಲ್ಲೇಖಗಳಿಲ್ಲ.


ತನ್ನ ನಗ್ನತೆಯು ತನಗೆಷ್ಟೇ ಸಹಜವಾಗಿದ್ದರೂ, ಅದರ ಬಗ್ಗೆ ತನಗೆ ಯಾವುದೇ ಪೂರ್ವಾಗ್ರಹಗಳಿರದಿದ್ದರೂ, ಅಂತೆಯೇ ಇತರರ ನಗ್ನತೆಯ ಬಗ್ಗೆಯೂ ಯಾವುದೇ ನಕಾರಾತ್ಮಕ ಧೋರಣೆಗಳಿರದಿದ್ದರೂ, ಒಬ್ಬರ ನಗ್ನತೆಯು ಸಮಾಜದಲ್ಲಿ ಸೃಷ್ಟಿಸಬಹುದಾದಂತಹ ಸಾರ್ವಜನಿಕ ತಲ್ಲಣಗಳ ಬಗ್ಗೆ ಅರಿವಿರುತ್ತದೆ. ಹುಟ್ಟಿ, ಬದ್ದು ನಗ್ನಳಾಗಿ, ಅದನ್ನು ಸಮರ್ಥಿಸಿಕೊಳ್ಳುತ್ತಾ, ತನ್ನ ಸಮಯ ಮತ್ತು ಶ್ರಮವನ್ನು ವ್ಯರ್ಥ ಮಾಡಬಾರದೆಂಬ ಸಾಧಾರಣ ಅರಿವು ಇದ್ದಿರುತ್ತದೆ. ಮಾನಸಿಕವಾಗಿ ಬಹಳ ಸಮಾಧಾನಿಯೂ, ಸಮಚಿತ್ತವುಳ್ಳಂತಹ ಹೆಣ್ಣು ತನ್ನ ಅರಿವೆಗಳನ್ನು ಕಿತ್ತೊಗೆದು ಕೊಂಡು ಹೋಗುವುದಿಲ್ಲ ಎಂಬುದು ಒಂದು ಸಕಾರಣ ವಿಶ್ಲೇಷಣೆ.

ಬಟ್ಟೆ ಬಿಟ್ಟಳು

ಏನೇ ಆಗಲಿ, ಮಹಾದೇವಿಯು ತನ್ನ ಶಿವಭಕ್ತಿಗೆ ತೊಡಕಾದ ಕೌಶಿಕನೆಂಬ ಜೈನರಾಜನು ಒಡ್ಡಿದ್ದ ಅಡೆತಡೆಗಳನ್ನು ಮೀರಿ ಹೊರಗೆ ಬಂದಳೆಂಬುದು ಸತ್ಯ, ಆದರೆ ಅವಳು ಬೆತ್ತಲಾದಳೇ?

ಕೌಶಿಕನ ಅರಮನೆಯ ವೈಭವವನ್ನು ಧಿಕ್ಕರಿಸಿ, ಅವನೊಡನೆ ಅನುಭವಿಸಬಹುದಾದ ವಿಷಯ ಲೋಲುಪತೆಗಳನ್ನು ನಿರಾಕರಿಸಿ, ಅವನು ಒಡ್ಡಿದ್ದ ಭಯದ ಸರಪಳಿಗಳನ್ನು ಕಿತ್ತೊಗೆದು, ಆಗಿನ ಸಮಾಜವು ಗಂಡನನ್ನು ಬಿಟ್ಟ ಹೆಣ್ಣನ್ನು ಏನೆಲ್ಲಾ ಅನ್ನುವರು ಎಂಬುದನ್ನೂ ಕೂಡ ಗಣಿಸದೇ, ಸ್ವತಂತ್ರವಾಗಿ, "ಹಸಿವಾದರೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆಬಾವಿಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು, ಆತ್ಮ ಸಂಗಾತಕೆ ಚೆನ್ನಮಲ್ಲಿಕಾರ್ಜುನ ನೀನೆನಗುಂಟು" ಎಂದು ಹೊರಗೆ ಬರುವುದು ಬಹು ಧೈರ್ಯದ ಮಾತಾಗಿತ್ತು. ಲೌಕಿಕವಾಗಿ ಎಲ್ಲಾ ಬಿಟ್ಟವರು ಅಂದರೆ ಮಾನಮರ್ಯಾದೆ ಲಜ್ಜೆ ಎಲ್ಲಾ ಬಿಟ್ಟವರು ಎಂಬುದು ಸಾಧಾರಣಿಗಳ ಮಾತು. ಸಮಾಜದಲ್ಲಿ ಒಪ್ಪಿತವಾದ ಶಿಷ್ಟಾಚಾರಗಳನ್ನು ಕಿತ್ತೊಗೆದು ಸ್ವತಂತ್ರವಾಗಿ ಹೆಣ್ಣೊಂದು ಹಾಗೆ ಬರುವುದು ಸಲೀಸಾದ ವಿಷಯವೇನಲ್ಲ. ಅತ್ತೆಮಾವಗಂಜಿ ಸುತ್ತೇಳು ನೆರೆಗಂಜಿ ಹೆಣ್ಣಾದವಳು ಗಂಡನ ಮನೆಯಲ್ಲಿ ಬದುಕಬೇಕು. ಗಂಡನ ಮನೆಯ ಸಂಕಟ, ಕಷ್ಟನೋವುಗಳನ್ನು ತಾನು ಹಲ್ಲು ಕಚ್ಚಿ ಭರಿಸಬೇಕೇ ಹೊರತು ಮುಕ್ತವಾಗಿ ಅದನ್ನು ಹೊರ ದಬ್ಬುವ ಛಾತಿಯಿರುವವಳನ್ನು ಗಯ್ಯಾಳಿ ಎಂದೀತು ಜನಪದ. ಜಾನಪದದಲ್ಲಿ ಎಲ್ಲವನ್ನೂ ಸೈರಿಸಿಕೊಂಡು ಹೋಗುವ ಹೆಣ್ಣಿಗೇ ಮಾನ್ಯತೆ.

ಮಹಿಳೆಯರಿಂದ ಹುಟ್ಟಿದ ಜಾನಪದವೂ ಕೂಡ ಪುರುಷಾಧಿಕ್ಯವನ್ನು ಸಹಿಸಿಕೊಂಡು ಹೋಗುತ್ತದೆ. ಬಹಳಷ್ಟು ಬಾರಿ ಸಮ್ಮತಿಸುತ್ತದೆ. ಹಾಗಿರುವಾಗ ತಾನು ಮಾಡುವ ಭಕುತಿಯನ್ನು ಒಪ್ಪದ ನಾಸ್ತಿಕ ಮತ್ತು ಜೈನ ರಾಜ ಕೌಶಿಕನ ಬೆದರಿಕೆಗೆ ಮತ್ತು ತಂದೆ ತಾಯಿಯರ ಸಾಂಪ್ರದಾಯಿಕ ಗೋಳಾಟಕ್ಕೆ ಮಣಿದು ಅಕ್ಕ ಅವನನ್ನು ವರಿಸಿದರೂ, ಬರುಬರುತ್ತಾ ತನ್ನ ಸೈದ್ಧಾಂತಿಕ ನೆಲೆಯಲ್ಲಿ ಗಟ್ಟಿಗೊಂಡಿದ್ದಳು. ಹಾಗಾಗಿ ಅವನನ್ನು ವರಿಸುವ ಮುನ್ನದ ಬೆದರಿಕೆಗಳಿಲ್ಲವೂ ಮುಂದೆಯೂ ಇದ್ದರೂ ಕೂಡ ಅವಳು ಅವನನ್ನು ತ್ಯಜಿಸುವ ದಿಟ್ಟ ನಿರ್ಧಾರವನ್ನು ಕೈಗೊಂಡಿದ್ದಳು. ಆಗ ಗಂಡನನ್ನು ತ್ಯಜಿಸುವುದೆಂದರೆ, ನಡುಬಯಲಲ್ಲಿ ಬೆತ್ತಲಾದಂತೆ. ಸಮಾಜವನ್ನು ಎದುರು ಹಾಕಿಕೊಂಡಂತೆ. ಸಾಧಾರಣವಾದ ರೈತನೋ, ಇನ್ಯಾವುದಾದರೂ ಕಸುಬಿನ ಗಂಡನನ್ನು ಬಿಟ್ಟರೇನೇ ಒಪ್ಪದ ಸಮಾಜವು, ಇನ್ನು ನಾಡನಾಳುವ ದೊರೆಯ ಮಡದಿಯಾಗಿದ್ದು ಅಲ್ಲಿಂದ ಹೊರಗೆ ಬರುವುದು ಎಂದರೆ ಅದೊಂದು ಸಮಾಜಕ್ಕೆ ಅರಗಿಸಿಕೊಳ್ಳಲಾಗದ್ದು, ಧೈರ್ಯದ ಪರಾಕಾಷ್ಠೆ. ಅವಳಿಗೆ ಸಮಾಜದ ಯಾವುದೇ ಸ್ತರದ ಜನರೂ ಆಸರೆ ಕೊಡಲಾರರು. ಅಷ್ಟೇಕೆ ಅವಳ ತಂದೆತಾಯಿಗಳೂ ಕೂಡ ಆಶ್ರಯ ನೀಡಲಾರರು. ತಮಗೆ ತೊಂದರೆಯಾದೀತೆಂದು ಮದುವೆಯಾಗಲು ಒಪ್ಪಿಸಿದ ತಂದೆತಾಯಿಗಳ ಬಳಿಗೆ ಹೋಗಿ ತಾನು ಗಂಡನ ತ್ಯಜಿಸುವ ವಿಷಯವನ್ನು ಹೇಳುವುದರ ಔಚಿತ್ಯವಾದರೂ ಏನಿರುವುದು ಮತ್ತು ಅವರಿಂದ ಎಂತಹ ಪ್ರತಿಕ್ರಿಯೆ ಮತ್ತು ಸಹಕಾರ ನಿರೀಕ್ಷಿಸಬಹುದು. ಅಕ್ಕನಿಗೆ ಇವುಗಳೆಲ್ಲದರ ಅರಿವಿತ್ತು. ಆದರೆ ಅವಳು ತೀರ್ಮಾನಿಸಿಯಾಗಿತ್ತು, ಹಂಗಿನರಮನೆಗಿಂತ ಹಿಂಗದದ ಗುಡಿಲೇಸು ಎಂದು ಯಾವ ಸಹಾಯ,




ಸಹಕಾರದ ನಿರೀಕ್ಷೆಯಿರದೇ ಬಟ್ಟೆ ಬಯಲಿಗೆ ಬಂದಿದ್ದಳು. ಕುಹಕಿಗಳು ನಿಂದಿಸಿದರೆ ಅದಕ್ಕೂ ಸಿದ್ಧಳಿದ್ದಳು. ಅವಳಿಗೆ ಚೆನ್ನಾಗಿ ಗೊತ್ತಿತ್ತು ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗ ಕರಡಿಗಳಿಗಂಜಿದೊಡೆಂತಯ್ಯಾ ಎಂದು. ಆದರೆ ಅವಳಿಗೆ ನಿರೀಕ್ಷಿಸಿದರೂ, ನಿರೀಕ್ಷಿಸದಿದ್ದರೂ ಮುಂದೆ ಒದಗಿದ್ದ ಭಾಗ್ಯ ಶರಣರ ಸಂಗ. ಮರ ಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣತರುಮರಾದಿಗಳ ಸುಡಲಾಗುವಂತೆ, ಆತ್ಮ ಆತ್ಮಗಳು ಮಥನಿಸಲು ಸಾಧ್ಯ. ಅನುಭಾವ ಹುಟ್ಟುವುದು ಎಂದು ಅವಳು ತಿಳಿದಿದ್ದಳು. ಹಾಗೆಯೇ ಅದನ್ನು ಮುಂದೆ ಪೂರೈಸಿಕೊಂಡಳೂ ಕೂಡ.

ಅಕ್ಕನದೊಂದು ಘನತೆಯ ವಿಚ್ಛೇದನ

ಗಂಡನನ್ನು ಬಿಟ್ಟವಳಿಗೆ ಬುದ್ಧಿ ಹೇಳಿ ಮತ್ತೆ ಹಿಂದಕ್ಕೆ ಕಳುಹಿಸುವಂತಹ ಸಾಂಸಾರಿಕ ಜನಗಳ ಮಧ್ಯೆ ತನ್ನ ಅಕ್ಕಾ ಕೇಳವ್ವಾ ನಾನೊಂದು ಕನಸ ಕಂಡೆ ಎಂದು ತನ್ನ ಮಲ್ಲಿಕಾರ್ಜುನನೆಂಬ ಗೊರವನ ಬಗ್ಗೆ ಹೇಳಿಕೊಂಡು ಅಲೆದಾಡದೇ, ಶರಣರ ಸಂಗದಲ್ಲಿ ತನ್ನ ಇಷ್ಟ ದೈವವಾದ ಮಲ್ಲಿಕಾರ್ಜುನನ ಅರಸಿಕೊಂಡು ಇರಲು ಸಾಧ್ಯವಾದೀತು ಎಂಬ ಆಶಾವಾದವು ಅವಳ ವ್ಯಕ್ತಿಗತ ನೆಲೆಯನ್ನು ಮತ್ತು ಅವಳ ಸೆಳೆತವನ್ನು ಗೌರವಿಸಲಾಯಿತು.

ಆದರೆ ಈ ಗೌರವವನ್ನು ಗಳಿಸಿಕೊಳ್ಳುವ ಮೊದಲು ಅಲ್ಲಮನು ಅವಳ ವೈರಾಗ್ಯವನ್ನು ಮತ್ತು ಅವಳಲ್ಲಿನ ಪಕ್ವತೆಯನ್ನು ಪರೀಕ್ಷಿಸಲು ನಾನಾರೀತಿಯಲ್ಲಿ ಮೊನಚು



ಮಾತುಗಳನ್ನು ಅವಳಿಗಿಟ್ಟನು ಎನ್ನುತ್ತಾರೆ. ಆಗಾಗಲೇ ಅವಳು ಗಂಡನನ್ನು ಬಿಟ್ಟವಳು ಎಂದು ತಿಳಿದಿದ್ದ ಅಲ್ಲಮ ಅವಳಿಗೆ ಗಂಡನ ಹೆಸರು ಹೇಳಿ ಬಂದು ಕುಳಿತುಕೋ ಎನ್ನುತ್ತಾನೆ. ಅವಳು ತನ್ನ ಲೌಕಿಕ ಗಂಡನ ಬಗ್ಗೆ ಉಲ್ಲೇಖಿಸದೇ ಬರಿಯ ತನ್ನ ಇಷ್ಟದೇವ ಚೆನ್ನಮಲ್ಲಿಕಾರ್ಜುನನ ಬಗ್ಗೆ ಹೇಳುತ್ತಾಳೆ. ಆದರೆ ಯೌವನದಲ್ಲಿರುವ ಅಕ್ಕನ ತಾರುಣ್ಯದ ದೇಹ ಮೋಹದ ಬಗ್ಗೆ ಪ್ರಶ್ನಿಸುತ್ತಾನೆ.

"ಕಾಯ ಕರ್ರನೆ ಕಂದಿದರೇನು, ಮಿರ್ರನೆ ಮಿಂಚಿದರೇನು, ಅಂತರಂಗ ಶುದ್ಧವಾದ ಬಳಿಕ ಚನ್ನಮಲ್ಲಿಕಾರ್ಜುನನಿಗೆ ಒಲಿದ ಕಾಯ ಹೇಗಿದ್ದರೇನು?" ಎಂದು ಪ್ರಶ್ನಿಸುತ್ತಾಳೆ. ಆದರೆ ಜನಪ್ರಿಯವಾಗಿರುವ ಈ ಸಂಭಾಷಣೆಯಲ್ಲಿ ಅವಳು ಬೆತ್ತಲಾಗಿದ್ದಳೆಂದು ಸೂಚಿಸುವಂತೆಯೇ ಮಾತುಗಳಿವೆ. ವೈರಾಗ್ಯ ಅಷ್ಟು ಘನವಿದ್ದ ಬಳಿಕ ನಿನ್ನ ಮುದ್ರೆಯನ್ನು ಕೂದಲಿನಲ್ಲಿ ಮರೆಮಾಡಿಕೊಳ್ಳುವ ಅಗತ್ಯವೇನು ಎಂದು ಅಲ್ಲಮ ಕೇಳುತ್ತಾನೆಂದೂ, ಕಾಮದ ಮುದ್ರೆಯ ಕಂಡು ನಿಮ್ಮ ಮನಸ್ಸಿಗೆ ನೋವಾದೀತೆಂದೂ ಅದನ್ನು ಮುಚ್ಚಿಕೊಳ್ಳುತ್ತೇನೆಂದು ಅಕ್ಕನೂ ಹೇಳುತ್ತಾಳೆ ಎಂಬ ನಾಟಕೀಯ ಸಂಭಾಷಣೆ ಸಾಗುತ್ತದೆ. ಆದರೆ ಇತರರಿಗೆ ತನ್ನ ಕಾಮದ ಮುದ್ರೆಯ ಕಂಡು ನೋವಾಗುವುದು ಎಂದು ಅರಿವಿರುವ ಅಕ್ಕ ಕೂದಲ ಬದಲು ಬಟ್ಟೆಯಲ್ಲೇ ಮುಚ್ಚಿಕೊಳ್ಳಬಹುದು ಎಂಬ ಸಾಮಾನ್ಯ ಯೋಚನೆ ಈ ನಾಟಕೀಯ ಸಂಭಾಷಣಾಕಾರನಿಗೆ ಹೊಳೆಯಲಿಲ್ಲ.

ಅವರ ಮಾತುಗಳಲ್ಲಿ ನಿರ್ವಾಣವೇ ಮೊದಲಾದಂತೆ ಕಾಮ, ಐಹಿಕ, ಭೋಗ, ಯೋಗಗಳ ಮುಕ್ತ ಮಾತು ಕತೆಗಳಾಗಿರಲು ಸಾಧ್ಯ. ಅನುಭವ ಮಂಟಪದಲ್ಲಿಯಲ್ಲದೇ ಮತ್ತೆಲ್ಲಿ ಅಂತಹ ಮುಕ್ತ ಚರ್ಚೆಗಳನ್ನು ಅಂದು ಕಾಣಲು ಸಾಧ್ಯವಿದ್ದೀತು? ಆದರೆ, ಅವಳು ಅಷ್ಟಕ್ಕೆ ಬೆತ್ತಲಾಗಿದ್ದಳು ಎಂಬ ಮಿಥಿಕವನ್ನು ಒಪ್ಪಲಾಗದು. ಅವಳು ಅಲ್ಲಮನು ಕೊಡುವ ರೂಪಕವಾದ ಬಯಲನಂತೆ, ಬೆತ್ತಲಾಗಿರುವ ರೂಪಕವನ್ನು ಕೊಟ್ಟಿದ್ದಾಳಷ್ಟೇ.

ಕೇಶಾಂಬರಿ ಅಕ್ಕ


ಅಲ್ಲಮ "ಸೀರೆಯನ್ನಳಿದು ಕೂದಲಿಂದ ನಿನ್ನ ಮುಚ್ಚಿಟ್ಟುಕೊಂಡಿರುವೆಯೇಕೆ?" ಎಂದು ಕೇಳಿದ್ದಾನೆಂದು ನಮ್ಮ ಸಂಭಾಷಣಾಕಾರರು ಹೇಳಿರುವರು. ಹಾಗಿದ್ದರೂ ಕೂಡಾ ಅಕ್ಕ ವಸ್ತ್ರದ ಸೀರೆಯನ್ನು ಕಿತ್ತೊಗೆದು ತನ್ನ ತಲೆಗೂದಲಿಂದ ತನ್ನ ಮುದ್ರೆ, ಮೊಲೆಗಳನ್ನು ಮುಚ್ಚಿಕೊಂಡು ಓಡಾಡುತ್ತಿದ್ದಳೆಂದಲ್ಲ. ಶೈವ ಪರಂಪರೆಯಲ್ಲಿ ಕುರಿಯೇ ಮೊದಲಾದ ಪ್ರಾಣಿಗಳಿಂದ ಮಾಡಿದ್ದಂತಹ ಕಂಬಳಿಗಳನ್ನು ದೀಕ್ಷೆ ತೊಟ್ಟವರು ಹೊದ್ದುಕೊಳ್ಳುತ್ತಿದ್ದರು. ಅಂತಹ ಯಾವುದೋ ಪ್ರಾಣಿಯ ಕೂದಲಿನ ಕಂಬಳಿಯನ್ನು ಹೊದ್ದುಕೊಂಡಿದ್ದಂತಹ ದೀಕ್ಷಿತಳಾಗಿದ್ದಳೆಂದೆನಿಸುತ್ತದೆ. ಕಂಬಳಿಯನ್ನು ಹೊದ್ದುಕೊಂಡಿರುವಂತಹ ಶೈವಪಂಥಗಳಿಗೇನೂ ಕಡಿಮೆಯಿರಲಿಲ್ಲ. ಹಿಮಾಲಯದ ಶೈವ ಸಾಧುಗಳನ್ನು ಕಾಲಿ ಕಂಬಳಿವಾಲ ಎಂದು ಕರೆಯುತ್ತಾರೆ. ಅವರು ಕೂದಲಿನಿಂದ ಹೆಣೆದಿರುವ ಕಂಬಳಿಯ ನಿಲುವಂಗಿಯನ್ನು ತೊಟ್ಟಿರುತ್ತಾರೆ. ಅಕ್ಕನನ್ನು ವರ್ಣಿಸುವ ಶರಣ ಶರಣೆಯರ ವಚನಗಳಲ್ಲೂ ಕೂಡ ಆಕೆಯು ಬೆತ್ತಲೆ ಎಂದು ಎಂದೇನೂ ಉಲ್ಲೇಖಿಸಿರುವುದನ್ನು ಕಾಣೆವು.

ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ (ಜಿ.ಎಸ್. ಶಿವರುದ್ರಪ್ಪನವರು ಗುರುತಿಸಿರುವಂತೆ) ಮಹಾದೇವಿಯ ಗುರುಗಳು ಕೌಶಿಕನ ಅರಮನೆಗೆ ಬಂದಾಗ ಮಹಾದೇವಿಯು ಸಂಭ್ರಮದಿಂದ ಮಲಗುವ ಮನೆಯಿಂದ ನಮಸ್ಕರಿಸಲು ಬರುವಳು. ಅವಳು ಬಹುಶಃ ಅರೆವಸ್ತ್ರಳಾಗಿದ್ದಿರಬಹುದು. ಆಗ "ಮಗಳೇ ದುಕೂಲಮಂ ಬಸಣಿಸಕೊಳ್" ಅಂದರೆ ಮಗಳೇ ಬಟ್ಟೆಯನ್ನುಟ್ಟುಕೋ ಎನ್ನುವರು. ಅವಳು ತನ್ನ ವಸ್ತ್ರಗಳನ್ನು ತೆಗೆದುಕೊಳ್ಳಲು ಹೋದಾಗ ಕೌಶಿಕನು, ತೆಗೆ ತೆಗೆ ನಿನಗೇನ್ ಅತ್ಯಂತ ಭಕ್ತೆಗೆ, ಮೀರಿದ ವಿರಕ್ತೆಗೆ ಸೀರೆಯೇಕೆಂದು ಕೈಯ ದುಕೂಲಮಂ ಸೆಳೆಯಲು ತನ್ನ ಶರತ್ತುಗಳು ತೀರಿದವೆಂದು "ಆಶಾರಹಿತೆ ಕೇಶಾಂಬರಿಯಾಗಿ ತಿರುಗಿ ಬಂದು ಧವಳಾರದೊಳಗಿರ್ದ ಚೆನ್ನ ಮಲ್ಲಿಕಾರ್ಜುನನ ಕರಸ್ಥಳದೊಳ್ ಬಿಜಯಂಗೆಯ್ಸಿಕೊಂಡು... ಮಹಾದೇವಿ ಪುರವಂ ಪೊರಮಟ್ಟು ಶ್ರೀಪರ್ವತಾಭಿಮುಖಿಯಾದಳ್" ಎಂದು ಕೇಶಾಂಬರಿ ಎಂಬ ರೂಪಕದಲ್ಲಿ ಬಳಸುವ ಮಾತೇ ಮುಂದೆ, ಮೊದಲ ಶೂನ್ಯ ಸಂಪಾದನಕಾರನಾದ ಶಿವಗಣ ಪ್ರಸಾದಿ ಮಹಾದೇವಯ್ಯನು ಅಕ್ಕಮಹಾದೇವಿಯು ಕಲ್ಯಾಣಕ್ಕೆ ಬಂದ ಸಂದರ್ಭವನ್ನು ಚಿತ್ರಿಸುತ್ತಾ "ದಿಗಂಬರದುಡಿಗೆ ಯನುಟ್ಟು ಕೇಶವೆಂಬ ಅಂಬರವಂ ಮುಸುಕಿಟ್ಟು" ವರ್ಣಿಸಿ ಬರೆಯುತ್ತಾನೆ. ಮುಂದಿನ ಕಥೆಗಾರರೆಲ್ಲಾ ಅದನ್ನೇ ಅನುಸರಿಸುತ್ತಾ ಬಂದುಬಿಟ್ಟರು. ಆದರೆ ಎಚ್.ದೇವೀರಪ್ಪನವರು ಬರೆದಿರುವ "ಕೇಶಾಂಬರೆಯೆ ದಿಗಂಬರೆಯೆ" ಎಂಬ ತಮ್ಮ ಸಂಶೋಧನಾತ್ಮಕ ಲೇಖನದಲ್ಲಿಯೂ ನಮ್ಮ ಮಾತನ್ನೇ ಎತ್ತಿ ಹಿಡಿಯುತ್ತಾರೆ.

ಕೂದಲು ಗಾಳಿಗಾಡದೇ

ನಾನು ಸಣ್ಣವನಿದ್ದಾಗ ಮೈ ತುಂಬಾ ಕೂದಲನ್ನು ಬಾಚಿ ಮುಚ್ಚಿಕೊಂಡಿರುವ ಅಕ್ಕ ಮಹಾದೇವಿಯ ಚಿತ್ರವನ್ನು ನೋಡಿ ಅಂದುಕೊಳ್ಳುತ್ತಿದ್ದೆ. ಈ ಕೂದಲು ಗಾಳಿಗೆ ಆಡಿದಾಗ, ಸರಿದು ಬರಿ ಮೈ ಕಾಣದೇ? ಆ ಕೂದಲಿಗೆ ದಾರ ಕಟ್ಟಿಕೊಳ್ಳುತ್ತಿದ್ದಳೇ? ಅಥವಾ ಕೂದಲಿನ ಒಳಗೆ ಪೆಟ್ಟಿಕೋಟ್ ಹಾಕಿರುತ್ತಿದ್ದಳೇ? (ಏಕೆಂದರೆ ನಾಟಕದ ವಸ್ತ್ರಾಲಯಗಳಲ್ಲಿ ಅಂತಹುದೇ ಕೂದಲನ್ನು ಕಪ್ಪುಬಟ್ಟೆಯ ಮೇಲೆ ಹೊಲೆದಿರುವಂತಹ ಡ್ರೆಸ್ ಆದಾಗಿರುತ್ತದೆ.)

ಏನೇ ಇರಲಿ. ಅಕ್ಕ ಭೌತಿಕವಾಗಿ ಬೆತ್ತಲಾಗಿ, ಆಧ್ಯಾತ್ಮಿಕ ಪರಂಪರೆಯ ಜಾಡಿನಲ್ಲಿ ತೆಗೆದುಕೊಂಡರೂ ದಿಗಂಬರೆಯಾಗಿ ಅಲೆದಾಡುತ್ತಿರಲಿಲ್ಲವೆಂಬುದಂತೂ ಸ್ಪಷ್ಟ. ಆದರೆ ಅದೇ ಮಿಥಿಕದಲ್ಲೇ ನಮ್ಮ ಕಲಾವಿದರೂ ಚಿತ್ರಿಸುತ್ತಾ ಅದೇ ಬಗೆಯ ಚಿತ್ರಗಳನ್ನು ಹೊಂದಿರುತ್ತಾ ಅಕ್ಕನೇನಾದರೂ ಸೀರೆಯುಟ್ಟು ಬಂದರೆ ನಾವು ಸ್ವೀಕರಿಸಲಾರದಂತಹ ಸ್ಥಿತಿಗೆ ತಲುಪಿದ್ದೇವೆ. ಅವಳು ನಾಟಕದ ವಸ್ತ್ರಾಲಯಕ್ಕೆ ಹೋಗಲೇ ಬೇಕು. "ನನಗೆ ಫ್ಯಾನ್ಸಿ ಡ್ರೆಸ್ ಕಾಂಪಿಟಿಷನ್‌ಗೆ ಅಕ್ಕ ಮಹಾದೇವಿ ಡ್ರೆಸ್ ಬೇಕು" ಎನ್ನಬೇಕು. ಅವಳು ಅದನ್ನು ತೊಟ್ಟೇ ಮುಂದೆ ಬಂದರೆ ಅಕ್ಕ ಮಹಾದೇವಿ ಎಂದು ಒಪ್ಪುತ್ತೇವೆ. ಕೇಶಾಂಬರಿಯಲ್ಲದ ಅಕ್ಕ ಅಕ್ಕನೂ ಅಲ್ಲ, ಮಹಾದೇವಿ ಮಹಾದೇವಿಯೂ ಅಲ್ಲ. ನೋಡಿ. ಹೇಗಿದೆ ಮಿಥಕಗಳ ಮಹಿಮೆ. ರೂಪಕಗಳ ಸ್ವೀಕೃತಿ. ■



ದೇಶಭಕ್ತಿಯ ಗುತ್ತಿಗೆದಾರರು?

ಸುಮಾರು 25 ವರ್ಷಗಳ ಹಿಂದೆ ಅಂಕುಶಮ್ ಎಂಬ ಒಂದು ತೆಲುಗು ಸಿನಿಮಾ ನೋಡಿದ್ದೆ. ಬಹುಶಃ ಆ ಕಾಲದಲ್ಲಿ ಭರ್ಜರಿ ಖರ್ಚುಮಾಡಿ ತಯಾರಿಸಿದ್ದ (ಹೆಲಿಕಾಪ್ಟರ್ ಇತ್ಯಾದಿ ಬಳಸಿ) ಆಕ್ಷನ್ ಸಿನಿಮಾ ಅದು. ನನಗೆ ನೆನಪಿದ್ದಂತೆ ಆ ಸಿನಿಮಾ ಆರಂಭ ಆಗೋದೇ ಚೇಸಿಂಗ್ ಸೀನ್‌ನಿಂದ. ಪೊಲೀಸ್ ಅಧಿಕಾರಿಯಾದ ಆದರ ಹೀರೋ (ಡಾ. ರಾಜಶೇಖರ್) ಕಳ್ಳ ದರೋಡೆಕೋರನನ್ನು ಬೆನ್ನಟ್ಟುವಂತೆ ಒಂದು ಕಾರನ್ನು ಹೇಗೆಲ್ಲ ಕಷ್ಟಪಟ್ಟು ಬೆನ್ನಟ್ಟಿ ಹಿಡಿಯುತ್ತಾನೆ. ಕೊನೆಗೂ ಆ ಮಂತ್ರಿಯ ಕಾರನ್ನು ಅಡ್ಡ ಹಾಕಿ ಕಾರಿನೆದುರು ಉಲ್ಟಾ ಹಾಕಲಾಗಿದ್ದ ರಾಷ್ಟ್ರ ಧ್ವಜವನ್ನು ಸರಿಪಡಿಸುತ್ತಾನೆ. ಅಯ್ಯೋ ಇಷ್ಟೇನಾ ಎಂದು ಏನೋ ಭ್ರಮಿಸಿಕೊಂಡಿದ್ದ ಪ್ರೇಕ್ಷಕರು ನಿಟ್ಟುಸಿರು ಬಿಡುತ್ತಾರೆ.

ನಾವೆಲ್ಲ ಶಾಲೆಗೆ ಹೋಗುತ್ತಿರುವಾಗ ಎಲ್ಲೇ ರಾಷ್ಟ್ರಗೀತೆ ಕೇಳಿಬಂದರೂ ಅದು ಮುಗಿಯುವ ತನಕ ಅಲ್ಲೇ ನಿಂತಿರುತ್ತಿದ್ದೆವು. ಯಾವುದೋ ಆಫೀಸಿಗೆ ಹೋಗುವ ದಾರಿಹೋಕರೂ ಕೂಡ ಶಾಲೆಯಿಂದ ಹೊರಡುವ ಈ ಗೀತೆಗೆ ನಿಂತು ಗೌರವ ಕೊಟ್ಟು ಮುಂದೆ ಹೋಗುತ್ತಿದ್ದರು. ಬಹುಶಃ ಥಿಯೇಟರ್‌ನಲ್ಲೂ ಕೊನೆಗೆ ರಾಷ್ಟ್ರ ಗೀತೆ ಇದ್ದಿರುತ್ತಿದ್ದು ಕಿರಿಕಿರಿಯೆಂದು ಕೊನೆಗದನ್ನ ನಿಲ್ಲಿಸಲಾಗಿರಬೇಕು. ಈಗ ಇದನ್ನೆಲ್ಲ ಅಷ್ಟಾಗಿ ಪಾಲಿಸುವವರು ಮೊದಲಿನಂತೆ ಇದ್ದಿರಲಾರರು. ಸ್ವಾತಂತ್ರ್ಯ ದಿನಾಚರಣೆ ಆದಿತ್ಯವಾರ ಬಂದರೆ ಶನಿವಾರ ಅಥವ ಸೋಮವಾರ ಅದನ್ನು ಆಚರಿಸಿ ಸಂಡೆಯ ಮಾಮೂಲಿ ರಜೆಗೆ ಮೋಸವಾಗದಿರುವಂತೆ ನೋಡಿಕೊಳ್ಳುವ ಅತಿರೇಕದವರೂ ಇದ್ದಾರೆ (ವಿದೇಶಗಳಲ್ಲಿ ಬಹುತೇಕ ಎಲ್ಲರನ್ನೂ ಒಟ್ಟು ಸೇರಿಸುವ ಉದ್ದೇಶಕ್ಕೆ ದಿನಾಂಕ 15ನ್ನು ನೋಡದೇ ರವಿವಾರದ ರಜಾದಿನದಲ್ಲೇ ಭಾರತದ ಸ್ವಾತಂತ್ರ್ಯೋತ್ಸವವನ್ನು ಅನಿವಾಸಿಗಳು ಆಚರಿಸುವುದುಂಟು. ಇವೆಲ್ಲವೂ ಅನುಕೂಲಕ್ಕೆ ಹಾಗು ಕಾಲಕ್ಕೆ ತಕ್ಕಂತೆ ಬದಲಾಗುವ ಮಾರ್ಪಾಟುಗಳು. ಹಾಗೆಂದ ಮಾತ್ರಕ್ಕೆ ಇವರನ್ನೆಲ್ಲ ಮಹಾದೇಶಪ್ರೇಮಿ, ಅರ್ಧ ದೇಶಪ್ರೇಮಿ, ದೇಶದ್ರೋಹಿ ಹೀಗೆಂದು ಯಾರನ್ನೂ ಪ್ರತ್ಯೇಕಿಸಿ ನೋಡಲಾಗದು. ರಾಷ್ಟ್ರಗೀತೆ ಕೇಳಿಯೂ ನಿಲ್ಲದಾತ ಅಂತರಂಗದಲ್ಲಿ ಮಹಾನ್ ದೇಶಭಕ್ತನೇ ಇದ್ದಿರಬಹುದು; ಪೂರ್ತಿ ಕೇಳಿಸಿಕೊಳ್ಳುವಂತೆ ಸಲಾಮ್ ಹೊಡೆಯುವಂತೆ ಪೋಸ್ ಕೊಡುವಾತ ದೇಶದ ಒಗ್ಗಟ್ಟನ್ನು ಮುರಿದು ಆತಂತ್ರ ಸೃಷ್ಟಿಸುವ ದೇಶದ್ರೋಹಿಯೂ ಆಗಿರಬಹುದು. ಇಲ್ಲಿ ದೇಶಪ್ರೇಮವನ್ನು ಮೇಲ್ನೋಟಕ್ಕೆ ಅಳೆಯುವಂತಹ ಯಾವ ಮಾನಕವನ್ನೂ ಈವರೆಗೆ ಕಂಡು ಹಿಡಿಯಲಾಗಿಲ್ಲ. ಮುಂದೆಯೂ ಇಲ್ಲ.

ಇಂದು ಕೆಲವರು ವಂದೇಮಾತರಂ ಹಾಗು ಭಾರತ್ ಮಾತಾ ಕಿ ಜೈ ಎಂದರಷ್ಟೇ ದೇಶಪ್ರೇಮ ಎಂದು ತಾಕೀತು ಮಾಡುತ್ತಿರುವ ಸನ್ನಿವೇಶಗಳನ್ನು ನೋಡಿ ಈ ಸಂದರ್ಭಗಳೆಲ್ಲ ನೆನಪಿಗೆ ಬಂದವು.

ಈ ರಾಷ್ಟ್ರಪ್ರೇಮ ದೇಶಾಭಿಮಾನವೆನ್ನುವುದು ಪ್ರತಿಯೊಬ್ಬನಲ್ಲೂ ಸುಪ್ತವಾಗಿರುತ್ತದೆಯೇ ಹೊರತು ಅದೊಂದು ಪ್ರದರ್ಶನಕ್ಕಿಟ್ಟಂತಹ ವಸ್ತುವೇನಲ್ಲ. ಒಬ್ಬ ಜೀವಮಾನ ಪೂರ್ತಿ ದೇಶದ ಬಗ್ಗೆ ಮಾತನ್ನೇ ಆಡದಿರಬಹುದು. ಹಾಗೆಂದ ಮಾತ್ರಕ್ಕೆ ಆತ ದೇಶವಿರೋಧಿ ಎಂದೆನ್ನಲಾಗದು. ಇವೆಲ್ಲ ಅವರವರ ವೈಯಕ್ತಿಕ ಅಭಿವ್ಯಕ್ತತೆಯ ವಿಚಾರ. ಒಬ್ಬ ಹನುಮಂತಪ್ಪರಂತೆ ಎದ್ದುಕಾಣುವಂತಹ ಕಾರ್ಯ ಮಾಡಿದರೆ ಇನ್ನೊಬ್ಬ ನಿರ್ಲಿಪ್ತನಾಗಿದ್ದುಕೊಂಡೇ ಇದ್ದಿರಬಹುದು. ಹಾಗೆಂದ ಮಾತ್ರಕ್ಕೆ ಹನುಮಂತಪ್ಪರಿಗೆ ಹೋಲಿಸಿ ಮತ್ತೊಬ್ಬನನ್ನು



ದೇಶದ್ರೋಹಿ ಎನ್ನಲು ಯಾರಿಗೂ ಅಧಿಕಾರವಿಲ್ಲ. ಒಂದು ವೇಳೆ ಓರ್ವ ದೇಶದ್ರೋಹಿ ಚಟುವಟಿಕೆಯಲ್ಲಿ ನೇರವಾಗಿ ಪಾಲ್ಗೊಂಡಿದ್ದು ರುಜುವಾತಾದಲ್ಲಿ ಮಾತ್ರ ಆತನನ್ನು ದೇಶದ್ರೋಹಿ ಎಂದು ಕರೆಯಬಹುದೇ ಹೊರತು ತಾನು ಹೇಳುವ ವಂದೇಮಾತರಂ, ಭಾರತ್ ಮಾತಾಕಿ ಜೈ ಸ್ಲೋಗನ್ ಆತ ಹೇಳಲಿಲ್ಲ ಎಂದು ಇನ್ನೊಬ್ಬನ ದೇಶಪ್ರೇಮವನ್ನು ಅಳೆಯುವಾತ ಒಬ್ಬ ದ್ರೋಹಿ ಅಷ್ಟೇ ಅಲ್ಲ, ಮತಿಹೀನನೂ ಹೌದು.

ವೈಷ್ಣವರಿಗೆ ವಿಷ್ಣುವನ್ನು ಆರಾಧಿಸುವವರು ಮಾತ್ರವೇ ಭಕ್ತರು ಉಳಿದವರು ಶತ್ರುಗಳೆಂದು ಪರಿಭಾವಿಸುವ ಕಾಲವೊಂದಿತ್ತು, ಅದೇರೀತಿ ವೈಷ್ಣವರಲ್ಲಿ ಮಾಧ್ವ, ರಾಮಾನುಜರ ಅನುಯಾಯಿಗಳು ಉಳಿದ ಸಿದ್ಧಾಂತವನ್ನು ವಿರೋಧಿಸಿ ಜರೆದ ಉದಾಹರಣೆ ಇದೆ (ಮಾಧ್ವ ಯತಿಯೊಬ್ಬ ಶಂಕರನ ಬಗ್ಗೆ ರಕ್ಕಸ ನಾಯಿ ಎಂದು ಬರೆದು ಜರೆದಿದ್ದ). ಇಂತಹ ಮನಸ್ಥಿತಿಯದ್ದೇ ರೂಪ ಈ 'ಚೆಡ್ಡಿ ದೇಶಪ್ರೇಮ'ದ ಮೂಲದಲ್ಲಿದೆ. ಶತಮಾನಗಳ ಸುದೀರ್ಘ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಕಿಂಚಿತ್ತೂ ಹೋರಾಡದಿದ್ದರೂ ತಮ್ಮಂತೆ ಹಾಕಿಕೊಂಡು ಚೆಡ್ಡಿ (ಈಗ ಬದಲಾಯಿಸುತ್ತಾರಂತೆ) ನಮಸ್ತೆ ವತ್ಸಲೇ ಹೇಳಿ ಲಾಠಿ ಬೀಸಿದರಷ್ಟೇ ದೇಶಪ್ರೇಮ ಇಲ್ಲದಿದ್ದರೆ ದೇಶದ್ರೋಹ ಎನ್ನುವ ಕೊಳೆತ ಮನಸ್ಥಿತಿ ಎಂದಿಗೂ ಬದಲಾಗದು. ದೇಶದಲ್ಲಿ ಎರಡನೇ ಸ್ವಾತಂತ್ರ್ಯ ಹೋರಾಟ ಎನ್ನುವುದಿದ್ದರೆ ಅದು ಇಂತಹ 'ಮನೆಹಾಳ' ದೇಶದ್ರೋಹಿಗಳ ವಿರುದ್ಧವೇ ಸರಿ. ದೇಶ ಉಳಿಸಲು ಇದೊಂದೇ ದಾರಿ ನಮ್ಮೆದುರಿಗಿದೆ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಬಿಜೆಪಿಯ ನಕಲಿ ದೇಶಭಕ್ತ ನಾಟಕ


ಇನ್ನು ಮುಂದೆ ಕೇಂದ್ರದ ಬಿಜೆಪಿ ಸರಕಾರದಡಿ ಉರ್ದು ಭಾಷೆಯಲ್ಲಿರುವ ಪುಸ್ತಕಗಳನ್ನು ಸರ್ಕಾರ ಸಗಟು ಖರೀದಿ ಮಾಡಬೇಕಾದರೆ ಉರ್ದು ಲೇಖಕರು ದೇಶಭಕ್ತಿ ಮತ್ತು ಎನ್‌ಡಿಎ ಸರ್ಕಾರಕ್ಕೆ ನಿಷ್ಠೆಯ ಡಿಕ್ಲರೇಷನ್ ನೀಡುವುದು ಕಡ್ಡಾಯವಾಗಿದೆ. ಉತ್ತರ ಭಾರತದಲ್ಲಿ ಉರ್ದು ಸಾಹಿತ್ಯ ಬರೆಯುವವರು ಕೇವಲ ಮುಸ್ಲಿಮರು ಮಾತ್ರವಲ್ಲ, ಅನೇಕ ಪ್ರಸಿದ್ಧ ಹಿಂದೂ ಲೇಖಕರೂ ಉರ್ದು ಭಾಷೆಯಲ್ಲಿ ಬರೆಯುತ್ತಾರೆ. ಆದರೆ ಈ ಹೊಸ ರಾಷ್ಟ್ರಭಕ್ತಿಯ ಪ್ರಮಾಣಪತ್ರ ಕೇವಲ ಮುಸ್ಲಿಂ ಲೇಖಕರಿಗೆ ಮಾತ್ರ ಕಡ್ಡಾಯವೇ ಅಥವಾ ಹಿಂದೂ ಧರ್ಮದ ಉರ್ದು ಲೇಖಕರೂ ಇಂತಹ ಅಫಿಡವಿಟ್ ಕೊಡುವ ಅವಶ್ಯಕತೆ ಇದೆಯೇ ಎಂಬ ಸ್ಪಷ್ಟತೆ ಈ ಹೊಸ ಸರಕಾರಿ ಆದೇಶದಲ್ಲಿ ಇಲ್ಲ.

ದೇಶದ ಬೇರೆ ಯಾವುದೇ ಭಾಷೆಗೆ ಇರದ ಹೊಸ ನೀತಿಯೊಂದನ್ನು ಉರ್ದು ಭಾಷೆಗೆ ಮಾತ್ರ ಅನ್ವಯಿಸಿ ಹೊರಡಿಸಿದ್ದು ತೀವ್ರ ಟೀಕೆಗೆ ಕಾರಣವಾಗಿದೆ. ಇದು ಉರ್ದು ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಹುನ್ನಾರವಾಗಿದೆ ಎಂದು ಎಲ್ಲಾ ಭಾಷೆಯ ಪ್ರಸಿದ್ಧ ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಪಾಕಿಸ್ತಾನದಿಂದ ವಲಸೆ ಬಂದ ಸಿಂಧಿ ಭಾಷೆಗೆ ಸ್ವಂತ ಲಿಪಿಯಿಲ್ಲ. ಹಾಗಾಗಿ ಮೊದಲಿನಿಂದಲೂ ಉರ್ದು ಲಿಪಿಯಲ್ಲಿಯೇ ಸಿಂಧಿ ಭಾಷೆಯ ದಿನಪತ್ರಿಕೆ ಮತ್ತು ಸಿಂಧಿ ಭಾಷೆಯ ಸಾಹಿತ್ಯ ರಚನೆಯಾಗುವುದನ್ನು ನಾನು ಮುಂಬೈಯಲ್ಲಿ ನೋಡಿದ್ದೇನೆ. ಈಗ ಅತಿ ಹೆಚ್ಚು ಹಿಂದೂ ಸಿಂಧಿಗಳು ವಾಸಿಸುತ್ತಿರುವುದು ಮುಂಬೈ ಮತ್ತು ಥಾಣಾ ಜಿಲ್ಲೆಯ ಉಪನಗರಗಳಲ್ಲಿ, ಸಿಂಧಿಗಳಾದ ಲಾಲಕೃಷ್ಣ ಅಡ್ವಾಣಿ ಅಥವಾ ರಾಮ್ ಜೇಠಮಲಾನಿ ತಮ್ಮ ಕುಟುಂಬದವರಿಗೆ ಪತ್ರ ಬರೆಯುತ್ತಿದ್ದುದು ಉರ್ದು ಲಿಪಿಯುಳ್ಳ ಸಿಂಧಿ ಭಾಷೆಯಲ್ಲಿ, ಹಾಗಾದರೆ ಇನ್ನು ಮುಂದೆ ಮೋದಿ ಸರಕಾರದ ಹೊಸ ಆದೇಶದಂತೆ ಉರ್ದು ಲಿಪಿಯಲ್ಲಿ ಬರೆಯುವ ಸಿಂಧಿ ಲೇಖಕರೂ ತಮ್ಮ ದೇಶಭಕ್ತಿಯ ಮತ್ತು ಸರಕಾರಕ್ಕೆ ನಿಷ್ಠೆಯ ಅಫಿಡವಿಟ್ ಕೊಡಬೇಕಾಗುತ್ತದೆಯೇ?

ನಮ್ಮ ಕರ್ನಾಟಕದ ಉತ್ತರ ಕರಾವಳಿಯ ಭಟ್ಕಳದಲ್ಲಿ ಇರುವ ನವಾಯತ್ ಮುಸ್ಲಿಮರ ಮಾತೃಭಾಷೆ ಕೊಂಕಣಿಯಾದರೂ ಅವರು ಅದನ್ನು ಬರೆಯುವುದು ಅರೇಬಿಕ್ (ಉರ್ದು) ಲಿಪಿಯಲ್ಲಿ, ನವಾಯತ್ ಕೊಂಕಣಿ ಭಾಷೆಯ ಸಾಹಿತ್ಯಗಳೂ ಉರ್ದು ಲಿಪಿಯಲ್ಲಿ ರಚನೆಯಾಗುತ್ತವೆ. ಹಾಗಾದರೆ ನವಾಯತ್ ಸಾಹಿತಿಗಳೂ ದೇಶಭಕ್ತಿ ಮತ್ತು ಸರಕಾರಕ್ಕೆ ನಿಷ್ಠೆಯ ಅಫಿಡವಿಟ್ ಕೊಡುವುದು ಕಡ್ಡಾಯವಾಗಲಿದೆಯೇ?

ಗೋವಾದ ಕ್ರಿಶ್ಚನ್ ಲೇಖಕರಿಗೂ ಈ ಕೇಸರಿ ನಿಯಮ ಸದ್ಯದಲ್ಲಿಯೇ ಅನ್ವಯವಾಗಬಹುದು. ಇಂಗ್ಲಿಷ್ ಲಿಪಿಯಲ್ಲಿ ಕೊಂಕಣಿ ಸಾಹಿತ್ಯ ಬರೆಯುವ ಕ್ರೈಸ್ತರೂ ರಾಷ್ಟ್ರಭಕ್ತಿಯ ಅಫಿಡವಿಟ್ ಕೊಡುವುದು ಅನಿವಾರ್ಯ ಆಗಬಹುದು. ಯಾಕೆಂದರೆ ಅಮಿತ್ ಶಾ ಮತ್ತು ಮೋದಿಯವರಿಗೆ



ಎಲ್ಲಾ ಗುಜರಾತಿಗಳಂತೆ ಸ್ಪಷ್ಟವಾಗಿ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ. ಮುಂದಿನ ತಿಂಗಳ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿಯುವವರೆಗೆ ಇಂತಹ (ನಕಲಿ) ರಾಷ್ಟ್ರಭಕ್ತಿಯ ನಾಟಕ ಬಿಜೆಪಿ ಸರಕಾರ ಮಾಡುತ್ತಲೇ ಇರುತ್ತದೆ. ಈಗ ಗೋವಾದ ಕ್ರೈಸ್ತ ಸಾಹಿತ್ಯಕಾರರು ಇಂಗ್ಲಿಷ್ ಲಿಪಿಯಲ್ಲಿ ಕೊಂಕಣಿ ಭಾಷೆಯ ಸಾಹಿತ್ಯ ರಚಿಸುತ್ತಾ[...] ಆದರೆ ಗೋವಾದ ಹಿಂದೂಗಳು, ವಿಶೇಷವಾಗಿ ಸಾರಸ್ವ[...] ಬ್ರಾಹ್ಮಣರು, ದೇವನಾಗರಿ ಲಿಪಿಯಲ್ಲಿ ಕೊಂಕ[...] ಲೇಖನಗಳನ್ನು ಬರೆಯುತ್ತಾರೆ. ಈಗ ಕೊಂಕಣಿಗೆ ಕೇವ[...] ದೇವನಾಗರಿ ಲಿಪಿ ಮಾತ್ರ ಅಧಿಕೃತ ಲಿಪಿ ಎಂದು ಕೇಂ[...] ಸರಕಾರ ನಿಯಮ ಮಾಡಿರುವುದರ ಹಿಂದೆಯೂ ಸಂ[...] ಪರಿವಾರದ ಕುತಂತ್ರವಿದೆ. ಇಂಗ್ಲಿಷ್, ಕನ್ನಡ, ಮಲೆಯಾಳ[...] ಮತ್ತು ಅರೇಬಿಕ್ ಈ ನಾಲ್ಕು ಲಿಪಿಗಳಲ್ಲಿ ಈಗ ಬರುತ್ತಿರು[...] ಕೊಂಕಣಿ ಸಾಹಿತ್ಯದ ಕತ್ತು ಹಿಸುಕುವ ಷಡ್ಯಂತ್ರ ಇದು[...] ಹಿಂದೆ ಇರುವುದು ಸ್ಪಷ್ಟ. ಇದು ಸಂಘ ಪರಿವಾರ[...] ಗುಪ್ತ ಅಜೆಂಡಾಗಳಲ್ಲಿ ಒಂದು. ಕೊನೆಗೆ ಕನ್ನಡ ಸಹಿ[...] ಭಾರತದ ಎಲ್ಲಾ ಸ್ಥಳೀಯ ಭಾಷೆಗಳನ್ನು ಕೊಂದು ಕೇವ[...] ಹಿಂದಿ ಮತ್ತು ಸಂಸ್ಕೃತ ಮಾತ್ರ ಇರುವಂತೆ ನೋಡಿಕೊಳ್ಳು[...] ದೂರಗಾಮಿ ಪ್ಲಾನ್ ಸಂಘ ಪರಿವಾರಕ್ಕೆ ಇರುವುದು ಸ್ಪಷ್ಟ.


- ರಾಮಕೃಷ್ಣ ಕುಲಾಲ್, ಬೆಂಗಳೂರು

ದಕ್ಷಿಣ ಕನ್ನಡ ಸೌಹಾರ್ದದ ನಾಡು

ತಮ್ಮ ಮಾರ್ಚ್ 30ರ ಸಂಚಿಕೆಯಲ್ಲಿ ಆರ್.ಬಿ.ಶೇಣ[...] ಅವರು ಬರೆದಿರುವಂತೆ ದ.ಕ ಜಿಲ್ಲೆಯ ಪುತ್ತೂರ[...] ಮಹಾಲಿಂಗೇಶ್ವರ ಜಾತ್ರೆಯ ಆಮಂತ್ರಣ ಪತ್ರಿಕೆಯ[...] ಮುಸ್ಲಿಂ ಜಿಲ್ಲಾಧಿಕಾರಿಯವರ ಹೆಸರಿದೆ ಎಂಬ ಕಾರಣ[...] ಹಿಂದೂತ್ವ ಪಡೆಗಳು ವಿನಾಕಾರಣ ಹುಯಿಲೆಬ್ಬಿಸುತ್ತಿ[...] ಇಬ್ರಾಹಿಂರನ್ನು ಕೇವಲ ಜಿಲ್ಲಾಧಿಕಾರಿ ಹುದ್ದೆಯ[...] ವ್ಯಾಪ್ತಿಯಿಂದಾಗಿ ಈ ಜಾತ್ರೆಯ ಆಮಂತ್ರಣಕಾರರಾ[...] ಸೇರಿಸಲಾಗಿದೆ. ಸರಕಾರಿ ಹುದ್ದೆಯ ವ್ಯಾಪ್ತಿ ನೋಡುವಾ[...] ಆ ಅಧಿಕಾರಿಯ ವೈಯಕ್ತಿಕ ಧರ್ಮ ಗಣನೆ[...] ಬರುವುದೇ ಇಲ್ಲ. ಹಾರೋ ಒಬ್ಬರು ಈ[...] ಜಿಲ್ಲಾಧಿಕಾರಿಗಳು ಮಹಾಲಿಂಗೇಶ್ವರನ ಅಂಕುರ ಪ್ರಸಾ[...] ಸ್ವೀಕರಿಸಲು ಸಿದ್ಧರಿರುವರೇ ಎಂದು ಪ್ರಶ್ನಿಸಿದ್ದಾರೆ.

ಮೊಟ್ಟಮೊದಲು ಹಿಂದೂತ್ವ ಪಡೆಗಳು ತಿಳಿದಿ[...] ಬೇಕಾದುದೇನೆಂದರೆ ಇದೇ ಜಿಲ್ಲೆಯ ಇತಿಹಾಸ ಪ್ರಸಿ[...] ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮೊದ[...] ಪ್ರಸಾದ ಈಗಲೂ ಕೊಡುವುದು ಬಪ್ಪ ಬ್ಯಾರಿಯ ಮುಸ್ಲಿ[...] ವಂಶಜರಿಗೆ. ಇದು ಇಡೀ ಕರಾವಳಿಗೆ ಗೊತ್ತಿದೆ. ಉಡು[...]

ತಿಜೋರಿ ಕೀಲಿ ನಂಬಿಕಸ್ಥರ ಕೈಲಿ



ಕರ್ನಾಟಕ ರಾಜ್ಯದ ಕುಲಗೆಟ್ಟ ಆಡಳಿತದಲ್ಲಿ ಉನ್ನತ ಮಟ್ಟದ ಭ್ರಷ್ಟಾಚಾರವನ್ನು ನಿಯಂತ್ರಿಸಲು ಲೋಕಾಯುಕ್ತ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಆದರೂ ಪೊಲೀಸ್ ವ್ಯವಸ್ಥೆ, ಸಾರಿಗೆ ಪ್ರಾಧಿಕಾರ, ಸರ್ಕಾರಿ ಕಚೇರಿಗಳು, ಉಪನೋಂದಣಿ ಕಚೇರಿಗಳಲ್ಲಿ ವಿಪರೀತ ಆಗಿದ್ದ ಭ್ರಷ್ಟಾಚಾರ ನಿಲ್ಲಲಿಲ್ಲ. ಆಗ ಲೋಕಾಯುಕ್ತ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದರಿಂದ ಕ್ರಮೇಣ ಜನಪರವಾದ ಸಂಸ್ಥೆ ಆಯಿತು. ಆಮೇಲೆ ನ್ಯಾಯಮೂರ್ತಿ ವೆಂಕಟಾಚಲ ಹಾಗೂ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಅದನ್ನು ಬೆಳೆಸಿ, ಪೋಷಿಸಿ, ಉತ್ತಮ ಸಂಸ್ಥೆಯನ್ನಾಗಿಸಿದರು. ಮಾಜಿ ಸಿಎಂ ಹಾಗೂ ಅನೇಕ ಭ್ರಷ್ಟ ರಾಜಕಾರಣಿಗಳಿಗೆ ಸೆರೆಮನೆ ವಾಸದ ಪರಿಚಯ ತೋರಿಸಿದ ಖ್ಯಾತಿಗೆ ಹೆಗಡೆಯವರು ಪಾತ್ರರಾದರಲ್ಲದೆ ಪ್ರಜೆಗಳಲ್ಲಿ ವಿಶ್ವಾಸ, ಪ್ರಜಾಪ್ರಭುತ್ವದಲ್ಲಿ ನಂಬಿಕೆ, ಜನಸಾಮಾನ್ಯರು ಬದುಕಲು ಧೈರ್ಯ, ಪ್ರೋತ್ಸಾಹ ತುಂಬಿದರು. ಆಮೇಲೆ ಹಂಡೆ ಹಾಲಿಗೆ ಒಂದು ತೊಟ್ಟು ಹುಳಿ ಹಿಂಡುವಂತೆ ಇಡೀ ಸಂಸ್ಥೆಯನ್ನೇ ಭ್ರಷ್ಟಾಚಾರದ ಹಾದರಕ್ಕೆ ನೂಕಿದ ಅಪಕೀರ್ತಿ ಅತಿ ಹೀನಾಯವಾಗಿ ವಜಾಗೊಂಡ ನ್ಯಾಯಮೂರ್ತಿ ಭಾಸ್ಕರ ರಾವ್ ಅವರಿಗೆ ಲಭಿಸಿದ್ದು ಈಗ ಇತಿಹಾಸ.

ಈಗ ಇನ್ನೂ ಒಂದು ಹೆಜ್ಜೆ ಮುಂದೆ ಸರಿದು ಇಡೀ ಸಂಸ್ಥೆಯನ್ನೇ ಮುಚ್ಚಿಹಾಕುವ ಎಲ್ಲಾ ಪ್ರಕ್ರಿಯೆಗಳು ಇಂದಿನ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಪ್ರಜಾದ್ರೋಹವೇ ಆಗಿದೆ. ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನೇಮಿಸುವುದು ಹೇಗಿದೆಯೆಂದರೆ ಕಳ್ಳರು ತಿಜೋರಿಯ ಕೀಲಿಯನ್ನು ನಂಬಿಕಸ್ಥರ ಕೈಲಿ ಒಪ್ಪಿಸಿದಂತಿದೆ.

ರಾಜ್ಯ ಸರ್ಕಾರದ ಅಧಿಕಾರಿಶಾಹಿಗಳು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಯಾವ ಅಧಿಕಾರ ಬಳಸಿ ಭ್ರಷ್ಟರನ್ನು ನಿಯಂತ್ರಿಸಲು ಆಗದು ಎಂಬುದು ಇತಿಹಾಸದ ಅನುಭವವಾಗಿದೆ. ಜನಪರ ಸಂಘಗಳು, ಭ್ರಷ್ಟಾಚಾರ ನಿಗ್ರಹಕ್ಕೆಂದೇ ಶಪಥ ತೊಟ್ಟಿರುವ ಆಮ್ ಆದ್ಮಿ ಪಕ್ಷಗಳೂ ಧ್ವನಿ ಎತ್ತುವ ಸಮಯ ಸನ್ನಿಹಿತವಾಗಿದೆ.

- ಆರ್.ಎನ್. ಸತ್ಯನಾರಾಯಣರಾವ್, ಮೈಸೂರು



ಜಿಲ್ಲೆಯ ಕೊಲ್ಲೂರು ಮೂಕಾಂಬಿಕಾ ದೇವಿಗೆ ಇಂದಿಗೂ ಟಿಪ್ಪು ಸುಲ್ತಾನನ ಹೆಸರಲ್ಲಿ ದಿನಾಲೂ ಅಗ್ರಪೂಜೆ ಸಲ್ಲಿಕೆಯಾಗುತ್ತದೆ.

ಎಲ್ಲಕ್ಕಿಂತ ಕೌತುಕಪೂರ್ಣ ಸಂಗತಿಯೆಂದರೆ ಉಡುಪಿ ಹತ್ತಿರದ ಪಡುಬಿದ್ರಿಯ ಸಮುದ್ರ ತೀರದ ಬ್ರಹ್ಮಸ್ಥಾನದ್ದು. ಇದೊಂದು ಮರಬಳ್ಳಿಗಳಿಂದ ಕೂಡಿದ ಮರಳು ನೆಲದ ಬಯಲು ದೇವಸ್ಥಾನ. ಇಲ್ಲಿ ಯಾವುದೇ ಸ್ಥಾವರ ಕಟ್ಟುವಂತಿಲ್ಲ ಎಂದು ದೈವಿ ಆದೇಶವಿದೆ. ಇಲ್ಲಿ ಸ್ಥಾವರ ಕಟ್ಟಿ ವಾಣಿಜ್ಯೀಕರಣಗೊಳಿಸಲು ಪ್ರಯತ್ನಿಸಿದ ಬ್ರಾಹ್ಮಣ ಕುಟುಂಬಗಳು ದೇವರ ಕೋಪದಿಂದ ನಿರ್ನಾಮವಾಗಿರುವುದು ನಿಜ. ಇಂತಹ ಮಹಿಮಾಪೂರ್ಣ ಕ್ಷೇತ್ರದಲ್ಲಿ ಅನಾದಿ ಕಾಲದಿಂದ ಹಿಂದೂ ಮೊಯ್ಲಿ ಅರ್ಥಾತ್ ದೇವಾಡಿಗ ಜಾತಿಯವರೇ ಢೋಲು ಚೆಂಡೆವಾದ್ಯಗಳನ್ನು ಬಾರಿಸುತ್ತಿದ್ದರು. ಆದರೆ ಒಂದು ದಶಕದ ಹಿಂದೆ ಅವರು ಅಂಕುರ ಪ್ರಸಾದದಲ್ಲಿ ಪಾಲು ಕೇಳಿದರೆಂದು ಅವರನ್ನು ಅಲ್ಲಿಯ ಆಡಳಿತ ನೋಡಿಕೊಳ್ಳುವ ಬ್ರಾಹ್ಮಣರ ವನದುರ್ಗಾ ಟ್ರಸ್ಟಿನವರು ತೆಗೆದುಹಾಕಿ ದೇವಾಡಿಗರ ಜಾಗದಲ್ಲಿ ಮುಸ್ಲಿಂ ವಾದ್ಯಗಾರರನ್ನು ನೇಮಿಸಿದರು. ಇಂದಿಗೂ ಪಡುಬಿದ್ರಿ ಬ್ರಹ್ಮಸ್ಥಾನದಲ್ಲಿ ಢೋಲು ಚೆಂಡೆ ಬಾರಿಸುವವರು ಮುಸ್ಲಿಮರು. ಸ್ವಧರ್ಮದ ಹಿಂದೂ ದೇವಾಡಿಗರಿಗೆ ದ್ರೋಹ ಬಗೆದು ಮುಸ್ಲಿಮರಿಗೆ ಅನುಕೂಲ ಮಾಡಿಕೊಡುವಾಗ ಈ ವೈದಿಕರ ಧಾರ್ಮಿಕ ಭಾವನೆ ಎಲ್ಲಿ ಅಡಗಿತ್ತು? ಅದೇ ಪಡುಬಿದ್ರಿಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಎರಡು ವರ್ಷಕ್ಕೊಮ್ಮೆ 60 ದಿನಗಳ ಕಾಲ ನಡೆಯುವ ಢಕ್ಕೆಬಲಿ ಜಾತ್ರೆಯ ಸಮಯದಲ್ಲಿ ಪ್ರತಿ ರಾತ್ರಿಭಕ್ತಿಯಿಂದ ಸಂಪೂರ್ಣ ಹೂವು ಹಣ್ಣು ಸಿಂಗಾರದ ಅಲಂಕಾರ ಮಾಡುತ್ತಿದ್ದವರು ಮೊಗವೀರ ಮತ್ತು ಬಿಲ್ಲವ ಯುವಕರು. ಆದರೆ ಹಿಂದಿನ ಹದಿನೈದು ವರ್ಷಗಳಿಂದ ಈ ಮೊಗವೀರ ಮತ್ತು ಬಿಲ್ಲವ ಯುವಕರನ್ನು ಹೊರದೂಡಿ ಈಗ ಸಂಪೂರ್ಣ ಅಲಂಕಾರದ ಕೆಲಸ ವೈದಿಕರೇ ವಹಿಸಿಕೊಂಡಿದ್ದಾರೆ. ಇದರಿಂದ ಮೊಗವೀರ-ಬಿಲ್ಲವರ ಧಾರ್ಮಿಕ ಭಾವನೆಗಳಿಗೆ ನೋವಾಗಿಲ್ಲವೇ?

ಸುಮಾರು 30 ವರ್ಷಗಳ ಹಿಂದೆ ಒಬ್ಬ ಬಿಲ್ಲವ ಜಾತಿಯ ಉದ್ಯಮಿ ಇಲ್ಲಿ ಸಾವಿರಾರು ರೂಪಾಯಿ ಕೊಟ್ಟು ಢಕ್ಕೆಬಲಿ ಹರಕೆ ಹೊತ್ತಿದ್ದರೂ ಅವನನ್ನು ಆವರಣದ ಒಳಗೆ ಬಿಡದೇ ಕೇವಲ ಬ್ರಾಹ್ಮಣರೇ ಅವನ ಪರವಾಗಿ ಹರಕೆ ತೀರಿಸಿದರು. ಅದರ ಮರುದಿನವೇ ಅದೇ ಆವರಣದ ಒಳಗಿದ್ದ ಮರಕ್ಕೆ ನೇತಾಡಿ ಯಾರೋ ಒಬ್ಬ ಅನಾಮಿಕ ಆತ್ಮಹತ್ಯೆ ಮಾಡಿಕೊಂಡು ಇಡೀ ಬ್ರಹ್ಮಸ್ಥಾನ ಮೈಲಿಗೆಯಾಯಿತು. ಆದರೆ ಆ ಹೆಣ ಮರದಿಂದ ಇಳಿಸಿ ಆ ಜಾಗ ಸ್ವಚ್ಛಗೊಳಿಸಲು ಕೆಳಜಾತಿಯವರೇ ಬೇಕಾಯಿತು. ಈ ದೈವೀ ಆದೇಶವನ್ನು ಅರ್ಥಮಾಡಿಕೊಂಡ ಅಲ್ಲಿಯ ಬ್ರಾಹ್ಮಣರು ಮರುದಿನದಿಂದಲೇ ಹಿಂದುಳಿದ ಬಿಲ್ಲವ ಜಾತಿಯವರನ್ನು ಆವರಣದ ಒಳಗೆ ಬರಲು ಬಿಡುತ್ತಿದ್ದಾರೆ. ಅಲ್ಲಿಯ ದೈವೀಶಕ್ತಿಯೇ ಬ್ರಾಹ್ಮಣರಿಗೆ ಜಾತಿಭೇದ ಮಾಡದಂತೆ ಈ ರೀತಿ ಪರೋಕ್ಷವಾಗಿ ಎಚ್ಚರಿಕೆ ಕೊಟ್ಟಿದ್ದರೂ ಬೇರೆ ಪವಿತ್ರ ಕ್ಷೇತ್ರಗಳಲ್ಲಿ ಇಂದಿಗೂ ವೈದಿಕರ ಬಾಲ ಡೊಂಕೇ ಆಗಿದೆ.

ಪಡುಬಿದ್ರಿ ಬ್ರಹ್ಮಸ್ಥಾನದಂತೆ ಈ ಪುತ್ತೂರು ಮಹಾಲಿಂಗೇಶ್ವರ ದೇವರು ಸಹಾ ನಿಜವಾಗಿ ಕಾರ್ಣಿಕದ ದೇವರಾಗಿದ್ದರೆ ಈಗ ಮುಸ್ಲಿಂ ಜಿಲ್ಲಾಧಿಕಾರಿಯ ಹೆಸರಿನ ಬಗ್ಗೆ ಕಿತಾಪತಿ ಮಾಡುತ್ತಿರುವ ಕೇಸರಿಪಡೆಗಳಿಗೆ ಕೆಡುಕು ಕಾದಿರುವುದು ಖಂಡಿತ ಎಂದು ಆಸ್ತಿಕರ ಅಂಬೋಣ.

ಕರಾವಳಿಯ ಯಾವುದೇ ಹಿಂದೂ ಧಾರ್ಮಿಕ ಸಮಾರಂಭದಲ್ಲೂ ಗರ್ನಾಲು (ತೋಟೆ) ಸಿಡಿಸುವ ಗುತ್ತಿಗೆದಾರರು ನೂರಕ್ಕೆ ನೂರು ಮುಸ್ಲಿಮರು. ಮೂಲತಃ ಈ ಮುಸ್ಲಿಮರ ಹಿರಿಯರು ಟಿಪ್ಪು ಸುಲ್ತಾನನ ಸೈನ್ಯದಲ್ಲಿ ಫಿರಂಗಿಯ ಸಿಡಿಮದ್ದು ತಯಾರಿಸುವ ಮತ್ತು ಯುದ್ಧದಲ್ಲಿ ಫಿರಂಗಿ (ತೋಫ್) ಸಿಡಿಸಿ ವೈರಿಗಳನ್ನು ಸದೆಬಡಿಯುವ ವೀರ ತುರ್ಕಿ ಸೈನಿಕರಾಗಿದ್ದರು. ಟಿಪ್ಪುವಿನ ಮರಣಾನಂತರ ಅತಂತ್ರರಾದ ಈ ತೋಫ್-ಸೈನಿಕರು ಜೀವನ ನಿರ್ವಹಣೆಗಾಗಿ ತಮ್ಮ ವಂಶ ಪರಂಪರಾ ಕೌಶಲ್ಯವನ್ನು ಬಳಸಿಕೊಂಡು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗರ್ನಾಲು ಸಿಡಿಸುವ ಕೆಲಸ ಮಾಡತೊಡಗಿದರು. ಟಿಪ್ಪುವನ್ನು ವಿಪರೀತ ದ್ವೇಷಿಸುವ ಹಿಂದೂತ್ವವಾದಿಗಳೇ ಇಂದು ಆ ಟಿಪ್ಪುವಿನ ತುರ್ಕಿ ಸೈನಿಕರ ವಂಶದವರನ್ನೇ ಆಶ್ರಯಿಸಬೇಕಾಗಿ ಬಂದಿರುವುದು ವಿಧಿಯಾಟ.

ತುಳುವರು ನಂಬುವ ಆಲಿ ಭೂತವೆಂಬುದು ಮುಸ್ಲಿಂ ಭೂತ. ಅದರಂತೆ ಬೊಬ್ಬರ್ಯ ಭೂತ ಸಹ ಮುಸ್ಲಿಂ ದೈವ (ಬೊಬ್ಬ ಬ್ಯಾರಿಯೇ ಜನರ ಬಾಯಲ್ಲಿ ಬೊಬ್ಬರ್ಯ ಆಗಿರುವುದು. ಬೊಬ್ಬರ್ಯನ ತಂದೆ ಮುಸ್ಲಿಂ ಆಗಿದ್ದು ತಾಯಿ ಮಾತ್ರ ಮೇಲ್ವರ್ಗದ ಹಿಂದೂ ಬಂಟರ ಜಾತಿಯವಳು). ಮೊಗವೀರರು ಈ ಮುಸ್ಲಿಂ ಭೂತವನ್ನು ಅಪಾರವಾಗಿ ನಂಬುತ್ತಾರೆ. ಆದರೆ ಈಗ ವೈದಿಕರು ಈ ಬೊಬ್ಬರ್ಯ ಎಂಬ ಹೆಸರನ್ನು ಬರ್ಬರಿಕಾ ಅಥವಾ ಬರ್ಬರೇಶ್ವರ ಎಂದು ಬದಲಿಸಿದ್ದಾರೆ. ಕನ್ನಡ-ಹಿಂದಿಯಲ್ಲಿ 'ಬರ್ಬರ' ಎಂದರೆ ಅನಾಗರಿಕ ದುಷ್ಟ ಎಂಬ ಅರ್ಥ ಇದೆ. ಇದರಿಂದ ಮೊಗವೀರರ ಧಾರ್ಮಿಕ ಭಾವನೆಗಳಿಗೆ ನೋವಾಗುವುದಿಲ್ಲವೇ?

ಮಂಗಳೂರಿನ ಕದ್ರಿ ಮತ್ತು ಕಟೀಲು ಕ್ಷೇತ್ರ ಸೇರಿದಂತೆ ಕರಾವಳಿಯ ಅನೇಕ ವೈದಿಕ ಕ್ಷೇತ್ರಗಳು ಮೂಲತಃ ಜೈನ ಅಥವಾ ಬೌದ್ಧ ಯಕ್ಷ-ಯಕ್ಷಿ ಸಾನಿಧ್ಯಗಳಾಗಿದ್ದವು. ಇವನ್ನು ವೈದಿಕರು ಬಲಾತ್ಕಾರದಿಂದ ವಶಪಡಿಸಿಕೊಂಡು ಹಿಂದೂ ಕ್ಷೇತ್ರಗಳನ್ನಾಗಿ ಪರಿವರ್ತಿಸಿದ್ದಾರೆ. ಇದರಿಂದ ಜೈನ-ಬೌದ್ಧರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿಲ್ಲವೇ? ಹಿಂದೂತ್ವವಾದಿಗಳ ಧಾರ್ಮಿಕ ಭಾವನೆ ಎನ್ನುವುದು ಕೇವಲ ದೇವಸ್ಥಾನದ ಆಮಂತ್ರಣ ಪತ್ರಿಕೆಗೆ ಮಾತ್ರ ಸೀಮಿತವೇ? ಒಟ್ಟಾರೆ ಆರ್.ಬಿ. ಶೇಣವರು ಹೇಳಿರುವಂತೆ ಅಮಿತ್ ಶಾನ ಆಣತಿಯಂತೆ ದೇಶದೆಲ್ಲೆಡೆ ಅಲ್ಲಲ್ಲಿಯ ಮುಸ್ಲಿಮರ ವಿರುದ್ಧ ಸ್ಥಳೀಯ ಸಂಗತಿಗಳ ದುರ್ಲಾಭ ಪಡೆದು ಏನಾದರೊಂದು ದ್ವೇಷಪೂರ್ಣ ಕಿತಾಪತಿ ನಡೆಸುತ್ತಲೇ ಇರಬೇಕು ಎಂಬ ಕೇಸರಿ ಸಂಘಟನೆಗಳ ಗುಪ್ತ ಅಜೆಂಡಾ ಇರುವಂತಿದೆ.

- ಗಿರೀಶ್ ಟಿ ಶೆಟ್ಟಿ, ಮುಲ್ಕಿ

ಜೈ ಅಂದರೆ ಹೊಟ್ಟೆ ತುಂಬಲ್ಲ

ಕೇವಲ 'ಭಾರತ ಮಾತಾಕಿ ಜೈ' ಅಂತ ಕೂಗಾಡೋದ್ರಿಂದ ನಮ್ಮ ಮನೆಯ ತಾಯಿಯ (ಭಾರತ ಮಾತೆಯ) ಹಸಿವು ನೀಗಲ್ಲ. ಭಾರತಮಾತಾಕಿ ಜೈ ಎನ್ನುವ ಘೋಷಣೆಯ ಸದ್ದಲ್ಲಿ ಭಾರತಮಾತೆಯ ಹಸಿವಿನ ಆಕ್ರಂದನ ನಮ್ಮ ಕಿವಿಗೆ ಕೇಳೋ ಛಾನ್ಸ್ ಕಮ್ಮಿಯಾಗದೆ ಇರಲಿ. ಭಾರತಮಾತೆ ಉಂಡು ತೃಪ್ತಿಯಾದಾಗ ಆಕೆಗೆ ಜೈ ಎಂದರೆ ಆಕೆಗೂ ಖುಷಿ. ಇಲ್ಲಾಂದ್ರೆ ತೊಟ್ಟಿಲಲ್ಲಿ ಹಸಿದುಕೊಂಡು ನರಕಯಾತನೆ ಪಡ್ತಾ ಇರೊ ಮಗುವಿನ ಮುಂದೆ ದುಬಾರಿ ಆಟಿಕೆ ಹಿಡಿದು ನಿಂತ ಖುಷಿಯಿಂದ ನಾವು ಕುಣಿತಾ ಲಾಲಿ ಹಾಡಿದಂತಿರುತ್ತೆ.

ಭಾರತದ ಬಾರ್ಡರ್‌ಗೆ ಜೀವ, ಭಾವ ಇರಲ್ಲ; ಕೇವಲ ತಂತಿಬೇಲಿ ಇರುತ್ತೆ. ಆದ್ರೆ ಭಾರತದೊಳಗಿನ ಬಾಡಿಗಳಿಗೆ ಜೀವ, ಹಸಿವು, ಕಣ್ಣೀರು, ಬಡತನ, ಆಕ್ರಂದನಗಳೆಂಬ ಭಾವಗಳಿರುತ್ತವೆ. ಅದಕ್ಕೆ ಸಾವಿರಾರು ಕಾರಣಗಳೂ ಇರ್ತವೆ.

ಅಂತಹ ಭಾರತಮಾತೆಯ ಆಕ್ರಂದನ, ಕಾರಣ ಗ್ರಹಿಸಿ, ಮಿಡಿಯುವವರೆಲ್ಲರೂ ಭಾರತಮಾತೆಯ ಮಕ್ಕಳಾಗಲು ಅರ್ಹರಿರುತ್ತಾರೆ.

ಭಾರತಮಾತಾಕಿ ಜೈ ಎನ್ನೋದು ಫ್ಯಾಶನ್ ಆಗದೆ, ಸಮಸ್ಯೆಗಳಿಗೆ ಸ್ಪಂದಿಸುವ, ಮಿಡಿಯುವ ಆಕ್ಷನ್ ಆಗಬೇಕು.


-ಪ್ರಶಾಂತ್ ದಾನಪ್ಪ, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ **SMS** ಕಳುಹಿಸಬಹುದು.

ನೈಜ ಘಟನೆಯ 'ಹಾಫ್ ಮೆಂಟಲ್'

ಸ್ಯಾಂಡಲ್‌ವುಡ್‌ನಲ್ಲಿ ಸದ್ಯ 'ಹಾಫ್ ಮೆಂಟಲ್' ಚಿತ್ರದ ಪ್ರೊಮೋ ಸಖತ್ ಸದ್ದು ಮಾಡುತ್ತಿದೆ. ನೈಜ ಘಟನೆಯನ್ನು ಸಿನಿಮಾ ಆಗಿಸಿರುವ ನಿರ್ದೇಶಕ ಲಕ್ಷ್ಮಿ ದಿನೇಶ್, ಈ ಚಿತ್ರದ ಬಗ್ಗೆ ಅತೀವ ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಬಹುತೇಕ ಹೊಸಬರ ಚಿತ್ರಗಳೇ ಗೆಲ್ಲುತ್ತಿವೆ. ಹೀಗಾಗಿಯೇ ಹೊಸತಂಡದ ಬಗ್ಗೆ ಸ್ಯಾಂಡಲ್‌ವುಡ್ ಭರವಸೆ ಇಟ್ಟುಕೊಂಡಿದೆ. ಇಂತಹ ಭರವಸೆಯ ನಿರ್ದೇಶಕರಲ್ಲಿ ಲಕ್ಷ್ಮಿ ದಿನೇಶ್ ಕೂಡ ಒಬ್ಬರು. ಇವರ ನಿರ್ದೇಶನದ 'ಹಾಫ್ ಮೆಂಟಲ್' ಚಿತ್ರದ ಟೀಸರ್ ಒಂದು ವರ್ಷದ ಹಿಂದೆಯೇ ಸುದ್ದಿ ಮಾಡಿತ್ತು. ಅದರಲ್ಲೂ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಸದ್ಯ ಅದರ ಹಾಡು ಮತ್ತು ಪ್ರೊಮೋ ಕೂಡ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಅವರ ಕನಸಿನ 'ಹಾಫ್ ಮೆಂಟಲ್' ಚಿತ್ರದ ಬಗ್ಗೆ ನಿರ್ದೇಶಕರು ಮನಬಿಚ್ಚಿ ಮಾತಾಡಿದ್ದಾರೆ.



** ನಿಮ್ಮ ಚೊಚ್ಚಲು ಚಿತ್ರಕ್ಕೆ ನೆಗೆಟಿವ್ ಧ್ವನಿ ಹೊರಟಿರುವ ಶೀರ್ಷಿಕೆಯನ್ನು ಯಾಕೆ ಇಟ್ಟದ್ದೀರಿ?*

ಏನೇ ಮಾಡಿದರೂ ಅದು ಹೊಸದಾಗಿ ಇರಲಿ ಅನ್ನುವುದು ನನ್ನ ಅಭ್ಯಾಸ. ಹೀಗಾಗಿಯೇ 'ಹಾಫ್ ಮೆಂಟಲ್' ಅನ್ನುವ ಶೀರ್ಷಿಕೆ ಇಡಬೇಕಾಯಿತು. ಇಂಥದ್ದೊಂದು ಟೈಟಲ್ ಇಡಲು ಕಾರಣ ಏನು ಅಂತ ಸಿನಿಮಾದಲ್ಲೇ ನೋಡಿದರೆ ಚೆಂದ. ನಾನು ಈ ಚಿತ್ರಕ್ಕೆ ಇಟ್ಟಿರುವ ಶೀರ್ಷಿಕೆಗೂ ಚಿತ್ರದೊಳಗಿನ ಕತೆಗೂ ಸಂಬಂಧವಿದೆ. ಹೀಗಾಗಿ ಇಂಥದ್ದೊಂದು ನಿರ್ಧಾರ ತೆಗೆದುಕೊಂಡೆ.

** ನಿಮ್ಮ ಚಿತ್ರ ನೈಜ ಘಟನೆಯನ್ನು ಆಧರಿಸಿದ ಚಿತ್ರ ಎಂದು ಹೇಳಿಕೊಂಡಿದ್ದೀರಿ. ಎಲ್ಲಿ ಈ ಘಟನೆ ನಡೆದದ್ದು?*

ಇಲ್ಲಿಯವರೆಗೂ ಈ ವಿಷಯವನ್ನು ನಾನು ಯಾರಿಗೂ ಹೇಳಿರಲಿಲ್ಲ. ನೈಜ ಘಟನೆ ಅಂದಾಕ್ಷಣ ಸುಳ್ಳು ಹೇಳುತ್ತಿದ್ದಾರೆ ಅನ್ನುವ ಮಾತು ಇದೆ. ಹೀಗಾಗಿ ಸುಮ್ಮನೆ ಇದ್ದೆವು. ಈಗ ಹೇಳುವ ಕಾಲ ಬಂದಿದೆ ಅಂದುಕೊಳ್ಳುತ್ತೇನೆ. ನಾಲ್ಕು ವರ್ಷಗಳ ಹಿಂದೆ ನನ್ನ ಕಣ್ಣೆದುರಲ್ಲೇ ಆದ ಘಟನೆ ಅದು. ಅದು ಮಂಡ್ಯ ಜಿಲ್ಲೆಯ ಚನ್ನಪಟ್ಟಣದಲ್ಲಿ ನಡೆದದ್ದು. ಆ ಘಟನೆಯನ್ನು ತೆಗೆದುಕೊಂಡು, ಅದಕ್ಕೆ ನನ್ನದೇ ಆದ ರೀತಿಯಲ್ಲಿ ಚಿತ್ರಕತೆ ಬರೆದುಕೊಂಡೆ. ಸ್ಕ್ರಿಪ್ಟ್ ಮಾಡಲು ನಾನು ಐದು ತಿಂಗಳು ತೆಗೆದುಕೊಂಡೆ.

** ಈ ಸಿನಿಮಾದ ಮೂಲಕ ಏನನ್ನು ಹೇಳುವುದಕ್ಕೆ ಹೊರಟಿದ್ದೀರಿ?*

ಪ್ರೀತಿಯೊಳಗಿನ ಭಾವನೆಯನ್ನು ಸಿನಿಮಾದಲ್ಲಿ ಹಿಡಿದಿಡುವುದು ಕಷ್ಟ. ಅದನ್ನು ತೆರೆಯ ಮೇಲೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಪ್ರೀತಿ ಯಾವಾಗಲೂ ಪರಿಶುದ್ಧ. ಅದನ್ನು ಹೇಗೆ ತಲುಪಬೇಕು ಅನ್ನುವ ಸೂಕ್ಷ್ಮ ಅಂಶ ಕೂಡ ಸಿನಿಮಾದಲ್ಲಿದೆ. ಪ್ರೀತಿಯ ಮುಂದೆ ಏನೂ ಇಲ್ಲ ಅನ್ನುವ ಸಂದೇಶ ಕೂಡ ಚಿತ್ರದಲ್ಲಿದೆ. ಹೀಗಾಗಿ ಈ ಚಿತ್ರವನ್ನು ಪ್ರೇಮಿಗಳಿಗೆ ಅರ್ಪಿಸುತ್ತಿದ್ದೇವೆ.

** ಯಾಕೆ ನಿಮ್ಮ ಸಿನಿಮಾವನ್ನು ಪ್ರೇಕ್ಷಕರು ನೋಡಬೇಕು ಅಂತ ಹೇಳುತ್ತೀರಿ?*

ನೈಜ ಘಟನೆಯ ಚಿತ್ರ ಅಂದಾಕ್ಷಣ, ಇಲ್ಲಿ ಮನರಂಜನೆಯ ಅಂಶಗಳೇ ಇರುವುದಿಲ್ಲ ಎಂದು ಭಾವಿಸಬೇಕಿಲ್ಲ. ಈ ಹೊತ್ತಿನ ಪ್ರೇಕ್ಷಕರಿಗೆ ಏನು ಬೇಕೋ ಎಲ್ಲವನ್ನೂ ಕೊಟ್ಟಿದ್ದೇವೆ. ಸುಂದರವಾದ ತಾಣಗಳಲ್ಲಿ ಶೂಟ್ ಮಾಡಿದ್ದೇವೆ. ಈಗಾಲೇ ಬಿ.ಜೆ.ಭರತ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಡುಗಳು ಹಿಟ್ ಆಗಿವೆ. ಅದರಲ್ಲೂ ಜೀವಹಾನಿಯಾಗುವ ಮುನ್ನ ಮತ್ತು ಗೋಡೆಯ ಮೇಲೂ ನಿನ್ನ ಹೆಸರು ಎಂಬ ಎರಡು ಹಾಡುಗಳು ಸೂಪರ್ ಹಿಟ್ ಗೀತೆಗಳ ಸಾಲಲ್ಲಿ ಕಾಣಿಸಿಕೊಂಡಿವೆ. ಪ್ರೊಮೋ ನೋಡಿಯೇ ಅದೆಷ್ಟೊ ಗೆಳೆಯರು ತಾವೇ ಸಿನಿಮಾವನ್ನು ಪ್ರಮೋಟ್ ಮಾಡುತ್ತಿದ್ದಾರೆ. ಹೀಗಾಗಿ ಸಿನಿಮಾದ ಬಗ್ಗೆ ನನಗಂತೂ ಸಖತ್ ನಂಬಿಕೆ ಇದೆ.

** ನಿಮ್ಮ ಸಿನಿಮಾದ ನಾಯಕ ಮತ್ತು ನಾಯಕಿಯ ಅಭಿನಯದ ಬಗ್ಗೆ ಹೇಳಿ?*

ಚಿತ್ರಕ್ಕೆ ಸಂದೀಪ್ ನಾಯಕ. ಹೊಸ ಹುಡುಗ. ತುಂಬಾ ಚೆನ್ನಾಗಿಯೇ ಅಭಿನಯಿಸಿದ್ದಾರೆ. ಯಾವ ಕ್ಯಾರೆಕ್ಟರ್ ಅನ್ನು ಅವರು ಪ್ಲೇ ಮಾಡುತ್ತಿದ್ದಾರೋ ಅದಕ್ಕೆ ಜೀವ ತುಂಬಿದ್ದಾರೆ. ಅಲ್ಲದೇ ನಾಯಕಿ ಸೋನು ಗೌಡ. 'ಇಂತಿ ನಿನ್ನ ಪ್ರೀತಿಯ', 'ಕಿರಗೂರಿನ ಗಯ್ಯಾಳಿಗಳು' ಸೇರಿದಂತೆ ಅನೇಕ ಚಿತ್ರಗಳಲ್ಲಿ ಇವರು ನಟಿಸಿದ್ದಾರೆ. ಇಲ್ಲಿ ವಿಭಿನ್ನ ರೀತಿಯ ಪಾತ್ರ ನಿರ್ವಹಿಸಿದ್ದಾರೆ. ಇವರ ಬದುಕಿಗೂ ಮತ್ತು ಸಂಗೀತಕ್ಕೂ ವಿಶೇಷವಾದ ಸಂಬಂಧವಿದೆ. ಹೀಗಾಗಿ ಸೋನು ಪಾತ್ರವನ್ನು ಎಲ್ಲರೂ ಇಷ್ಟ ಪಡುತ್ತಾರೆ.

** ಸಿನಿಮಾ ಆಗಿದ್ದು ಹೇಗೆ? ಹೊಸಬರಿಗೆ ಇಲ್ಲಿ ಪ್ರೋತ್ಸಾಹ ಇದೆಯಾ?*

ಕತೆ, ಹಾಡು ಎಲ್ಲವೂ ನಮ್ಮ ಹತ್ತಿರ ರೆಡಿ ಇತ್ತು. ಆದರೆ, ನಿರ್ಮಾಪಕರು ಇರಲಿಲ್ಲ. ಆಗ ಸಿಕ್ಕವರು ಶಶಿಕುಮಾರ್. ಅವರಿಗೆ ಹಾಡು ಮತ್ತು ಕತೆಯ ಬಗ್ಗೆ ಹೇಳಿದೆ. ಒಂದು ದಿನ ಭೇಟಿ ಮಾಡಲು ಹೇಳಿದರು. ಭೇಟಿಯಾದಾಗ ಅವರ ಜತೆ ಸಹೋದರ ದಿಲೀಪ್ ಕುಮಾರ್ ಮತ್ತು ಅವರ ಸ್ನೇಹಿತ ಮಂಜುನಾಥ್ ಇದ್ದರು. ಮೂವರಿಗೆ ಈವರೆಗೂ ಮಾಡಿದ ಕೆಲಸದ ಬಗ್ಗೆ ಹೇಳಿದೆ. ತುಂಬಾ ಇಂಪ್ರೆಸ್ ಆಗಿ ಸಿನಿಮಾ ನಿರ್ಮಾಣ ಮಾಡಲು ಮುಂದೆ ಬಂದರು. ಅನಂತರ ಸಿನಿಮಾ ಶೂಟಿಂಗ್‌ಗೆ ಮುಂದಾದೆವು. ಹೊಸಬರಿಗೆ ಪ್ರೋತ್ಸಾಹವಿದೆ. ಟ್ಯಾಲೆಂಟ್ ಇದ್ದರೆ ಖಂಡಿತಾ ಗುರುತಿಸುತ್ತಾರೆ.

** ಯಾವಾಗ ಸಿನಿಮಾ ಬಿಡುಗಡೆ?*

ಏಪ್ರಿಲ್ 1ರಂದು ರಿಲೀಸ್ ಮಾಡುವ ಪ್ಲಾನ್ ಮಾಡಿದ್ದೇವೆ. ಪ್ರೊಮೋ ನೋಡಿದ ಥಿಯೇಟರ್ ಮಾಲೀಕರು ಮತ್ತು ವಿತರಕರು ಮುಂದೆ ಬಂದು ಸಿನಿಮಾ ಬಿಡುಗಡೆ ಮಾಡುತ್ತಿದ್ದಾರೆ. ಹೀಗಾಗಿ ನಿಜವಾಗಿಯೂ ಖುಷಿ ಆಗುತ್ತಿದೆ. ನಮ್ಮದು ಹೊಸ ತಂಡವಾದರೂ, ಸಿಗುತ್ತಿರುವ ಪ್ರೋತ್ಸಾಹಕ್ಕೆ ನಾವು ಋಣಿಯಾಗಿರುತ್ತೇವೆ. ಅಲ್ಲದೇ ಪ್ರೇಕ್ಷಕರು ಕೂಡ ಈ ಚಿತ್ರವನ್ನು ಗೆಲ್ಲಿಸುತ್ತಾರೆ ಅನ್ನುವ ನಂಬಿಕೆ ನನಗಿದೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/-

ಸಿನಿಮಾ ರಂಗಕ್ಕೆ ರಾಧಿಕಾ ಗುಡ್‌ಬೈ

'ಲಕ್ಕಿ' ಸಿನಿಮಾದ ಮೂಲಕ ಮತ್ತೆ ಸಿನಿಮಾ ರಂಗಕ್ಕೆ ಕಾಲಿಟ್ಟಿದ್ದ ರಾಧಿಕಾ ಕುಮಾರಸ್ವಾಮಿಗೆ ಕೊನೆಗೂ ಲಕ್ ಸಿಗಲಿಲ್ಲ. ಹೀಗಾಗಿಯೇ ಮತ್ತೆ ಸಿನಿಮಾ ರಂಗವನ್ನು ತೊರೆಯುವ ಮಾತುಗಳನ್ನು ಆಡಿದ್ದಾರೆ. ಐದು ಕೋಟಿಗೂ ಹೆಚ್ಚು ಹಣ ಹೂಡಿ 'ಲಕ್ಕಿ' ಸಿನಿಮಾ ನಿರ್ಮಾಣ ಮಾಡಿದ್ದ ಇವರು, ಆನಂತರ 'ಸ್ವೀಟಿ' ಕೈಗೆತ್ತಿಕೊಂಡಿದ್ದರು. ಈ ಚಿತ್ರದಲ್ಲಿ ಇವರೇ ನಾಯಕಿ. ಹೀಗಾಗಿ ಬರೋಬ್ಬರಿ ಏಳು ಕೋಟಿ ಖರ್ಚಾಗಿತ್ತು. ಗಲ್ಲಾಪೆಟ್ಟಿಗೆಯಲ್ಲಿ ಸಿನಿಮಾ ಕಮಾಯಿ ಮಾಡದೇ ಇದ್ದರೂ, ಗ್ಲಾಮರ್ ಲುಕ್‌ನಿಂದಾಗಿ ರಾಧಿಕಾ ಹೃದಯ ಗೆದ್ದಿದ್ದರು. ನಂತರ ಒಪ್ಪಿಕೊಂಡಿದ್ದೇ 'ನಮಗಾಗಿ' ಚಿತ್ರ. 'ನಿಮಗಾಗಿ' ಸಿನಿಮಾದಲ್ಲಿ ಒಂದಾಗಿದ್ದ ರಾಧಿಕಾ ಮತ್ತು ವಿಜಯ ರಾಘವೇಂದ್ರ 'ನಮಗಾಗಿ' ಚಿತ್ರಕ್ಕಾಗಿ ಒಂದಾದರು. ಇದೇ ಇವರ ಕೊನೆಯ ಚಿತ್ರವಾಗಲಿದೆಯಂತೆ. ಶೂಟಿಂಗ್ ಮುಗಿಸಿಕೊಟ್ಟು ಚಿತ್ರರಂಗಕ್ಕೆ ವಿದಾಯ ಹೇಳಲಿದ್ದಾರೆ ಅನ್ನುವುದು ರಾಧಿಕಾರ ಆಪ್ತರು ಹೇಳುವ ಮಾತು. ರಾಧಿಕಾ ಸಿನಿಮಾ ರಂಗ ಬಿಡುವುದಕ್ಕೆ ಮತ್ತೊಂದು ಕಾರಣವಿದೆಯಂತೆ. ಕುಮಾರಸ್ವಾಮಿ ಪುತ್ರ ನಿಖಿಲ್ ಗೌಡ ಹೀರೋ ಆಗಿ ಸ್ಯಾಂಡಲ್‌ವುಡ್ ಪ್ರವೇಶ ಮಾಡುತ್ತಿದ್ದಾರೆ. ನಿಖಿಲ್‌ಗಾಗಿ ಚಿತ್ರರಂಗ ತೊರೆಯುವುದು ಅನಿವಾರ್ಯವಾಗಿದ್ದೆಯಂತೆ. ನಿಖಿಲ್ ಗೌಡ ಮತ್ತು ಕುಮಾರಸ್ವಾಮಿ ಮೈಸೂರಿನಲ್ಲಿ ಬೀಡುಬಿಟ್ಟಿದ್ದರೆ, ರಾಧಿಕಾ ಮಂಗಳೂರಿನಲ್ಲಿ ವಾಸವಾಗಿದ್ದಾರೆ ಅನ್ನುವ ಮಾತು ಕೇಳಿಬರುತ್ತಿದೆ. ಹೀಗಾಗಿಯೇ ಯಾವುದೇ ಸಿನಿಮಾ ರಂಗದಲ್ಲೂ ಸ್ವೀಟಿ ಭಾಗವಹಿಸುತ್ತಿಲ್ಲ. ಮಾಧ್ಯಮಗಳ ಮುಂದೆ ಒಂದು ಮಾತೂ ಕೂಡ ಆಡುತ್ತಿಲ್ಲ.



ಕಾದಂಬರಿ ಆಧರಿಸಿದ ಚಿತ್ರದಲ್ಲಿ ಜುಗಾರಿ ಅವಿನಾಶ್

'ಲಾಸ್ಟ್ ಬಸ್' ಸಿನಿಮಾ ಖ್ಯಾತಿಯ ಜುಗಾರಿ ಅವಿನಾಶ್ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಚಿತ್ರಕ್ಕೆ 'ಊಟಿ' ಎಂದು ಹೆಸರಿಡಲಾಗಿದ್ದು, ಇದು ಕಾದಂಬರಿಯನ್ನು ಆಧರಿಸಿ ಸಿನಿಮಾ ಅನ್ನುವುದು ವಿಶೇ... 1991-92ರಲ್ಲಿ ನಡೆದ ಕಾವೇರಿ ಗಲಭೆಯ ಹಿನ್ನೆಲೆಯನ್ನಿಟ್ಟುಕೊಂಡು ಪತ್ರಕರ್ತ, ಲೇಖಕ ... ಕಷ್ಣಮೂರ್ತಿ ಚಮರಂ 'ಪ್ರೀತಿಯ ಆರಸಿ' ಎಂಬ ಕಾದಂಬರಿಯನ್ನು ಬರೆದಿದ್ದರು. ಈ ಕಾದಂಬರಿಯ... ಸಿನಿಮಾ ಮಾಡುತ್ತಿದ್ದಾರೆ ನಿರ್ಮಾಪಕ ಮೋಹನ್ ಕುಮಾರ್. ಚಿತ್ರದಲ್ಲಿ ಚಾಮರಾಜನಗರದ ವಿಶಿಷ್ಟ ಶೈಲಿಯ ಭಾಷೆ ಬಳಕೆಯಾಗಿದೆ. ಪ್ರಕೃತಿಯ ಸಿರಿವಂತಿಕೆಯಲ್ಲಿ ಅರಳುವ ಪ್ರೇಮಕಥಾನಕ ಮತ್ತು ಕಾವೇರಿ ಗಲಭೆಯಲ್ಲಿ ಅದು ನಲುಗುವ ವಿಷಾದವೇ ಚಿತ್ರದ ಜೀವಾಳವಂತೆ. ಚಾಮರಾಜನಗರ ಭಾಗದ ಭಾಷೆಯ ಸೊಗಡನ್ನು ಇದೇ ಮೊದಲ ಬಾರಿಗೆ ಸಿನಿಮಾದಲ್ಲಿ ಬಳಸಿದ್ದಾರೆ ನಿರ್ದೇಶಕರು. ಕಾದಂಬರಿಕಾರರೇ ಮಾತುಗಳನ್ನು ಹೆಣೆದದ್ದು ಮತ್ತೊಂದು ವಿಶೇಷ.

ಚಿತ್ರದಲ್ಲಿ ಇಬ್ಬರು ನಾಯಕರು. ಜುಗಾರಿ ಅವಿನಾಶ್ ಜತೆ ನಿಖಿಲ್ ಎಂಬ ಹೊಸ ಹುಡುಗ ಕೂಡಾ ನಟಿಸಿದ್ದಾರೆ. ಎರಡು ಕಾಲಘಟ್ಟದಲ್ಲಿ ಈ ಇಬ್ಬರೂ ನಟರು ಕಾಣಿಸಿಕೊಳ್ಳುವುದು ಮತ್ತೊಂದು ವಿಶೇಷ.



ನಿರ್ಮಾಪಕನ ಬೆನ್ನಿಗೆ ನಿಂತ ಸೋನು

'ಹಾಫ್ ಮೆಂಟಲ್' ಸಿನಿಮಾ ನಿರ್ಮಾಣ ಮಾಡಿ, ಆತ್ಮಹತ್ಯೆಗೆ ಯತ್ನಿಸಿದ್ದ ನಿರ್ಮಾಪಕ ಶಶಿಕುಮಾರ್‌ರ ಸಹಾಯಕ್ಕೆ ನಿಂತಿದ್ದಾರೆ ನಟಿ ಸೋನು ಗೌಡ. ಈ ಚಿತ್ರಕ್ಕೆ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ನಿರ್ಮಾಪಕರು, ಚಿತ್ರ ರಿಲೀಸ್ ಆಗುತ್ತಿಲ್ಲ ಅನ್ನುವ ನೋವಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದರು. ಸಕಾಲಕ್ಕೆ ಚಿಕಿತ್ಸೆ ಸಿಕ್ಕಿದ್ದರಿಂದ ಶಶಿಕುಮಾರ್ ಪ್ರಾಣಾಪಾಯದಿಂದ ಪಾರಾಗಿದ್ದರು. ನಿರ್ಮಾಪಕರ ಕಷ್ಟ ನೋಡಲಾಗದೇ, ಸೋನು ಗೌಡ ಈ ಚಿತ್ರದ ರಿಲೀಸ್‌ಗಾಗಿ ಸಹಾಯ ಮಾಡುತ್ತಿದ್ದಾರೆ. ಅಲ್ಲದೇ ತಾವು ಈ ಚಿತ್ರಕ್ಕಾಗಿ ಪಡೆದ ಸಂಭಾವನೆಯನ್ನು ನಿರ್ಮಾಪಕರಿಗೆ ಮರಳಿಸಿದ್ದಾರೆ.

"ಹಾಫ್ ಮೆಂಟಲ್' ಒಳ್ಳೆಯ ಸಿನಿಮಾ. ಚಿತ್ರವೂ ಚೆನ್ನಾಗಿ ಮೂಡಿ ಬಂದಿದೆ. ಹಲವು ಕನಸು ಕಟ್ಟಿರುವ ತಂಡವೇ ಸಿನಿಮಾಗಾಗಿ ಕೆಲಸ ಮಾಡಿದೆ. ಹೀಗಾಗಿ ಇಂತಹ ಚಿತ್ರಗಳು ಡಬ್ಬಾದಲ್ಲೇ ಉಳಿಯಬಾರದು. ಹೀಗಾಗಿ ನಾನು ಇಂತಹ ತೀರ್ಮಾನಕ್ಕೆ ಬಂದೆ. ಈ ಸಿನಿಮಾದಿಂದ ನನಗೂ ಕೂಡ ಬ್ರೇಕ್ ಸಿಗಬಹುದು" ಅಂತಾರೆ ಸೋನು. ಲಕ್ಕಿ ದಿನೇಶ್ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಚಿತ್ರವು ನೈಜ ಘಟನೆಯನ್ನು ಆಧರಿಸಿದ ಚಿತ್ರ. ಚೆನ್ನಪಟ್ಟಣದಲ್ಲಿ ನಡೆದ ಘಟನೆಗೆ ಕಾಲ್ಪನಿಗೆ ಬಣ್ಣ ಕಟ್ಟಿ ಸಿನಿಮಾ ಮಾಡಿದ್ದಾರೆ ನಿರ್ದೇಶಕರು. ಲಕ್ಕಿ ದಿನೇಶ್ ಅವರ ಚೊಚ್ಚಲು ಚಿತ್ರ ಇದಾಗಿದ್ದರೂ, ವಿಭಿನ್ನವಾಗಿ ಮೂಡಿ ಬಂದಿದೆ. ಅಲ್ಲದೇ ಈಗಾಗಲೇ ಹಾಡಿನಿಂದಾಗಿ ಕುತೂಹಲ ಮೂಡಿಸಿದೆ. ದುಡ್ಡು ಕೊಟ್ಟರೆ ಮಾತ್ರ ಶೂಟಿಂಗ್‌ಗೆ ಬರುತ್ತೇನೆ ಅನ್ನುವ ನಟನಟಿಯರ ಮಧ್ಯೆ ಸೋನು ವಿಭಿನ್ನವಾಗಿ ನಿಂತಿದ್ದಾರೆ. ನಿರ್ಮಾಪಕರ ಬೆನ್ನಿಗೆ ನಿಲ್ಲುವ ಮೂಲಕ ಮಾದರಿ ನಟಿ ಅನಿಸಿದ್ದಾರೆ.

ರವಿಯ ಮತ್ತೊಂದು ಭೂಗತ ಚಿತ್ರ

ನಿರ್ದೇಶಕ ರವಿ ಶ್ರೀವತ್ಸ ಮತ್ತೊಂದು ರೌಡಿಸಂ ಹಿನ್ನೆಲೆ ಚಿತ್ರವನ್ನು ಕೈಗೆತ್ತಿಕೊಂಡಿದ್ದಾ... ಚಿತ್ರಕ್ಕೆ 'ಭೂಗತ ಪುಟಗಳಲ್ಲಿ' ಎನ್ನುವ ಶೀರ್ಷಿಕೆ ಇಟ್ಟು ಕುತೂಹಲ ಮೂಡಿಸಿದ್ದಾ... ಅಂದಹಾಗೆ ಈ ಚಿತ್ರವನ್ನು ಆಕಾಂಕ್ಷಾ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸು... ವೀರ್ ಮತ್ತು ಶಿವ ಪ್ರದೀಪ್ ನಿರ್ಮಿಸುತ್ತಿದ್ದಾರೆ. ಚಿನ್ನ ಮತ್ತು ಮನೋಹರ... ಸಂಗೀತ ನಿರ್ದೇಶನದಲ್ಲಿ ಹಾಡುಗಳು ಮೂಡಿ ಬರಲಿವೆ. ನಿರ್ದೇಶಕರೇ ಚಿತ್ರ... ಸಂಭಾಷಣೆ ಒದಗಿಸಿದ್ದು ಮತ್ತೊಂದು ವಿಶೇಷ. ಕಳೆದ ವಾರವಷ್ಟೇ ಬಸವನಗುಡಿ... ದೊಡ್ಡಗಣಪತಿ ದೇವಸ್ಥಾನದಲ್ಲಿ ಈ ಚಿತ್ರದ ಸ್ಕ್ರಿಪ್ಟ್ ಪೂಜೆ ನೆರವೇರಿದೆ. ಇ... ತಿಂಗಳ 28ರಿಂದ 30ರ ತನಕ ಗಾಂಧಿನಗರದಲ್ಲಿ 'ಭೂಗತ ಪುಟಗಳಲ್ಲಿ' ಚಿ... ಆಡಿಷನ್ ನಡೆಸಲಾಗುತ್ತಿದ್ದು, ಬಹುತೇಕ ರಂಗಭೂಮಿ ಹಿನ್ನೆಲೆ ಇರುವ ಕಲಾವಿದರನ್ನೇ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಜೂನ್ ತಿಂಗಳಿನಿಂದ ಶೂಟಿಂಗ್ ಆರಂಭಿಸಲಿರುವ ಚಿತ್ರದಲ್ಲಿ ತಾರಾ, ಸುಷ್ಮಾ ವೀರ್, ಯಮುನಾ ಶ್ರೀನಿಧಿ, ವಿಕ್ಟರಿ ವಾಸು, ಉಮೇಶ್ ಬಣಕಾರ್, ಮಾಸ್ಟರ್ ಆನಂದ್ ಮುಂತಾದ ಕಲಾವಿದರು ನಟಿಸಲಿದ್ದಾರೆ.





ಜೂಮ್‌ಗೆ ಜೀವ ಬಂತು

ಎರಡೂವರೆ ವರ್ಷದ ಹಿಂದೆಯೇ ಶೂಟಿಂಗ್ ಆದ ಗಣೇಶ್ ನಟನೆಯ 'ಜೂಮ್' ಚಿತ್ರಕ್ಕೆ ಜೀವ ಬಂದಿದೆ. ಪ್ರಶಾಂತ್ ರಾಜ್ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬಂದಿದ್ದು, ಇದೇ ಮೊದಲ ಬಾರಿಗೆ ಗಣೇಶ್ ವಿಭಿನ್ನ ಸ್ಟೈಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೇ ರಾಧಿಕಾ ಪಂಡಿತ್ ಕೂಡ 'ಜೂಮ್'ನಲ್ಲಿ ಸಖತ್ ಗ್ಲಾಮರ್ ಪಾತ್ರ ನಿರ್ವಹಿಸಿದ್ದಾರೆ. ಪಾತ್ರಕ್ಕಾಗಿಯೇ ಅವರು ಹೇರ್‌ಸ್ಟೈಲ್ ಮತ್ತು ಕಾಸ್ಟ್ಯೂಮ್ ಕೂಡ ಬದಲಿಸಿದ್ದಾರೆ.

ಹಲವು ಕಾರಣಗಳಿಂದಾಗಿ ಈ ಸಿನಿಮಾ ಕುತೂಹಲ ಮೂಡಿಸಿತ್ತು. ಗಣೇಶ್ ಮತ್ತು ರಾಧಿಕಾ ಪಂಡಿತ್ ಇ... ಮೊದಲ ಬಾರಿಗೆ ತೆರೆ ಹಂಚಿಕೊಳ್ಳುತ್ತಿದ್ದಾರೆ. ಜತೆಗೆ ನ್ಯೂ ಸ್ಟೈಲ್‌ನಲ್ಲೇ ಈ ಜೋಡಿ ಕಾಣಿಸಿಕೊಂಡಿದೆ. ಅ... ಪ್ರೇಮಕತೆಯಾಗಿ ಚಿತ್ರ ಮೂಡಿಬಂದಿದ್ದು, ಬಹುತೇಕ ಶೂಟಿಂಗ್ ಮುಗಿಸಿದೆ. ಇದೇ ಶುಕ್ರವಾರ ಸಿನಿಮಾ... ಹಾಡುಗಳು ಲೋಕಾರ್ಪಣೆ ಆಗಲಿವೆ. ಅಂದುಕೊಂಡಂತೆ ನಡೆದರೆ, ಗಣೇಶ್ ಅವರ 'ಸ್ಟೈಲ್‌ಕಿಂಗ್' ಸಿನಿಮಾಕ್ಕೆ ಮುಂಚೆ ಈ ಚಿತ್ರ ಬಿಡುಗಡೆ ಆಗಲಿದೆ.

ಹೀಗಾಗಿಯೇ ತರಾತುರಿಯಲ್ಲಿ ಹಾಡುಗಳು ಬಿಡುಗಡೆ ಆಗುತ್ತಿವೆ. 'ಸ್ಟೈಲ್‌ಕಿಂಗ್' ಚಿತ್ರದ ನಿರ್ದೇಶಕ ಶೇಖರ್‌... ಗಣೇಶ್ ಅವರಿಗೂ ಗಲಾಟೆ ಆಗಿದೆ. ಹೀಗಾಗಿ 'ಸ್ಟೈಲ್‌ಕಿಂಗ್' ಪ್ರಚಾರಕ್ಕೆ ಗಣೇಶ್ ಹೋಗುವುದಿಲ್ಲ ಅನ್ನು... ಮಾತೂ ಕೇಳಿಬರುತ್ತಿದೆ. ಈ ಗ್ಯಾಪ್‌ನಲ್ಲಿ 'ಜೂಮ್' ಚಿತ್ರವನ್ನು ರಿಲೀಸ್ ಮಾಡುವ ಪ್ಲಾನ್ ಮಾಡಿದ್ದಾರೆ ನಿರ್ದೇ... ಪ್ರಶಾಂತ್ ರಾಜ್.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh79@...